10. ಎ.ಕ. VIII (ರೈಸ್ ಆವೃತ್ತಿ), ಪೀಠಿಕೆ, ಪು. 8
11. ವಿವರಗಳಿಗೆ ನೋಡಿ, ಡಾ. ಹಂಪನಾಗರಾಜಯ್ಯ, 'ದಿ ಲೇಟರ್ ಗಂಗಾಸ್: ಮಂಡಲಿ ಥೌಸೆಂಡ್', ಅಂಕಿತ ಪ್ರಕಾಶನ, ಬೆಂಗಳೂರು, 1999.
12. ವಿವರಗಳಿಗೆ ನೋಡಿ, ಕೆ.ಎನ್. ಚಿಟ್ನಿಸ್, 'ದಿ ಕೆಳದಿ ಪಾಲಿಟಿ', ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1974.

1548	ಭದ್ರಾ. 17	ಸ್ಯನಭಾಗ ನಾರಾಪ
1577–78	ಭದ್ರಾ. 16	ಸ್ಯನಭೋಗ ಯಂಕಂಣ
1585	ಶಿವ. 121	ಮಧುಲಿಂಗಭಟ್ಟ ಯಾನೆ ತಮ್ಮಯ್ಯಭಟ್ಟ
1587	ಶಿವ. 45	ಕೃಷ್ಣಕವಿ ಕಾಮಕೋಟಿ ; ಗಣಪಯನ ಮಗ ವೀರಣಮಹಾಚಾರ್ಯ
15–16ನೆಯ ಶತಮಾನ	ತೀರ್ಥ. 142	ಸೇನಭೋವ ಚಂನಪ
	ತೀರ್ಥ. 182	ತಿಪ್ಪಣ್ಣದೇವಗಳ ವೀರಣ್ಣ
16ನೆಯ ಶತಮಾನ	ತೀರ್ಥ. 28	ಹರಿಯಂಣ
	ತೀರ್ಥ. 128	ನಾಡಸೇನಬೋವ ಗಂಗಂಣ
1641	ಶಿವ. 90	ಕವಿ ಶಂಕರಭಟ್ಟ ಮತ್ತು ಕವಿ ತಿರುಮಲಭಟ್ಟ
1666	ತೀರ್ಥ. 210	ಸಚ್ಚಿದಾನಂದಮುನಿ
	ತೀರ್ಥ. 109	ಘಂಟೆಯಂಮ
	ಶಿವ. 99	ಪ್ರಭುರಮ
	ಶಿವ. 114	ಕಲ್ಲುಕುಟಿಗ ಕಾನಸಾಬಿನ ಮಗ ಬಡೆಕಾನ
17ನೆಯ ಶತಮಾನ	ಭದ್ರಾ. 15	ಬಿಳಿಕೆ ಮಲ್ಲಿಗೌಂಡ
1862	ತೀರ್ಥ 160	ತಿಮ್ಮಪ್ಪ

ಟಿಪ್ಪಣಿಗಳು

1. ಯಜ್ಞನಾರಾಯಣ ಉಡುಪ: ಪುರಾಣಭಾರತ ಕೋಶ, ಗೀತಾ ಬುಕ್‌ಹೌಸ್ 1975, ಪು. 496; ವೆಟ್ಟಂಮಣಿ: ಪುರಾಣಿಕ್ ಎನ್‌ಸೈಕ್ಲೋಪಿಡಿಯಾ, ಮೋತೀಲಾಲ್ ಬನಾರಸೀದಾಸ್. 1979ನೆಯ ಆವೃತ್ತಿ, ಪು. 226.
2. ಮಹಾಭಾರತ, ಸಂಪುಟ 2, ಆದಿಪರ್ವ ಅಧ್ಯಾಯ 95 ಭಾರತದರ್ಶನ ಪ್ರಕಾಶನ ತ್ಯಾಗರಾಜನಗರ, ಬೆಂಗಳೂರು 1973.
3. ಎಪಿಗ್ರಾಫಿಯ ಕರ್ನಾಟಿಕ (ಎಕ) ಸಂಪುಟ XII (ಪರಿಷ್ಕೃತ), ಕಡೂರು 169, 232; ಎ.ಕ ಸಂಪುಟ VII (ರೈಸ್ ಆವೃತ್ತಿ), ಚನ್ನಗಿರಿ 83; ಶಿಕಾರಿಪುರ 12, 45, 86 ಹಾಗೂ ಸಂಪುಟ VIII (ರೈಸ್ ಆವೃತ್ತಿ), ಸೊರಬ 183; ಸಂಪುಟ XI (ರೈಸ್ ಆವೃತ್ತಿ), ಹೊಳಲ್ಕೆರೆ – 7; ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ (ಎಸ್.ಐ.ಐ) ಸಂಪುಟ XVII, 152. ಶಾಸನಗಳಲ್ಲಿ ಗದಗನ್ನು ಜನಮೇಜಯದತ್ತಿ ಅಗ್ರಹಾರ ಎಂದು ಉಲ್ಲೇಖಿಸಿದೆ: ಎಸ್.ಐ.ಐ., ಸಂಪುಟ XV, 159 ಇತ್ಯಾದಿ.
4. ವಿವರಗಳಿಗೆ ನೋಡಿ, ಡಾ. ಬಾ.ರಾ. ಗೋಪಾಲ್, 'ಕಾರ್ಪಸ್ ಆಫ್ ಕದಂಬ ಇನ್‌ಸ್ಕ್ರಿಪ್ಷನ್ಸ್' (ಸಿಕೆಐ), ಸಂಪುಟ I, ಕದಂಬ ಇನ್‌ಸ್ಟಿಟ್ಯೂಟ್ ಆಫ್ ಕಲ್ಚುರಲ್ ಸ್ಟಡೀಸ್ (ರಿಜಿಸ್ಟರ್ಡ್), ಶಿರಸಿ (ಉತ್ತರ ಕನ್ನಡ), 1985
5. ಅದೇ, ಪು. LXXI, ದೇವವೃಂದದ ಮೂಡಗೆರೆ – 13ನೆಯ ಶಾಸನವು [ಎ.ಕ. XI (ಪರಿಷ್ಕೃತ)] 'ಪುಕ್ಕೊಳ್ಳಿ'ಯನ್ನು ಉಲ್ಲೇಖಿಸುವುದನ್ನು ಗಮನಿಸಬಹುದು. ಈ ಶಾಸನ ಸುಮಾರು ಕ್ರಿ.ಶ. 10ನೆಯ ಶತಮಾನದ್ದು.

1404	ತೀರ್ಥ. 205	ವೀರಂಣ್ಣ
	ತೀರ್ಥ. 250	ಕೋಬಲದ ದೇವರುಸೇನಬೋವ
	ತೀರ್ಥ. 251	ನಾಡಸೇನಬೋವ ವಿದ್ಯನಾಥದೇವ
	ತೀರ್ಥ. 243	ಹೊಂಬುಚ್ಚನಾಡ ಸೇನಬೋವ ಮಲ್ಲಪ್ಪ
1405	ತೀರ್ಥ. 15	ಸಿಂಗಂಣ
	ತೀರ್ಥ. 19	ಆರಗದ ಸೇನಬೋವ ಹರಿ[illegible] (?)
1405–06	ತೀರ್ಥ. 26	ನಾಡಸೇನಬೋವ ನರಹರಿದೇವ
1406	ತೀರ್ಥ. 199	ಮುದುವಂಕನಾಡ ಸೇನಬೋವ ಸಿಂಗಣ್ಣ
1407	ತೀರ್ಥ. 10	ಸೇನಬೋವ ಸಿಂಗಂಣ
	ತೀರ್ಥ. 200	ಮುದುವಂಕನಾಡ ಸೇನಬೋವ ಕೇಶವನಾಥ
	ತೀರ್ಥ. 244	ಸೇನಬೋವ ಬೊಂಮರಸ
1408	ತೀರ್ಥ. 252	ನಾಡಸೇನಬೋವ ನರಹರಿದೇವ
1409	ಶಿವ. 32	ವಿಠಂಣ
1413	ತೀರ್ಥ. 34	ನಾಡಸೇನಬೋವ ವೆಂಕಂಣ
1417	ತೀರ್ಥ. 212	ಸೇನಬೋವ ಬೊಂಮ್ಮರಸ
1421	ತೀರ್ಥ. 148	ಸಾಂತಳಿಗೆನಾಡ ಸೇನಬೋವ ನರಹರಿದೇವ
1424	ತೀರ್ಥ. 117	ಮಾದರಸ
1425	ತೀರ್ಥ. 235	ದೇವರಯ
1434	ತೀರ್ಥ. 214	ಮಣಪ ; ಅರಸಪಹೆಗಡೆ
1437	ತೀರ್ಥ. 123	ಮಲ್ಲರಸ
	ತೀರ್ಥ. 169	ಮುದ್ದಣಾಚಾರ್ಯನ ಮಗ ವೀರಣ
1440–41	ತೀರ್ಥ. 121	ಮಲ್ಲಂಣ
1456	ತೀರ್ಥ. 150	ಕೆಸರೆಯ ನರಹರಿದೇವ
1463	ತೀರ್ಥ. 155	ಮುದ್ದಣಾಚಾರ್ಯನ ಮಗ ವೀರಣ
14–15ನೆಯ ಶತಮಾನ	ತೀರ್ಥ. 33	ಸಾತಳಿಗೆಯನಾಡ ಸೇನಬೋವ
15ನೆಯ ಶತಮಾನ	ತೀರ್ಥ. 9	ಮುದುವಂಕನಾಡ ಸೇನಬೋವ ಸಿಂಗಂಣ
	ತೀರ್ಥ. 116	ಅಳಿಯ ಮಂಗಂಣ
	ತೀರ್ಥ. 144	ಸಿಂಗೇರಿಯ ದೇವರುಸೇನಬೋವನ ಮಗ ನಾಗಂಣ
	ತೀರ್ಥ. 189	ಹೊಂನಗೌಡಿಯ ಮಗ ಸೇನಬೋವ ಮಲ್ಲಪ್ಪ
	ತೀರ್ಥ. 192	ನಾಡಸೇನಬೋವ ಸೋವಂಣ
	ತೀರ್ಥ. 219	ಸೇನಬೋವ ಲಿಂಗಣ
	ತೀರ್ಥ. 238	ನರಹರಿದೇವನ ಮಗ ವಿಠಂಣ
	ತೀರ್ಥ. 241	ಸೇನಬೋವ ಬೊಂಮರಸ
1514	ಶಿವ. 89	ಸಭಾಪತಿ ; ಮಲ್ಲಣನ ಮಗ ವೀರಣಾಚಾರ್ಯ
1523	ಶಿವ. 81	ಸಭಾಪತಿ ; ಮಲ್ಲಣನ ಮಗ ವೀರಣಾಚಾರ್ಯ
1527	ಶಿವ. 47	ಸಭಾಪತಿ ; ಮಲ್ಲಣನ ಮಗ ವೀರಣಾಚಾರ್ಯ

ಪಡಿಯೇ ಸದ್ಬುಧಸೇವ್ಯನಪ್ಪ ಬುಧಚಂದ್ರ ಖ್ಯಾತಯೋಗೀಂದ್ರನೊಳ್ ॥ (ಶಿವ. 14)

ಬರ್ಮಿಸೆಟ್ಟಿ ಕಟ್ಟಿಸಿದ ಬಸದಿಯು 'ಭೂದೇವತೆ ಹೊತ್ತ ಹೊಂಗಳಶ'ದಂತೆ ಶೋಭಾಯಮಾನವಾಗಿತ್ತಂತೆ (ಶಿವ. 64) ಇಂಥ ವರ್ಣನೆಗಳನ್ನು ಅಲ್ಲಲ್ಲಿ ಕಾಣಬಹುದು. ಹೊಯ್ಸಳ ಅರಸರ ಸಾಧನೆಗಳ ವರ್ಣನೆ ಬೇರೆಡೆ ಬಂದಿರುವಂಥವೇ. ಚಂದಲದೇವಿ, ಕಂಚಲದೇವಿ, ಚಟ್ಟಲದೇವಿ ಮುಂತಾದ ಹಲವು ಸ್ತ್ರೀಯರನ್ನು ಶಾಸನಗಳು ಪ್ರಶಂಸಿಸುತ್ತವೆ. ಗಂಗಾನದಿಯು "ತರಳತರಂಗಭಂಗುರಸಮನ್ವಿತೆಯಂ ಝಷಚಕ್ರವಾಕಭಾಸುರಕಳಹಂಸಪೂರಿತ"ವಾಗಿತ್ತು ! ಮಾಧವನಿಗೆ ಸಿಂಹನಂದಿ ಆಚಾರ್ಯರು ನೀಡಿದ ಉಪದೇಶ ಮನೋಜ್ಞವಾಗಿದೆ (ಶಿವ. 14 ಮತ್ತು 68). ಶಿವ. 74ನೆಯ ಶಾಸನದಲ್ಲಿ ವಿಭುಗಂಗನು ಚಾಣಕ್ಯ, ಭಟ್ಟಿ, ಯೋಗಂಧರರನ್ನು ಮೀರಿಸುವ ಮಂತ್ರಜ್ಞನೆಂದು ಹೇಳಿದೆ. ಜೈನ ಮುನಿ ನೇಮಿದೇವ ಮನವನ್ನೂ ತನುವನ್ನೂ ನಿಯಂತ್ರಿಸಬಲ್ಲವನಾಗಿದ್ದನಂತೆ.

ಕೆಲವು ಸಾಲುಗಳು ನೇರವಾಗಿ ಮನಮುಟ್ಟುವಂಥವು. ನಲ್ಲಗುಣಕೆ ಮಚ್ಚರಮುಂಟೆ, ತನಗೆ ಪರಹಿತಮೆ ಹಿತ, ಕಿಚಿದಖಿಲಳವಡದಮನ, ಸುಪುತ್ರಃ ಕುಳದೀಪಕಃ, ಪಿರಿದಕ್ಕಾಸೆಗೆಯ್ವುಬುದ್ಧಿ, ಪರೋಪಕಾರಾರ್ತ್ಥಮಿದಂ ಶರೀರಂ (ಶಿವ. 59) ಪ್ರಕಾಸಯೆಲ್ಲವೂ ರನ್ನವೆ, ಹೊನ್ನಿಯವುಳ್ಳಡೇಂ ಜಗದೊಳೊರ್ವ್ವಳೆ ಭಾಗಿಯೆ (ಶಿವ. 68) ಇತ್ಯಾದಿ.

ಕವಿಗಳು, ಲಿಪಿಕಾರರು ಮತ್ತು ರೂವಾರಿಗಳು

ಶಾಸನಗಳನ್ನು ರಚಿಸಿದ ಕವಿಗಳು, ಅಕ್ಷರಗಳನ್ನು ಕಲ್ಲಿನ ಮೇಲೆ ಬರೆದ ಲಿಪಿಕಾರರು ಹಾಗೂ ಅವನ್ನು ಕಂಡರಿಸಿದ ರೂವಾರಿಗಳ ಹೆಸರುಗಳನ್ನು ಪ್ರಸ್ತುತ ಸಂಪುಟದ ಶಾಸನಗಳು ಉಲ್ಲೇಖಿಸುತ್ತವೆ. ಹಾಗಿದ್ದರೂ ಕೆಲವೊಮ್ಮೆ ಒಬ್ಬ ರಚನಕಾರ ಮತ್ತು ಒಬ್ಬ ಲೇಖಕರ ನಡುವಣ ವ್ಯತ್ಯಾಸವನ್ನು ಗುರುತಿಸುವುದು ಬಹಳ ಕಷ್ಟವಾಗುವುದುಂಟು. ಅನಂತರದ ಕಾಲದಲ್ಲಿ ಲೇಖಕರು, ವಿಶೇಷವಾಗಿ ಸೇನಬೋವರು ಸ್ವತಃ ಶಾಸನಗಳ ಕರಡನ್ನು ಸಿದ್ಧಪಡಿಸಿದರು. ಕವಿಗಳು, ಲಿಪಿಕಾರರು ಹಾಗೂ ರೂವಾರಿಗಳ ಹೆಸರುಗಳನ್ನು ಈ ಪಟ್ಟಿಯಲ್ಲಿ ನೋಡಬಹುದು ; ಶಾಸನಗಳು ಉಲ್ಲೇಖಿಸುವ ಕವಿ, ಶಿಲ್ಪಿಗಳ ಹೆಸರುಗಳೂ ಇಲ್ಲಿ ಸೇರಿವೆ.

ಕಾಲ (ಕ್ರಿ.ಶ.ದಲ್ಲಿ)	ಸಂಖ್ಯೆ	ಹೆಸರು
1085	ಶಿವ. 59	ಸನ್ಧಿವಿಗ್ರಹಿ ದಾಮರಾಜ; ಸಾನ್ತೋಜ ಹಾಗೂ ಪದ್ಮ
11–12ನೆಯ ಶತಮಾನ	ಶಿವ. 119	ಮಾಲೋಜ
1111	ಭದ್ರಾ. 39	ಸೇನಬೋವ ಬೋಗದೇವ, ಕನಕನಂದಿ ತ್ರೈವಿದ್ಯದೇವರ ಗುಡ್ಡ
1112	ಶಿವ. 7	ಕಲುಕುಟಿಗ ಕಾಳೋಜ
1167	ಶಿವ. 76	ಕಂಚಗಾರ ಬಸವೋಜ ; ಮಲ್ಲೋಜ
ಸು. 12–13ನೆಯ ಶತಮಾನ	ಶಿವ. 58	ಮಾಚೋಜ
1203	ಭದ್ರಾ. 33	ದಾವಂಣ ; ಮಲೋಜ
1320	ಶಿವ. 31	ಕವೀಶ್ವರ ಬ್ರಮ್ಮದೇವ
1379	ತೀರ್ಥ. 178	ನಾಡಸೇನಬೋವ ದೇವಪ್ಪ
1381	ಶಿವ. 113	ಸಾನಭವ ರಮಪ
1385	ತೀರ್ಥ. 253	ಹೊಂನ್ನಪ್ಪ
1394	ತೀರ್ಥ. 221	ಶಾಸನಾಚಾರ್ಯವರ್ಯ ನಾಗಿದೇವ, ಶಿಲ್ಪಿ
	ತೀರ್ಥ. 254	ಸೇನಬೋವ ಗಂಗಂಣ
14ನೆಯ ಶತಮಾನ	ತೀರ್ಥ. 147	ನಾಗಪಗಳ ಮಗ ಹೊಂನಪ
1401	ತೀರ್ಥ. 183	ನಾಡಸೇನಬೋವ ಸಿಂಗಣ್ಣ
1403	ತೀರ್ಥ. 249	ಲಖಿಣ್ಣ ; ಚೋಳದೇಶದ ದೇವಂಣ
1404	ತೀರ್ಥ. 137	ಮುದುವಂಕನಾಡ ಸೇನಬೋವ ಸಿಂಗಂಣ್ಣ
	ತೀರ್ಥ. 138	ಮುದುವಂಕನಾಡ ಸೇನಬೋವ ಸಿಂಗರ್ಸ; ವಿಠ್ಠ; ಸಿಂಗಣ್ಣ; ನಾಗರ್ಸ

ಸಾಹಿತ್ಯಿಕ ವಿಷಯಗಳು

ಪ್ರಸ್ತುತ ಸಂಪುಟದ ಬಹುಪಾಲು ಶಾಸನಗಳು ಕನ್ನಡ ಭಾಷೆ ಹಾಗೂ ಲಿಪಿಗಳಲ್ಲಿವೆ. ಕೆಲವು ತಾಮ್ರಶಾಸನಗಳು ಸಂಸ್ಕೃತಭಾಷೆ ಹಾಗೂ ನಾಗರಿ ಲಿಪಿಗಳಲ್ಲಿವೆ. ಶಿವ. 121 ತಿಗಳಾರಿ ಎಂದು ಕರೆದಿರುವ ಲಿಪಿಯಲ್ಲಿದೆ. ಶಿವ. 48ನೆಯ ಶಾಸನದಲ್ಲಿ ಬಳಸಿರುವ ಭಾಷೆ ಸಂಸ್ಕೃತ ಹಾಗೂ ಮರಾಠಿಗಳ ಮಿಶ್ರಣ. ಲಿಪಿಸ್ಖಾಲಿತ್ಯ, ಭಾಷಿಕ ಮತ್ತು ಛಂದಸ್ಸಿನ ಲೋಪದೋಷಗಳನ್ನು ಈ ಸಂಪುಟದ ಶಾಸನಪಾಠಗಳಲ್ಲಿ ಕಾಣಬಹುದು. ಗದ್ಯಶಾಸನಗಳೇ ಅಧಿಕ. ಸ್ಥಳನಾಮಗಳನ್ನು ಸಂಸ್ಕೃತಕ್ಕೆ ಪರಿವರ್ತಿಸುವ ಮನೋಭಾವವೂ ಕಂಡುಬರುತ್ತದೆ ; ಉದಾಹರಣೆಗೆ ಹುಣಸವಳ್ಳಿ ತಿಂತ್ರಿಣಿಪಳಿಯಾಗುತ್ತದೆ (ತೀರ್ಥ. 221).

ನಮ್ಮ ಗಮನ ಸೆಳೆಯುವ ಕೆಲವು ಪದ್ಯಗಳು ಈ ಸಂಪುಟದಲ್ಲಿವೆ. ಶಿವಕುಟುಂಬದ ಸುಂದರ ಚಿತ್ರವೊಂದು ಸಂಸ್ಕೃತ ಪದ್ಯವೊಂದರಲ್ಲಿ ದೊರೆಯುತ್ತದೆ (ತೀರ್ಥ. 155). ಇದನ್ನು ಸ್ಥೂಲವಾಗಿ ಹೀಗೆ ಅನುವಾದಿಸಬಹುದು : ಅಂಬೆಗಾಲಿಡುತ್ತಿರುವ ಬಾಲಗಣಪನು ಶಂಕರನ ಶಿರದ ಮೇಲಿನ ಬಾಲಚಂದ್ರನನ್ನು ಕಂಡು ತನ್ನದೇ ಇನ್ನೊಂದು ದಂತವೆಂದು ಭಾವಿಸಿ ಎಳೆಯಲು ಪ್ರಯತ್ನಿಸುತ್ತಿದ್ದಾನೆ ! ವಾತ್ಸಲ್ಯಭೂಮಿ ಏಕದಂತನು ಎನಿಸಿದ ಕಳೆದುಕೊಂಡ ದಂತದ ಬಗ್ಗೆ ತಂದೆಯ ಮೇಲೆ ಕಳ್ಳತನದ ಆರೋಪ ಹೊರಿಸುತ್ತಿದ್ದಾನೆ ! ಸ್ಮಿತವದನೆಯಾದ ಪಾರ್ವತಿಯು ಅವನನ್ನು ಪ್ರೋತ್ಸಾಹಿಸುತ್ತಿದ್ದಾಳೆ ! ಇಂಥ ಚಿತ್ರವನ್ನು ಉತ್ತಮ ಕಲಾವಿದನೊಬ್ಬ ಮಾತ್ರ ಮೂಡಿಸಬಲ್ಲ.

ಶಿವ. 59ನೆಯ ಶಾಸನವು ಗಂಗನೃಪನ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ :

ನುಡಿದುದೆ ನನ್ನಿ ಮಾಡಿದುದೆ ಶಾಸನಮಿತ್ತುದೆ ರಾಮರೇಸು ಮಾ
ರ್ಪ್ಡಿಡಿದುದೆ ವಜ್ರಲೇಪಮುಱದಿಱ್ದುದೆ ಮೃತ್ಯು ಪರೋಪಕಾರದೊಳ್ ।
ನಡೆದುದೆ ಬಟ್ಟೆ ಷಡ್ಗುಣಮೆ ಮೆಯ್ಯೆನೆ ಧರ್ಮ್ಮದೊಳೊಂದಿ ನಿನ್ನವೋಲ್
ನಡೆವ ನೃಪೇಂದ್ರನಾವನಖಿಳಾವನಿಯೊಳ್ಕಲಿಗಂಗಭೂಪತಿ ॥

ಇದರ ತಾತ್ಪರ್ಯ ಹೀಗೆ: "ಆತ ಮಾತನಾಡಿದ್ದು ಸತ್ಯ, ಮಾಡಿದ್ದು ನಿಯಮ, ಕೊಟ್ಟಿದ್ದು ರಾಮಬಾಣದಂತೆ (ಹಿಂದೆ ತೆಗೆದುಕೊಳ್ಳುವುದಲ್ಲ); ಬದಲಿಗೆ ಹಿಡಿದುದು ವಜ್ರಲೇಪ ; ಆತ ನಿಂತರೆ ಮೃತ್ಯುವೇ ; ಪರೋಪಕಾರಮಾಡಲು ನಡೆದದ್ದು ದಾರಿ ; ಒಳ್ಳೆಯ ಗುಣಗಳೇ ಆತನ ಕಾಯ. ಈ ಭೂಮಿಯಲ್ಲಿ ನಿನ್ನ ಹಾಗೆ ಧರ್ಮವನ್ನು ಅನುಸರಿಸುವ ದೊರೆ ಯಾರಿದ್ದಾರೆ ಕಲಿಗಂಗ ಭೂಪತಿಯೇ?"

ಜೈನ ಆಚಾರ್ಯ ಪ್ರಭಾಚಂದ್ರಸಿದ್ಧಾಂತದೇವರು ಉಭಯ ಭಾಷೆಗಳಲ್ಲಿ ಉತ್ತಮ ಕವಿಯಾಗಿದ್ದರಂತೆ (ಶಿವ. 64). ಬಾಚಲದೇವಿಯನ್ನು 'ನೃತ್ಯವಿದ್ಯಾಪ್ರಭಾವಪ್ರಭೂತನಿರ್ಮ್ಮಳಯಶೋವಿಭಾಸಿನಿ' ಹಾಗೂ ಪ್ರತಿಪಕ್ಷಗಾಯಕಾ ಗಾನಮಾನಪರಿಖಂಡನೆ' ಎಂದು ಬಣ್ಣಿಸಿದೆ (ಶಿವ. 7). ಶಿವ. 58ನೆಯ ಶಾಸನದ ಪ್ರಕಾರ ಸೊರಡೆ ಅಗ್ರಹಾರದ ಮಹಾಜನರು 'ಪ್ರಾಣಜಮಾದಿಸಕಳಗುಣಸಂಪನ್ನ'ರಾಗಿದ್ದವರು. ಶಿವ. 60ನೆಯ ಶಾಸನ ದಾಮರಾಜ ರಚಿಸಿದ 'ಸಾಸನಗಬ್ಬ'. ಗುಣನಂದಿದೇವರು 'ಶಬ್ದಬ್ರಹ್ಮ'ರಾಗಿದ್ದರಂತೆ (ಶಿವ. 10 ಮತ್ತು 14).

ಸಾವಂತ ಮಾರ ಧೀರೋದಾತ್ತನೂ ಕವಿಯೂ ಆಗಿದ್ದನಂತೆ. ಆತನ ಕಿವಿ ಕೇಳುತ್ತಿದ್ದುದು ಶ್ರುತಿಯನ್ನು, ಕಣ್ಣು ತೋರುತ್ತಿದ್ದುದು ದಯೆಯನ್ನು, ಮನದಲ್ಲಿ ಅಪ್ರತಿಮದಾಕ್ಷಿಣ್ಯ, ಮಾತು ಪ್ರೌಢವಾದ್ದು ಹಾಗೂ ಪರಾಕ್ರಮ ಪ್ರಶಂಸಾರ್ಹವಾದ್ದು (ಶ್ರುತಿ ಕರ್ನ ದಯೆ ನೇತ್ರವಪ್ರತಿಮ ದಾಕ್ಷಿಣ್ಯಂ ಮನ ಪ್ರಹುಢಿವಾಕುನುತ ಶೌರ್ಯಂ – ಶಿವ. 98).

ಪ್ರಭಾಚಂದ್ರಗುರುಗಳ ಈ ವರ್ಣನೆ ಸ್ವಾರಸ್ಯಕರವಾಗಿದೆ :

ಚತುರಾಸ್ಯಂ ಚತುರೋಕ್ತಿಯಿಂ ಪ್ರಭುತೆಯಿಂದೀಶಂ ಗುಣವ್ಯಾಪಕ
ಸ್ಥಿತಿಯಿಂ ವಿಷ್ಣು ಸುಬುದ್ಧಿವಿಸ್ತರತೆಯಿಂ ಬೌದ್ಧಂ ದಲೀ ಜೈನಪ ।
ಧೃತಿಯಿಂದಿರ್ದ್ದುಮಿದೇಂ ವಿಚಿತ್ರತರಮೋ ಚಾತುರ್ಯಮಾದೀ ಸಮು
ನ್ನತ ಸಿದ್ಧಾಂತ ವಿಭೂಷಣಂಗೆನಿಸಿದಂ ಶ್ರೀಮತ್ಪ್ರಭಾಚಂದ್ರಮಂ॥ (ಶಿವ. 14)

ಪ್ರಭಾಚಂದ್ರ ಶಿಷ್ಯರಾದ ಬುಧಚಂದ್ರರ ಬಣ್ಣನೆ ಇದು :

ನುಡಿಗಳ್ ಸತ್ಯಸುವರ್ಣ್ಣಭೂಷಣಗಣಂ ಚಿತ್ತಂ ಸುರತ್ನಂಗಳಂ
ಮಡಗಿಟ್ಟಿರ್ಪ್ಪ ಕರಂಡಕಂ ತನು ತಪಃ ಶ್ರೀಭಾಮಿನೀಭಾಸಿಯೆಂ।
ದಡೆ ದುಷ್ಕೀರ್ತ್ತಿಯನಾನ್ತ ಮತ್ತಿನ ಶಠದುರ್ಬ್ಬೋಧರಸ್ಪೃಶ್ಯರೇಂ

58. ಯೆರಡುದಂಡದ ಮಠ	ಬಸವಪ್ರಭುದೇವರಿಗೆ ಬಸವಪ್ಪನಾಯಕನಿಂದ ದಾನ	ತೀರ್ಥ. 111, ಕ್ರಿ.ಶ. 1707
59. ಯೆರಡುದಂಡದ ಮಠ	ಬಸವಪ್ರಭುದೇವರಿಗೆ ಬಸವಪ್ಪನಾಯಕನಿಂದ ದಾನ	ತೀರ್ಥ. 112, ಕ್ರಿ.ಶ. 1709
60. ಚಿಕ್ಕ ಮಯಿಸೆ	ಅಳವಿಂಡಿ ಕೆಂಚಸಿದ್ದೇವರ ಶಿಷ್ಯ ನಿರ್ವಾಣದೇವ ಕಟ್ಟಿಸಿದ್ದು	ತೀರ್ಥ. 113, ಕ್ರಿ.ಶ. 1719
61. ಮೊಡಸೂರು	ಕಪ್ಪಗಳಲೆ ಬಸವ	ತೀರ್ಥ. 161, ಕ್ರಿ.ಶ. 1633
62. ಸೀತೂರು	ಕೊಲ್ಲೂರಅಂಮನ ಹೆಸರಿನಲ್ಲಿ ಭಜನೆಸೂರಂಣ ಕಟ್ಟಿಸಿದ್ದು	ತೀರ್ಥ. 162, ಕ್ರಿ.ಶ. 1641
63. ಸಿಂಗನಬಿದಿರೆ	ಸೋಮಶೇಖರನಾಯಕನಿಂದ ದಾನ	ತೀರ್ಥ. 163, ಕ್ರಿ.ಶ. 1723
64. ಶಿವರಾಜಪುರ	ಶಿವಪ್ಪನಾಯಕನ ಹೆಸರಿನಲ್ಲಿ ಕಟ್ಟಿದ್ದು ; ಸೋಮಶೇಖರನಾಯಕನಿಂದ ದಾನ	ತೀರ್ಥ. 164, ಕ್ರಿ.ಶ. 1674
65. ಶಿವರಾಜಪುರ	ಶಿವಪ್ಪನಾಯಕನ ಹೆಸರಿನಲ್ಲಿ ಕಟ್ಟಿದ್ದು ; ಸೋಮಶೇಖರನಾಯಕನಿಂದ ದಾನ	ತೀರ್ಥ. 165, ಕ್ರಿ.ಶ. 1664
66. ಮಂಡಗದ್ದೆ	ಆದಣ	ತೀರ್ಥ. 166, ಕ್ರಿ.ಶ. 1723
67. ಶಿವರಾಜಪುರ	ಶಿವಪ್ಪನಾಯಕನ ಹೆಸರಿನಲ್ಲಿ ಕಟ್ಟಿದ್ದು ; ಬಸವಪ್ಪನಾಯಕನಿಂದ ದಾನ	ತೀರ್ಥ. 167, ಕ್ರಿ.ಶ. 1702
68. ಸೆಖರೆಸಿ	ಲೋಕಯನಿಂದ ಬಸವಲಿಂಗದೇವರಿಗೆ ದಾನ	ತೀರ್ಥ. 168, ಕ್ರಿ.ಶ. 1674
69. ಮಳಲಿ	ಶರಾಬುದಾರ ವೀರೈಯ್ಯನಿಂದ ನಾಗಾರ್ಜುನಸ್ವಾಮಿಗೆ ದಾನ	ತೀರ್ಥ. 174, ಕ್ರಿ.ಶ. 1672
70. ಮಳಲಿ	ದೊರೆ ವೀರಭದ್ರನಾಯಕನಿಂದ ನಾಗಾರ್ಜುನದೇವರಿಗೆ ಭೂವಿಕ್ರಯ	ತೀರ್ಥ. 203, ಕ್ರಿ.ಶ. 1641

ಕೆಂಚಪ್ಪನಾಯಕನು ಹೊನ್ನಾಳಿಮಠದ ಪಟ್ಟದ ಚೆನ್ನಬಸವರಾಜದೇವರಿಗೆ 'ಪುರವರ್ಗ ಉತ್ತಾರವಾಗಿ' ಬಸವರಾಜಪುರವೆಂಬ ಪ್ರತಿನಾಮವಿದ್ದ ಕೂಡಿಗ್ರಾಮವನ್ನು ದಾನವಿತ್ತ ವಿಷಯವನ್ನು ಕೂಡಿಯ ಶಿವ. 25ನೆಯ ಶಾಸನವು ತಿಳಿಸುತ್ತದೆ.

ಗುರು-ಆಚಾರ್ಯರು

ಸಮಾಜದಲ್ಲಿ ಎಲ್ಲ ಮತಧರ್ಮೀಯ ಯತಿಗಳಿಗೆ, ಆಚಾರ್ಯರಿಗೆ ಹಾಗೂ ಗುರುಗಳಿಗೆ ಗೌರವಾನ್ವಿತವಾದ ಸ್ಥಾನಮಾನವಿತ್ತು. ಆ ಜನರು ಅವರನ್ನು ಆರಾಧಿಸಿದರು ಮತ್ತು ಗೌರವದಿಂದ ಕಂಡರು. ಸಮೃದ್ಧ ಶಾಸನಪಾಠಗಳಿಂದ ಕೆಲವು ಬಿಡಿ ನಿದರ್ಶನಗಳನ್ನು ಆರಿಸಿ ಇಲ್ಲಿ ನೀಡಬಹುದಷ್ಟೇ. ಕೃಷ್ಣಾನಂದಸ್ವಾಮಿ ಎಂಬ ಗುರುಗಳು ಪರಮಹಂಸ ಪರಿವ್ರಾಜಕಾಚಾರ್ಯರೆನಿಸಿದ್ದರು ; ಅವರು 'ವಿದ್ಯಾವಿವೇಕ ವಿನಯಾರ್ಜವನ ವಾಕ್ಪಟುತ್ವ' ಉಳ್ಳ ಮಹಾತ್ಮರೆಂದು ಪರಿಚಿತರಾಗಿದ್ದರಂತೆ (ತೀರ್ಥ. 210). ತೀರ್ಥಮುತ್ತೂರು ಮಠದ ಶಂಕರಭಾರತೀಶ್ರೀಪಾದರು ಕೂಡ ಪರಮಹಂಸ ಪರಿವ್ರಾಜಕಾಚಾರ್ಯರಾಗಿದ್ದರು. ಹೀಗೆಯೇ ಖ್ಯಾತಿವೆತ್ತ ಗುರು-ಆಚಾರ್ಯರೆಂದರೆ ಜ್ಞಾನೇಂದ್ರಭಾರತಿ (ತೀರ್ಥ. 149, 246, 249 ಇತ್ಯಾದಿ), ನರಸಿಂಹಭಾರತಿ, ದೇವೇಂದ್ರಪುರಿಶ್ರೀಪಾದ (ತೀರ್ಥ. 152) ಹಾಗೂ ಇತರರು; ಸುಲಭತೀರ್ಥಶ್ರೀಪಾದ, ನೀರೇಜನಾಭತೀರ್ಥರು (ತೀರ್ಥ. 181) ವೈಷ್ಣವ ಗುರುಗಳು. ಗಂಗಾಧರಪುರಿಶ್ರೀಗಳು ಗಂಗಾಧರನಿಗೆ ಸರಿಸಮನಾಗಿದ್ದರಂತೆ (ತೀರ್ಥ. 118). ಅಮರೇಂದ್ರಪುರಿಶ್ರೀಗಳು 'ರಾಜಪೂಜಿತ'ರಾಗಿದ್ದರೆ ದೇವೇಂದ್ರಪುರಿ ಶ್ರೀಗಳು ಶಮ ಮತ್ತಿತರ ಗುಣಗಳ ಆಲಯವಾಗಿದ್ದರು. ಜೈನ ಆಚಾರ್ಯರಲ್ಲಿ ಪ್ರಭಾಚಂದ್ರರು 'ಜಂಗಮತೀರ್ಥ'ರೆನಿಸಿದ್ದರು (ಶಿವ. 64); ಗುಣನಂದಿ ಮುನಿಗಳು ಗುಣಿ, ಜಿನಮತರಕ್ಷಾಮಣಿ ಹಾಗೂ ಪಂಡಿತಚೂಡಾಮಣಿಗಳೆಂದು ಪ್ರಸಿದ್ಧರಾಗಿದ್ದರು. ತಾತ್ತ್ವಿಕಚರ್ಚೆಗಳಲ್ಲಿ ಎದುರಾಳಿಗಳನ್ನು ಗುಣಚಂದ್ರರು ಪರಾಭವಗೊಳಿಸಿದ್ದರು. ಮಾಘನಂದಿಆಚಾರ್ಯರನ್ನು ಮುನಿರಾಜರಾಜ ಮತ್ತು ಚಾರಿತ್ರಚಕ್ರೇಶ್ವರರೆಂದು ಬಣ್ಣಿಸಲಾಗಿದೆ.

30. ಕಂದಡಿಗನಮಾನಿ	ಮೇಳದಶಿವಲಿಂಗಿ	ತೀರ್ಥ. 80, ಕ್ರಿ.ಶ. 1672
31. ಬಿದಿರೂರಿಂದ ಕುಂಬಸಿಗೆ ಹೋಗುವ ಮಾರ್ಗದ ಜೆನಿ	ಹುಜೂರಮೇಳದ ಪುಟ್ಟತಾಯಿ ಜಂಬುಖಂಡಿ ಚೆಂನಿ	ತೀರ್ಥ. 82, ಕ್ರಿ.ಶ. 1671
32. ಮೂಡುಗೊಪ್ಪ	ಮರಿಯಪ್ಪನ ಮಗ ಶಾಂತವೀರಪ್ಪ	ತೀರ್ಥ. 83, ಕ್ರಿ.ಶ. 1711
33. ಕುಂಬುಸಿ	ಕೆಳದಿ ಚೆನ್ನಮ್ಮಾಜಿ	ತೀರ್ಥ. 84, ಕ್ರಿ.ಶ. 1674
34. ಪಟಗುಪೆ ಹೆದ್ದಾರಿಯಲ್ಲಿ ಕೆರೆಯ ಬಳಿ	ಹೊಳೆಯಂಮ	ತೀರ್ಥ. 85, ಕ್ರಿ.ಶ. 1669
35. ಪಟಗುಪೆ ಹೆದ್ದಾರಿಯಲ್ಲಿ ಅಸಗನಕೊಪ್ಪದ ಹೊಳೆಯ ಬಳಿ	ಮರೆಬೋವ	ತೀರ್ಥ. 86, ಕ್ರಿ.ಶ. 1670
36. ಕಕ್ಕಿನಕಾಲದ ಮಾರ್ಗದಲ್ಲಿ	ಭದ್ರಪ್ಪನಾಯಕನಿಂದ ದಾನ	ತೀರ್ಥ. 87, ಕ್ರಿ.ಶ. 1662
37. ಯೆಡೆಹಳ್ಳಿ	ಸೀಮೊಗೆ ಫಾಣದಾರ ಪುಟಣ	ತೀರ್ಥ. 88, ಕ್ರಿ.ಶ. 1677
38. ದುರ್ಗ	ತಿಂಮಣನಾಯಕ	ತೀರ್ಥ. 89, ಕ್ರಿ.ಶ. 1667
39. ಭುವನಗಿರಿದುರ್ಗ	ತಿಂಮಣನಾಯಕ	ತೀರ್ಥ. 90, ಕ್ರಿ.ಶ. 1702
40. ಕೂಡುವಳ್ಳಿ	ಶಿವಪ್ಪನಾಯಕನ ಹೆಸರಿನಲ್ಲಿ ನಾಗಮ್ಮಾಜಿ ಕಟ್ಟಿಸಿದ್ದು	ತೀರ್ಥ. 91, ಕ್ರಿ.ಶ. 1664
41. ಹೊಸಂಗಡಿ	ಪಸರದ ಚೆಂನಂಣ	ತೀರ್ಥ. 92, ಕ್ರಿ.ಶ. 1659
42. ---	ಗುರುಮಲ್ಲಿಕಾರ್ಜುನ ದೇವರಿಗೆ ಸದಾಶಿವನಾಯಕ ಕಟ್ಟಿಸಿಕೊಟ್ಟದ್ದು	ತೀರ್ಥ. 93, ಕ್ರಿ.ಶ. 1624
43. ಬಾರಕೂರು	ಕೆಳದಿ ವೆಂಕಟಪ್ಪನಾಯಕನಿಂದ ದಾನ	ತೀರ್ಥ. 94, ಕ್ರಿ.ಶ. 1623
44. ಕೆರೆಕೊಪ್ಪ	ಬನದಂಮ	ತೀರ್ಥ. 95, ಕ್ರಿ.ಶ. 1635
45. ಕಂದಡಿಗನಮಾನಿ	ಮೇಳದ ಶಿವಲಿಂಗಿಯಿಂದ ದಾನ	ತೀರ್ಥ. 96, ಕ್ರಿ.ಶ. 1662
46. ಆರಗ	ಸೋಮಶೇಖರನಾಯಕನಿಂದ ದಾನ	ತೀರ್ಥ. 97, ಕ್ರಿ.ಶ. 1664
47. ಕಾರಗಲ್ಲು	ಉದ್ದಾಬಸವಲಿಂಗದೇವ	ತೀರ್ಥ. 98, ಕ್ರಿ.ಶ. 1723
48. ಬಸರೂರು	ಕಪ್ಪಗಳಲೆ ಬಸವಂಣ	ತೀರ್ಥ. 99, ಕ್ರಿ.ಶ. 1641
49. ಆಗುಂಬೆ	ಚೆನ್ನಮ್ಮಾಜಿಯ ತಾಯಿ ಪಾರ್ವತಿ ಅಂಮ	ತೀರ್ಥ. 100, ಕ್ರಿ.ಶ. 1681
50. ತೀರ್ಥರಾಜಪುರ	ವೀರಂಮಾಜಿ	ತೀರ್ಥ. 102, ಕ್ರಿ.ಶ. 1709
51. ಕೋಟೇಶ್ವರ	ಪರಮೇಶ್ವರ ಅಂಮಾಜಿ	ತೀರ್ಥ. 103, ಕ್ರಿ.ಶ. 1664
52. ಯಿಕ್ಕೇರಿಯ ಹೊಸಪೇಠೆಮಠ	ವೀರಭದ್ರನಾಯಕನಿಂದ ಮಹಂತದೇವರಿಗೆ ದಾನ	ತೀರ್ಥ. 105, ಕ್ರಿ.ಶ. 1632
53. ಮಂಡಲಿಮುಳ್ಳಸೂಜಿಸ್ವಾಮಿಯವರ ಮಹಾಮಹತ್ತಿನ ಸಿಂಹಾಸನ	ಬಸವಪ್ಪನಾಯಕನಿಂದ ದಾನ	ತೀರ್ಥ. 106, ಕ್ರಿ.ಶ. 1709
54. ಬಿದಿರೂರು	ಸೋಮಶೇಖರನಾಯಕನಿಂದ ದಾನ	ತೀರ್ಥ. 107, ಕ್ರಿ.ಶ. 1664
55. ಯಿಕ್ಕೇರಿಯ ಭತ್ತದಪೇಠೆ	ವಿರುಪಂಣನಾಯಕರ ಮಗಳು ಮತ್ತು ಕೆಳದಿಯ ರಾಣಿ	ತೀರ್ಥ. 108, ಕ್ರಿ.ಶ. 1615
56. ಪಟಗುಪೆ ಹೆದ್ದಾರಿಯಲಿ ಕೆರೆಯಬಳಿ	ಹೊಳೆಯಂಮ್ಮ	ತೀರ್ಥ. 109, ಕ್ರಿ.ಶ. 1668
57. ಉಳುವೆ	ಲಿಂಗಂಮಾಜಿಯ ಹೆಸರಿನಲ್ಲಿ ಸೋಮಶೇಖರನಾಯಕ ಕಟ್ಟಿಸಿದ್ದು	ತೀರ್ಥ. 110, ಕ್ರಿ.ಶ. 1667

ಸ್ಥಳ	ಸಂಬಂಧಿತ ವ್ಯಕ್ತಿಗಳು	ಶಾಸನ ಸಂಖ್ಯೆ
1. ಕಡೆಕೊಪ್ಪ	ದಶಮುಖದ ಸಂಗನ ಬಸವರಾಜದೇವರ ಶಿಷ್ಯ ಸಿದಲಿಂಗದೇವ	ತೀರ್ಥ. 43, ಕ್ರಿ.ಶ. 1665
2. ಉಳುವೆ	ತಾಯಿ ಲಿಂಗಮ್ಮಾಜಿಯವರ ಹೆಸರಿನಲ್ಲಿ ಸೋಮಶೇಖರನಾಯಕ	ತೀರ್ಥ. 45, ಕ್ರಿ.ಶ. 1673
3. ತೀರ್ಥರಾಜಪುರ	ವೀರಮ್ಮಾಜಿ	ತೀರ್ಥ. 48, ಕ್ರಿ.ಶ. 1708
4. ಮೂಡಗೊಪ್ಪ	ಮರಿಯಪ್ಪನ ಮಗ ಶಾಂತವೀರಪ್ಪ	ತೀರ್ಥ. 49, ಕ್ರಿ.ಶ. 1711
5. ಕೊಡೂರು	ಬೊಕಸ್ತ ಸಿದಬಸವಯನ ಹೆಂಡತಿ ವೀರಮ್ಮ	ತೀರ್ಥ. 50, ಕ್ರಿ.ಶ. 1723
6. ಹುಲಿಕಲ್ಲು	ಸಿಂದಿಗೆ ಅತ್ತಿನೂರ ಸಂಗಪ್ಪಸೆಟ್ಟಿಯ ಮಗ ಚೆಂನ ಮಲ್ಲಿಸೆಟ್ಟಿ	ತೀರ್ಥ. 51, ಕ್ರಿ.ಶ. 1645
7. ಸುಂಣದ ಆಲೂರು (?)	ಪುರಾಣಸೆಟಿಯ ಶಾಂತಪ	ತೀರ್ಥ. 52, ಕ್ರಿ.ಶ. 1642
8. ಭುವನಗಿರಿದುರ್ಗದ ಆರಗದಪೇಠೆಯ ಸಮೀಪ	ದುರ್ಗದ ತಿಂಮಂಣ	ತೀರ್ಥ. 53, ಕ್ರಿ.ಶ. 1641
9. ಚಕೋಡು	ಕಪ್ಪಗಳಲೆ ಬಸವಂಣ	ತೀರ್ಥ. 54, ಕ್ರಿ.ಶ. 1641
10. ಮುಡುಬ	ಹಾರೊ ವೆಂಕಟಯ್ಯ	ತೀರ್ಥ. 55, ಕ್ರಿ.ಶ. 1641
11. ಮಳೆಯ ಕುದಿಹೇರಮಠ	ಶಿವಲಿಂಗದೇವರ ಶಿಷ್ಯ ಶಿವಲಿಂಗದೇವ	ತೀರ್ಥ. 56, ಕ್ರಿ.ಶ. 1641
12. ಭುವನಗಿರಿದುರ್ಗ	ದುರ್ಗದ ತಿಂಮಂಣ	ತೀರ್ಥ. 57, ಕ್ರಿ.ಶ. 1694
13. ಕೋಡೂರು	ಬೊಕ್ತ ಸಿದ್ಧಬಸವ್ವೆಯ್ಯನ ಹೆಂಡತಿ ವೀರಂಮ	ತೀರ್ಥ. 58, ಕ್ರಿ.ಶ. 1709
14. ಕಲಿಸೆಯಿಂದ ಅಂಬಲಿಗೊಳಕ್ಕೆ ಹೋಗುವ ಮಾರ್ಗದಲ್ಲಿ	ಚಿಕ್ಕಅರಮನೆ ಶಾಂತೈಯ್ಯ	ತೀರ್ಥ. 59, ಕ್ರಿ.ಶ. 1665
15. ಭುವನಗಿರಿದುರ್ಗದ ಭದ್ರಾಪುರ	ದುರ್ಗದ ತಿಂಮಂಣ	ತೀರ್ಥ. 60, ಕ್ರಿ.ಶ. 1642
16. ಯೆಡೆಹಳ್ಳಿ	ಅಪರಾದರ ಹವಾಲೆ ಚೆಂನಂಣನ ಮಗ ವೆಂಕಟಯ್ಯ	ತೀರ್ಥ. 61, ಕ್ರಿ.ಶ. 1669
17. ಭದ್ರಾಪುರ	ತಿಂಮಂಣನ ಮಗ ಸಿದಂಣ	ತೀರ್ಥ. 62, ಕ್ರಿ.ಶ. 1630
18. –––	ಕಪ್ಪಗಳಲೆ ಬಸವಪ್ಪ	ತೀರ್ಥ. 63, ಕ್ರಿ.ಶ. 1641
19. ಬಿದಿರೂರು	ಸೋಮಶೇಖರನಾಯಕನಿಂದ ದಾನ	ತೀರ್ಥ. 64, ಕ್ರಿ.ಶ. 1664
20. ಸಂಗಮೇಶ್ವರದ ಕೆರೆಯ ಬಳಿ	ಸಿದಲಿಂಗಂಣ	ತೀರ್ಥ. 65, ಕ್ರಿ.ಶ. 1642
21. ಸದಾಶಿವಸಾಗರ	ಉಡುಚಬೋವನ ಮಗ ಹೊಸೂರ ಬೋವ	ತೀರ್ಥ. 66, ಕ್ರಿ.ಶ. 1665
22. ಸದಾಶಿವಸಾಗರ	ಶ್ರೀರಂಗಪಟ್ಟಣದ ಹೊಳಿನಹಿರಿಯ ಹಂಪಯ್ಯ	ತೀರ್ಥ. 67, ಕ್ರಿ.ಶ. 1616
23. ಆರಗ	ಕದಳಿ ವೀರಶೆಟ್ಟಿ	ತೀರ್ಥ. 70, ಕ್ರಿ.ಶ. 1712
24. ಬಾವಿಕಯಿ ದಾಸನಗದೆ	ಗುರುಲಿಂಗದೇವರಿಗೆ ಕೊಟ್ಟ ಕ್ರಯದಾನ	ತೀರ್ಥ. 72, ಕ್ರಿ.ಶ. 1688
25. ಅಂಡಿಗೆ	ವೀರಭದ್ರನಾಯಕನ ಮಾವ ರೇವಂಣವಡೇರು	ತೀರ್ಥ. 73, ಕ್ರಿ.ಶ. 1635
26. ಸೋಮೇಶ್ವರ	ಸಿದ್ಧಂಮಾಜಿಯವರ ಹೆಸರಿನಲ್ಲಿ	ತೀರ್ಥ. 74, ಕ್ರಿ.ಶ. 1640
27. ಹೊಸಹಳ್ಳಿ	ಕೆಳದಿ ಚೆನ್ನಮ್ಮಾಜಿಯಿಂದ ದಾನ	ತೀರ್ಥ. 75, ಕ್ರಿ.ಶ. 1679
28. ಸಂಗಮೇಶ್ವರದ ಕೆರೆ ಸಮೀಪ	ಸಿದಲಿಂಗಣ	ತೀರ್ಥ. 77, ಕ್ರಿ.ಶ. 1624
29. ಬಿದಿರೂರಿಂದ ಕುಂಬಸಿಗೆ ಹೋಗುವ ಮಾರ್ಗದ ಜೆನಿ	ಕೆಳದಿ ಚೆನ್ನಮ್ಮಾಜಿಯಿಂದ ದಾನ	ತೀರ್ಥ. 79, ಕ್ರಿ.ಶ. 1673

ಶಾಸನದ ಪ್ರಕಾರ, ಶರಾಬುದಾರ ವೀರೈಯನು 500 ಗದ್ಯಾಣಗಳಿಗೆ ದೀವರಮಳಲಿ ಗ್ರಾಮವನ್ನು ಕೊಂಡು ಮಳಲಿ ಮಠದ ನಾಗಾರ್ಜುನಸ್ವಾಮಿಗಳಿಗೆ ದಾನನೀಡಿದನು.

ಹಿಂದಿನಕಾಲದಲ್ಲಿ ಕೆರೆಕಟ್ಟಿಸುವುದನ್ನು ಪುಣ್ಯದ ಕೆಲಸವೆಂದು ಪರಿಗಣಿಸಲಾಗಿತ್ತು. ಧಾರ್ಮಿಕ ಕೆಲಸದ ವೇಷ ಧರಿಸಿದ ಸಾಮಾಜಿಕ ಕೆಲಸವಾಗಿತ್ತು ಅದು. ಬಂಕಿಯಪುರಸೀಮೆಗೆ ಸೇರಿದ ದೊಡ್ಡೇರಿಯಲ್ಲಿ ನರಸಿಪುರದ ಕಲ್ಲಗೊಂಡಗೌಡನು ಹೊಸಕೆರೆಯೊಂದನ್ನು ಕಟ್ಟಿಸಿಕೊಟ್ಟನು. ರಾಘವ ತಿಮ್ಮರಸಯ್ಯನು ಆತನಿಗೆ ಕೆರೆಮಾನ್ಯವಾಗಿ ಎರಡು ಖಂಡುಗ ಭೂಮಿಯನ್ನು ನೀಡಿದನು (ಭದ್ರಾ. 15). ತುಂಗಭದ್ರಾತೀರದ ಹರಕೇರಿಯಲ್ಲಿ ಬ್ರಾಹ್ಮಣರ ವಾಸಕ್ಕಾಗಿ ಕೆಲವು ಮನೆಗಳನ್ನು ಮರಿಯಣ್ಣ ಎಂಬುವವನು ಕ್ರಿ.ಶ. 1714ರಲ್ಲಿ ಕಟ್ಟಿಸಿಕೊಟ್ಟನು ; ಹಾಗೆಯೇ ಅಗ್ರಹಾರಧರ್ಮವಾಗಿ ಕಾಶೀನಾಥಪುರವನ್ನು ದಾನವಿತ್ತನು (ಶಿವ. 15). ಹೀಗೆ ಮಾಡಲು ಆತ ಪ್ರಾಯಃ ಅಳಿಯ ನಿರ್ವಾಣೈಯನ ಅನುಮತಿಯನ್ನು ಪಡೆದುಕೊಂಡಿದ್ದನು.

ಚಟುಳಂಗ ಗ್ರಾಮವನ್ನು 'ಮಸೀಥಿಯ ಮಠಕ್ಕೆ' ದಾನ ಕೊಡಲಾಗಿತ್ತು (ಶಿವ. 54). ತೀರ್ಥ. 39 ಒಂದು ಅರಾಬಿಕ್ ಶಾಸನ ; ಅಲ್ಲಾಹ್‌ನನ್ನು ಬಣ್ಣಿಸುತ್ತದೆ. ಹಾಗೆಯೇ ಈ ಶಾಸನದಲ್ಲಿ ಅಬೂಬಕರ್, ಉಮರ್, ಉಸ್ಮಾನ್ ಮತ್ತು ಅಲಿ ಎಂಬ ಹೆಸರಿನ ನಾಲ್ವರು ಕಲೀಫರ ಉಲ್ಲೇಖವಿದೆ. ಎರಡು ತಾಮ್ರಶಾಸನಗಳು (ತೀರ್ಥ. 40 ಹಾಗೂ 41) ಕೆಳದಿ ಅರಸ ವೆಂಕಟಪ್ಪನಾಯಕನು ಕ್ರಿ.ಶ. 1622ರಲ್ಲಿ ಭುವನಗಿರಿದುರ್ಗದಲ್ಲಿ ಮಸೀದಿಯೊಂದನ್ನು ಕಟ್ಟಿಸಿಕೊಟ್ಟ ವಿಷಯವನ್ನು ಉಲ್ಲೇಖಿಸುತ್ತವೆ.

ತಿಮ್ಮಲಾಪುರದ ಕೆರೆಯಲ್ಲಿ ನೀರು 'ಪುರುಷಪ್ರಮಾಣ'ದಲ್ಲಿ ನಿಂತಿರಬೇಕಿತ್ತು ಮತ್ತು ಅದರ ಮೇಲೆ ಹಕ್ಕು ಇದ್ದುದು ತಿಮ್ಮಲಾಪುರ ಗ್ರಾಮಕ್ಕೆ (ಭದ್ರಾ. 14).

ತೀರ್ಥ. 115ನೆಯ ಶಾಸನದ ಪ್ರಕಾರ, ಸಂಗಮದೇವ ಮತ್ತು ಸಂಗಾಯಿ ಅವರು ಹಸುಕರು, ಗೃಹೋಪಕರಣಗಳೂ ಸೇರಿದಂತೆ ತಮ್ಮೆಲ್ಲ ಸೊತ್ತನ್ನು ಶ್ರೀಗಿರಿಯ ಮಲ್ಲಿಕಾರ್ಜುನದೇವರಿಗೆ ಸಮರ್ಪಿಸಿದರು. ಅವರು ಬಹುಪ್ರಾಮಾಣಿಕತೆಯಿಂದ ಈ ದಾನ ನೀಡಿದರು (ವಂಚನೆಯಿಲ್ಲದೆ ಧಾರೆಯನೆಱದು). ಅವರು 'ತಾವಿದ್ದ ಗ್ರುಹವನ್ನು ಕೊಟ್ಟರು' – ಬ್ರಾಹ್ಮಣರ ಊಟ–ನಿದ್ರೆಗಳಿಗಾಗಿ (ತೀರ್ಥ. 116). ಹತ್ತು ಜನ ಜಂಗಮರ ಊಟೋಪಚಾರಕ್ಕಾಗಿ 'ಅಟ್ಟಿಕ್ಕುವ' ಇಬ್ಬರು ಬ್ರಾಹ್ಮಣರು ಮತ್ತು ಎಂಜಲು ತೆಗೆಯುವ ಶೂದ್ರ ಸ್ತ್ರೀಯೊಬ್ಬಳನ್ನು ನೇಮಿಸಿಕೊಳ್ಳಲಾಯಿತು. ಈ ಆದರ್ಶದಂಪತಿಗಳದು 'ಆಡುವ ಮಾತು ಒಂದು, ಮಾಡುವ ಕಾರ್ಯ ಒಂದು'. ಇಂಥ ತ್ಯಾಗ ನಿಜಕ್ಕೂ ಅಪರೂಪ.

ತೀರ್ಥ. 20ನೆಯ ಶಾಸನದಲ್ಲಿ ಸೇವಗೆಯ ಪಾಯಸ, ಕಣಿಕದ ಯಣ್ಣೆಘಾರಿಗೆ, ಒತ್ತಾವಿಕೆ ಮುಂತಾದ ಖಾದ್ಯಪದಾರ್ಥಗಳ ಉಲ್ಲೇಖವಿದ್ದರೆ ತೀರ್ಥ. 32ನೆಯ ಶಾಸನದಲ್ಲಿ ಖಜ್ಜಾಯದ ಪ್ರಸ್ತಾಪವಿದೆ. ಜನ್ನಂಗಿ, ಕನ್ನಂಗಿ, ಬೊಕ್ಕಸ, ಬೊಂದಿಯ ಮುಂತಾದ ಸ್ಥಳನಾಮಗಳೂ ಚಿತ್ರಗುಪ್ತಭಟ್ಟ, ಕುಕ್ಕೆಭಟ್ಟ, ಕೊಲ್ಲೂರಭಟ್ಟ, ದೂರ್ವಾಸಭಟ್ಟ, ಶಿರಗೊಟ್ಟಪಹೆಗ್ಗಡೆ, ಕೃಪಾಕೂಪಾರ ನೇತ್ರ ಮುಂತಾದ ವ್ಯಕ್ತಿನಾಮಗಳೂ ಗಮನಾರ್ಹವಾಗಿವೆ. ಭರತಶಾಸ್ತ್ರದಲ್ಲಿ ಸೋಮನಾಥ ವಿದ್ವಾಂಸನಾಗಿದ್ದ (ತೀರ್ಥ. 155) ; ರಾಮಚಂದ್ರ ಮತ್ತು ಅನಂತಭಟ್ಟರು ಕ್ರಮವಾಗಿ ದೇವೀಮಹಾತ್ಮ್ಯ ಮತ್ತು ಪುರಾಣಗಳಲ್ಲಿ ಪಾರಂಗತರಾಗಿದ್ದರು ಹಾಗೂ ಸೋವಣ ಒಬ್ಬ ಜ್ಯೋತಿಷಶಾಸ್ತ್ರ ಪಂಡಿತನಾಗಿದ್ದ (ತೀರ್ಥ. 155) ಶಿವಮೊಗ್ಗದ 92ನೆಯ ಶಾಸನವು ಪಂಚಪರ್ವ ಅಥವಾ ಐದು ಹಬ್ಬಗಳ ಉಲ್ಲೇಖವನ್ನು ಮಾಡುತ್ತದೆ ಹಾಗೂ ಅವುಗಳನ್ನು ಹೆಸರಿಸುತ್ತದೆ. ಅವೆಂದರೆ ದೀವಳಿಗೆ, ಯುಗಾದಿ, ಮಹಾನವಮಿ, ಬೆನಕನ ಚವುತಿ ಮತ್ತು ನೂಲಹುಣ್ಣುವೆ. ಶಾಸನಗಳು ಶಿವರಾತ್ರಿ, ರಥಸಪ್ತಮಿಗಳಂಥ ಹಲವು ಹಬ್ಬಗಳನ್ನು ಉಲ್ಲೇಖಿಸುತ್ತವೆ.

ಮಠಗಳು

ಎಲ್ಲ ಮತಧರ್ಮಗಳಿಗೆ ಸೇರಿದ ಅನೇಕ ಮಠಗಳನ್ನು ಈ ಸಂಪುಟದ ಶಾಸನಗಳು ಉಲ್ಲೇಖಿಸುತ್ತದೆ. ಶೃಂಗೇರಿ ಮಠ, ಕೂಡಲಿಮಠ, ಮುಳುಬಾಗಲುಮಠ, ತೀರ್ಥಮುತ್ತೂರುಮಠ, ತೀರ್ಥಹಳ್ಳಿಮಠ, ಮಲೆಯಾಳಮಠ, ಬಾಳಗಾರುಮಠ, ಮುನಿವೃಂದಮಠ ಹಾಗೂ ಕೂಡಲಿಯ ಕಲ್ಲುಮಠಗಳು ಶಾಸನೋಕ್ತಮಠಗಳಲ್ಲಿ ಕೆಲವು. ಮಂಡಲಿಯಲ್ಲಿ ಜೈನಮಠವೊಂದು ಇತ್ತು. ಕೆಳದಿ ನಾಯಕರ ಆಳ್ವಿಕೆಯ ಕಾಲದಲ್ಲಿ ವೀರಶೈವ ಮಠಗಳು – ಮಹತ್ತಿನಮಠ, ವಿರಕ್ತ ಹಾಗೂ ವಶೀಕೃತ ಮಠ – ಅಧಿಕ ಸಂಖ್ಯೆಯಲ್ಲಿ ಸ್ಥಾಪಿತವಾದವು. ಮಠಗಳ ಪಟ್ಟಿಯೊಂದನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಎಲ್ಲವೂ ತೀರ್ಥಹಳ್ಳಿ ತಾಲ್ಲೂಕಿನಲ್ಲಿವೆ.

ಕಪ್ಪಗಳಲೆಯ ಬಸವಪ್ಪನಿಗೆ ನೀಡಿದ ದಾನವಿಷಯವನ್ನು ತಿಳಿಸುವ ಕವಲೇದುರ್ಗದ ತೀರ್ಥ. 63ನೆಯ ಶಾಸನವನ್ನು ಕರೆದಿರುವುದು 'ಮೂಲ ದಾನದ ಪಟೆ' ಎಂದು. ಕಡೋಕಲ್ಲುಗ್ರಾಮದ ಶಿವ. 12 ದಾನವೊಂದನ್ನು ಉಲ್ಲೇಖಿಸುತ್ತದೆ. ಅದರಲ್ಲಿ 'ಯಿ ಕಗದವ ಸೇನಭವರ ಕಡಿತಕ್ಕೆ ಬರಸಿ ತಿರಿಗಿ ಯಿವರ ವಸಕೆ ಕೊಡುವ' ಮಾತಿದೆ. ಆದರೆ ಪ್ರಸ್ತುತ ಶಾಸನವಿರುವುದು ಕಲ್ಲಿನ ಮೇಲೆ.

ತೀರ್ಥ. 19ನೆಯ ಶಾಸನದ ಫಲಸ್ತುತಿ ಶ್ಲೋಕವೊಂದರ ಅರ್ಥ ಹೀಗಿದೆ: "ಭೂಮಿಯನ್ನು ಅಳೆಯಬಹುದು ಹಾಗೂ ಮಳೆಯ ಹನಿಗಳನ್ನು ಎಣಿಸಬಹುದು. ಆದರೆ ಧರ್ಮಸಂಸ್ಥಾಪನೆಯ ಫಲವನ್ನು ಲೆಕ್ಕಹಾಕಲು ವಿಧಾತನಿಗೂ ಸಾಧ್ಯವಿಲ್ಲ."

ತೀರ್ಥ. 152ನೆಯ ಶಾಸನದ ಪ್ರಕಾರ ತೀರ್ಥಹಳ್ಳಿ ಮಠದ ಕಿರಿಯ ಸ್ವಾಮಿಗಳಾದ (ಕನಿಷ್ಠ ಗುರುಗಳು) ಯೀಶ್ವರ ಸ್ವರೂಪಶ್ರೀಪಾದರು 'ರಕ್ತಹತರಾಗಿ' ಮುಕ್ತರಾದರು. ಅವರ 'ಸಮಾರಾಧನೆ'ಗಾಗಿ ಭೂಮಿದಾನವನ್ನು ಮಾಡಲಾಯಿತು. ತುಂಗಭದ್ರಾತೀರದಲ್ಲಿ ಕಟ್ಟಲಾದ ಛತ್ರಕ್ಕೆ ಪೀಠಾಧಿಪತಿಯು ಯಾರನ್ನೂ ಕಳುಹಿಸಿಕೊಡಬಾರದೆಂಬ ಕುತೂಹಲಕರ ಸೂಚನೆಯೊಂದಿದೆ (ಮಠದ ಶುಕ್ಲಪಟರು ಆರನೂ ಛತ್ರಕ್ಕೆ ಕಳುಹಸಲ್ಲದು).

ಕ್ರಿ.ಶ. 1404ರಲ್ಲಿ ಸಂಭವಿಸಿದ ಸಪ್ತಗ್ರಹ ಕೂಟವನ್ನು ಉಲ್ಲೇಖಿಸುತ್ತದೆ, ತೀರ್ಥ. 16ನೆಯ ಶಾಸನ.

ಮರಗಣಲೆಯ ದುರ್ಗಿ ದೇವಾಲಯದ ಸಮೀಪ ನಿಲ್ಲಿಸಿರುವ, ಕ್ರಿ.ಶ. 928–29ರ, ತ್ರುಟಿತಶಾಸನವು (ತೀರ್ಥ 197) ರವಿಚಂದ್ರಯ್ಯನು ನೆಲ್ಲಜವಳ್ಳಿಯಲ್ಲಿ ಮಸವಾದಿತ್ಯದೇವರನ್ನು ಪ್ರತಿಷ್ಠೆಮಾಡಿಸಿದ ವಿಷಯವನ್ನು ನಿರೂಪಿಸುತ್ತದೆ. ಆತ ತಮ್ಮ ಅಮ್ಮಯ್ಯನು ದೇಗುಲವೊಂದನ್ನು ಕಟ್ಟಿಸಿ ಭೂದಾನ ನೀಡಿದ.

ಕ್ರಿ.ಶ. 1413ರಲ್ಲಿ ತೀರ್ಥಮುತ್ತೂರುಮಠದ ಜ್ಞಾನೇಂದ್ರಭಾರತೀ ಶ್ರೀಪಾದರು ಬಾಚಣ್ಣನಿಗೆ ನಲ್ವಾನಿಯಲ್ಲಿ ಸ್ವಲ್ಪ ಭೂಮಿಯನ್ನು ಮಾರಿದರು. ಈ ಪೀಠಾಧಿಪತಿಯು ಆ ಭೂಮಿಯನ್ನು ನರಸಪನಿಂದ ತತ್ಪೂರ್ವದಲ್ಲಿ ಕೊಂಡಿದ್ದರು (ತೀರ್ಥ. 247). ಹೀಗೆಯೇ ಕ್ರಿ.ಶ. 1456ರಲ್ಲಿ ತೀರ್ಥಹಳ್ಳಿ ಮಠದ ಅಮರೇಂದ್ರಪುರಿಶ್ರೀಪಾದರು ಬೊಬ್ಬಿ ಗ್ರಾಮದ ಶಂಕರನಾರಾಯಣನ ಮಗ ವಿಠಪನಿಗೆ ಭೂದಾನವಿತ್ತರು. ದಾನಭೂಮಿಯು ಹಿಂದೆಯೇ ಆ ಪೀಠಾಧಿಪತಿಗೆ ನೀಡಲಾಗಿದ್ದಿತು (ತೀರ್ಥ. 150).

ದೇಮಾಯಿಯು 1573ರಲ್ಲಿ ಆಗುಂಬೆಯ ಗೋಪಾಲಕೃಷ್ಣ ದೇವಾಲಯದ ಪ್ರಧಾನದ್ವಾರವನ್ನು ಪ್ರಾಯಶಃ ಮಾಡಿಸಿದಳು. ಆಕೆ ಹೆಜ್ಜೆ ಪ್ರದೇಶದ ನಾಚ್ಚಾ ದೇವ್ವೇವಮ್ಮಳ ಮೊಮ್ಮಗಳು (ತೀರ್ಥ. 14). ಶಿವ. 50ನೆಯ ಶಾಸನದ ಪ್ರಕಾರ ಗಾಜನೂರಿನ ರಂಗನಾಥ ದೇವಾಲಯವನ್ನು ವೆಂಕಟನಾಯಕನು ಕಟ್ಟಿಸಿದಂತೆ ಕಾಣುತ್ತದೆ. ಗಾಜನೂರಿನ ಮಲ್ಲೋಜಯ್ಯನ ಮಗ ಸಿರಿಯೋಜನು 'ಆ ದೇವಾಲ್ಯವ ನಿಲಿಸಿದಾತ.' ತಿರುಮಲದೇವನು ಗೋಪಾಲದೇವರಿಗೆ ಮಂಟಪವೊಂದನ್ನು ಕಟ್ಟಿಸಿದ ಹಾಗೂ ನಂದಾದೀಪವೊಂದರ ನಿರ್ವಹಣೆಗಾಗಿ ಭೂದಾನ ನೀಡಿದ (ಭದ್ರಾ, 3).

ಆಗುಂಬೆಯ ಗೋಪಾಲಕೃಷ್ಣದೇವಾಲಯದ ಮುಖಮಂಟಪವನ್ನು ಕೋಟಿಯಣ ಹೆಗ್ಗಡೆಯ ಮೊಮ್ಮಗಳು ದುಗ್ಗಮ್ಮ ದುರಸ್ತಿಮಾಡಿಸಿದಳು (ತೀರ್ಥ. 12). ಇದೇ ಶಾಸನವು ಬೊಮ್ಮರಸ ಹೆಗ್ಗಡೆಯ ಸೇವೆಯನ್ನು ಉಲ್ಲೇಖಿಸುತ್ತದೆ ; ಆತ ಪ್ರಾಯಃ ದುಗ್ಗಮ್ಮಳ ಗಂಡನಿರಬೇಕು. ಶಾಸನದ ಕೆಳಗೆ ಬಿಡಿಸಿರುವ ಎರಡು ಉಬ್ಬುಶಿಲ್ಪಗಳು ದುಗ್ಗಮ್ಮ ಮತ್ತು ಬೊಮ್ಮರಸಹೆಗ್ಗಡೆಯರನ್ನು ಪ್ರತಿನಿಧಿಸುತ್ತವೆಂದು ಭಾವಿಸಬಹುದು. ವೀರಪ್ಪಗೌಡ ಎಂಬಾತ ಹೊಳಲೂರಿನಲ್ಲಿ ದೀಪಮಾಲೆ ಕಂಬವೊಂದನ್ನು ಮಾಡಿಸಿದ ಹಾಗೂ ಕೆರೆಯೊಂದನ್ನು ತೋಡಿಸಿದ (ಶಿವ. 112). ಆತನ ಹೆಂಡತಿ ಕೆಂಚಮ ಹೊಳೆಹಟ್ಟಿಯ ರಂಗನಾಥ ದೇವಾಲಯದ 'ದೀಪಮಹಲಕಂಬ'ವನ್ನು ಹಾಕಿಸಿದಳು. ಆ ಕಂಬ 'ಕಲ್ಲುಕುಟ್ಟಿಗ ಕಾನಸಾಬಿನ ಮಗ ಬಡೆಕಾನ ಕೆಲಸ' ಎಂದು ಈ ಶಾಸನದಲ್ಲಿ (ಶಿವ. 114) ಹೇಳಿದೆ.

ಹೊಳಲೂರು ಗ್ರಾಮದ ಶಿವ. 111ನೆಯ ಶಾಸನದಿಂದ ಮಹಾದೇವರಸನು ಹೊಇಸಳ ಮಾದಿಗಲುಡನಿಗೆ 'ಪಂಚೋತ್ತರ ಮರಿಯಾದಿಯಾಗಿ' ಭೂಮಿಯನ್ನು ದಾನ ನೀಡಿದ ಸಂಗತಿ ತಿಳಿದುಬರುತ್ತದೆ. ಯಾವುದೇ ನಿಘಂಟು ಅಥವಾ ಶಾಸನ ಪಾರಿಭಾಷಿಕ ಪದಕೋಶಗಳಲ್ಲಿ ಈ ಪದವಿಲ್ಲದಿರುವುದು ಆಶ್ಚರ್ಯಕರ. ದಾನಿಯನ್ನು ಶಾಸನವು 'ವೀರಕೊಮಾರರ ಮಯಿದುನ' ಎಂದು ಬಣ್ಣಿಸಿದೆ. ತ್ರುಟಿತವಾಗಿರುವ ತೀರ್ಥ. 153ನೆಯ ಶಾಸನವು 'ನೆತ್ತರುಗೊಡಿಗೆಯ ಯೀರಗಲ್ಲನ್ನು' ಉಲ್ಲೇಖಿಸುತ್ತದೆ. ಮಾಯಗೊಂಡಗೌಡನು ದಿವ್ಯವೊಂದರಲ್ಲಿ ಗೆದ್ದು ಭೂಮಿದಾನ ಪಡೆದ ವಿಷಯ ಭದ್ರಾ. 16ನೆಯ ಶಾಸನದಲ್ಲಿದೆ.

ಬಿದಿರೆಯ ನಾಯಕನ ಮಗಳು ಕಾಚಮನಾಯ್ಕಿತಿಯು ಕೂಟಿನಮಡುವಿನ ಅಶೇಷ ಮಹಾಜನರಿಗೆ 12 ಗದ್ಯಾಣಗಳನ್ನು ಸಲ್ಲಿಸಿ ಕೆಂಪಿಡಿ ಗ್ರಾಮವನ್ನು ಪಡೆದುಕೊಂಡಳು (ಭದ್ರಾ, 11) ಎಂದು ತೋರುತ್ತದೆ. ಆದರೆ ಇದರಲ್ಲಿ ದೇವಾಲಯದ ಸೊತ್ತು ಸೇರಿರಲಿಲ್ಲವೆಂದು (ದೇವಸ್ವ ಹೊರತಾಗಿ) ಶಾಸನವು ಸ್ಪಷ್ಟವಾಗಿ ತಿಳಿಸುತ್ತದೆ. ತೀರ್ಥ. 175ನೆಯ

ಸೋಲಿಸಿದನು ; ಆದರೆ ಮಡಿದನು (ತೀರ್ಥ. 135). ಶಿವ 108ನೆಯ ಶಾಸನವು ಕುತೂಹಲಕರವಾಗಿದೆ. ಕ್ರಿ.ಶ. 1287ರಲ್ಲಿ ನಡೆದ ಒಂದು ತುರುಗಾಳಗದಲ್ಲಿ ಬೊಮೆನಾಯಕನೆಂಬ ವೀರ ಮೃತಪಟ್ಟಾಗ, ಆತನ ಹೆಂಡತಿಯು ತನ್ನ 'ತೋಳು ಕಯೆಗೊಟ್ಟು ಸರ್ಗ್ಗಪ್ರಾಪ್ತ'ಳಾದ ವಿಷಯವನ್ನು ಅದು ತಿಳಿಸುತ್ತದೆ. ಅವರಿಬ್ಬರ 'ವೂರ್ದ್ಧಕ್ರಿಯೆಯ ಅವರ ಮಗ ಪಿಳ್ಳೆಯನಾಯ್ಕನು' ಮಾಡಿದ ಹಾಗೂ ಅವರಿಗೆ ನಿಲ್ಲಿಸಿದ ವೀರಗಲ್ಲಿನ ಪೂಜೆಗಾಗಿ ಭೂಮಿದಾನ ನೀಡಿದ. ಈ ದಾನವನ್ನು ಸ್ವೀಕರಿಸಿದವನು ಜನೆಯ ಗುರು ಎಂಬಾತ ; ಆತನ ಸಂತತಿಯವರು ಪೂಜೆಯ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಿತ್ತು.

ಪ್ರಸ್ತುತ ಸಂಪುಟದಲ್ಲಿ ಕೆಲವು ಮಾಸ್ತಿಕಲ್ಲು ಶಾಸನಗಳಿವೆ. ಕ್ರಿ.ಶ. 1134ರಲ್ಲಿ ವೀರನೊಬ್ಬ – ಆತನ ಹೆಸರು ನಷ್ಟವಾಗಿದೆ – 'ಸೂರ್ಯ್ಯಲೋಕ ಪ್ರಾಪ್ತನಾದ' ಸಂದರ್ಭದಲ್ಲಿ ಆತನ ಹೆಂಡತಿ ದೇವಿಯಕ್ಕ 'ಪುರುಷಬ್ರತಮಂ ಕೈಕೊಣ್ಡು' ಉತ್ತವ ಗ್ರಾಮದಲ್ಲಿ ಮರಣ ಹೊಂದಿದಳು (ಭದ್ರಾ. 38). ಕ್ರಿ.ಶ. 1397ರಲ್ಲಿ ತನ್ನ ಪತಿ 'ತಿರುಮಲನಾಯಕನ ಕೂಡೆ ಮಾಯಕ್ಕ' ಎಂಬಾಕೆ ಸತಿಯಾದ ವಿಷಯವನ್ನು ಪುರಲೆಯ ಶಿವ. 71ನೆಯ ಶಾಸನವು ಉಲ್ಲೇಖಿಸುತ್ತದೆ. ಕ್ರಿ.ಶ. 1417ರಲ್ಲಿ ವಿಜಯನಗರದ ದೊರೆ ದೇವರಾಯನ ಆಳ್ವಿಕೆಯ ಕಾಲದಲ್ಲಿ ಮೇಗರವಳ್ಳಿಯ ನಾಗಕ್ಕ ಮಹಾಸತಿಯಾದಳು (ತೀರ್ಥ. 213).

ಜೈನಧರ್ಮದ ನಿಷ್ಠಾವಂತ ಅನುಯಾಯಿಗಳಿದ್ದರು. ಕ್ರಿ.ಶ. 1090–91ರಲ್ಲಿ, ಹೊಯ್ಸಳ ದೊರೆಯ ಕೈಕೆಳಗೆ ಒಬ್ಬ ಅಧಿಕಾರಿಯಾಗಿದ್ದ ಚಂದಿಮಯ್ಯನ ಹೆಂಡತಿ ಬೊಪ್ಪವ್ವೆಯು ಸನ್ಯಸನವ್ರತವನ್ನು ಪಾಲಿಸಿ ಸ್ವರ್ಗಸ್ಥಳಾದಳು (ತೀರ್ಥ. 30). ಜೈನಾಚಾರ್ಯ ಮಲಧಾರಿದೇವರ ಶಿಷ್ಯರಾದ ಶುಭಚಂದ್ರದೇವರೆಂಬ ಜೈನಯತಿಯು ಸಮಾಧಿವಿಧಿಯಿಂದ ಜೀವತೊರೆದ ವಿಷಯವನ್ನು ತೀರ್ಥ. 31ನೆಯ ಶಾಸನವು ತಿಳಿಸುತ್ತದೆ. ಪುರಲೆಯ ಶಿವ. 70ನೆಯ ಶಾಸನದಲ್ಲಿ ಬಾಳಚಂದ್ರಮುನಿಯು 'ಸುಸಮಾಧಿಯಂ ಮುಡಪಿ ನಾಕಮನೆಯ್ದು' ಸಂಗತಿಯನ್ನು ತಿಳಿಸಿದೆ. ಹಾದಿಗಲ್ಲಿನ ತೀರ್ಥ. 226ನೆಯ ಶಾಸನವು ಅಲ್ಲಿನ ಗುಡಿಯಪ್ಪಗೌಡನ ಹೆಂಡತಿಯಾದ ಕಾಳಿಗಾಉಂಡಿಯು 'ಸಮಾಧಿ ವಿಧಿಯಂ ಮುಡಿಪಿ ಸುರಲೋಕಪ್ರಾಪ್ತೆಯಾದ' ವಿಷಯವನ್ನು ದಾಖಲಿಸುತ್ತದೆ. ಆಕೆ ಗುಣಸೇನಸೈದ್ಧಾಂತಿದೇವರ ಗುಡ್ಡಿ. ಕ್ರಿ.ಶ. 1407ರಲ್ಲಿ ಬಳರನಾಯ್ಕಿತಿಗಾಗಿ ನಿಶಿಧಿಕಲ್ಲೊಂದನ್ನು ನಿಲ್ಲಿಸಲಾಯಿತು (ಭದ್ರಾ. 7). ಶಿವ. 65ನೆಯ ಶಾಸನ ದಾಸೆಯನಾಯಕನ ನಿಸಿಧಿಯನ್ನು ಉಲ್ಲೇಖಿಸುತ್ತದೆ.

ಬೊಪ್ಪದಳಾರ (ಶಿವ. 58), ಮಾರೆಯನಾಯಕ ಮತ್ತು ಆತನ ಮಗ ಹಿಟೆಯ (ಶಿವ. 39), ಕಾಮಗೌಡ (ಶಿವ. 28), ಸಕ್ಕಿಸಾಹಣಿ (ಶಿವ. 26), ಕೇತಯನಾಯಕ (ಶಿವ. 63), ಅರ್ಜುನ (ತೀರ್ಥ. 255) ಮತ್ತು ಇತರ ಕೆಲವರು ಯುದ್ಧದಲ್ಲಿ ಹೋರಾಡಿ ಮಡಿದ ವೀರರು. ಕೊಳವಳ್ಳಿಯ ತೀರ್ಥ. 129ನೆಯ ಶಾಸನದ ಪ್ರಕಾರ ಪುಟ್ಟಗಡೆಯು ಪ್ರದರ್ಶಿಸಿದ ಪರಾಕ್ರಮವು ಕುಮಾರ ರಾಮನಾಥನ ಕಲಿತನಕ್ಕೆ ಸರಿಸಮವಾದುದು ; ಆತ ರಣರಂಗದಲ್ಲಿ ಹೋರಾಡಿ 'ಅಂಬುಗೂಡಾಗಿ' ಬಿದ್ದುದು ಕ್ರಿ.ಶ. 1432ರಲ್ಲಿ. ಕ್ರಿ.ಶ. 12–13ನೆಯ ಶತಮಾನದ ಲಿಪಿಯಲ್ಲಿರುವ ತೀರ್ಥ. 216ನೆಯ ಶಾಸನವು ಅಪ್ಸರೆಯರು 'ಹುಯಿನ ವಿಮಾನದೊಳ್ ಇರಿಸಿ' ಸುರಲೋಕಕ್ಕೆ ಕೊಂಡೊಯ್ದ ವೀರನೊಬ್ಬನ ಉಲ್ಲೇಖಿಸುತ್ತದೆ.

ಹಾರನಹಳ್ಳಿಯ ಶಿವ. 106ನೆಯ ಶಾಸನವು ಕೆಳದಿಯ ಅರಸ ಸೋಮಶೇಖರನಾಯಕನ ಆಳ್ವಿಕೆಗೆ ಸೇರಿದುದು. ಸ್ವಾರಸ್ಯದ ಘಟನೆಯೊಂದನ್ನು ಅದು ಪ್ರಸ್ತಾಪಿಸುತ್ತದೆ. ಹೊನ್ನಾಳಿಸೀಮೆಗೆ ಸೇರಿದ ಬಳಊರ ಕಣಿವೆಯಲ್ಲಿ ಹುಲಿಯೊಂದು ಬಹಳ ದಿವಸಗಳಿಂದ ಹಾವಳಿ (ರಾಉಡಿ) ಮಾಡುತ್ತಿದ್ದಾಗ, ಹೊನ್ನಾಳಿ ಕೋಟೆಯ ಗಉಳೋಜಿಯು ಅದನ್ನು ಇರಿದು ಕೊಂದನು. ಆದರೆ ಆತನ ಕೂಡ ಮರಣ ಹೊಂದಿದ. ಆತನ ಮಕ್ಕಳಾದ ಕಾನೋಜ ಮತ್ತು ಮರುಸೋಜರಿಗೆ ಹಾರನಹಳ್ಳಿಯಲ್ಲಿ ಭೂದಾನ ನೀಡಲಾಯಿತು.

ವಿವಿಧ

ಪ್ರಸ್ತುತ ಸಂಪುಟದ ಶಾಸನಗಳು ಸಂಸ್ಕೃತಿಯ ಹಲವು ಅಂಶಗಳ ಅಧ್ಯಯನಕ್ಕೆ ಸಾಮಗ್ರಿಯನ್ನು ಒದಗಿಸುತ್ತವೆ. ತೀರ್ಥ. 10 ಅಲಗವಳ್ಳಿಯ ಶಿಲಾಶಾಸನ ; ಅದು ವಿರುಪಣ್ಣ ನೀಡಿದ ದಾನದ ವಿಷಯವನ್ನು ತಿಳಿಸುತ್ತದೆ ಹಾಗೂ ಆತ 'ಭೂದಾನಪತ್ರಶಿಲಾತಾಂಬ್ರಶಾಸನ'ವನ್ನು ನೀಡಿದನೆಂದು ಹೇಳುತ್ತದೆ. ಈ ಶಾಸನದ ತೇದಿ ಕ್ರಿ.ಶ. 1407. ಚಕ್ಕೋಡಬಯಲು ಗ್ರಾಮದ ಶಿಲಾಶಾಸನವು (ತೀರ್ಥ. 144) ಮೂಲತಾಮ್ರಶಾಸನವೊಂದರ ನಕಲು ; 'ಯಿದೇ ತಾಂಮ್ರಶಾಸನದ ಪ್ರತಿಯ ಶಿಲಾಶಾಸನ'ಎಂದು ಅದು ಹೇಳುತ್ತದೆ. ಶೃಂಗೇರಿ ಮಠದ ಗುರುಗಳಾದ ಶ್ರೀನರಸಿಂಹಭಾರತೀವೊಡೆಯರ (ಕ್ರಿ.ಶ. 1464–1479) ದಿವ್ಯನಾಮದಲ್ಲಿ ಅದನ್ನು ಹೊರಡಿಸಲಾಯಿತು. ಈ ಸರ್ವಮಾನ್ಯ ದಾನವನ್ನು ಶೃಂಗೇರಿಯಲ್ಲಿ, ವಿದ್ಯಾಶಂಕರದೇವರ ಸನ್ನಿಧಿಯಲ್ಲಿ ಪುರುಷೋತ್ತಮ ಭಾರತೀವೊಡೆಯರ ಸಮಕ್ಷದಲ್ಲಿ ಹಾಗೂ ಶ್ರೀನಾರಸಿಂಹ್ಯೇಶ್ವರದೇವರ ಪಾದದಲ್ಲಿ ಸಮರ್ಪಿಸಲಾಯಿತು. ಶಾಸನೋಕ್ತ ಶ್ರೀ ನಾರಸಿಂಹಭಾರತೀಪುರವನ್ನು ಈಗ ಕೇವಲ ಭಾರತೀಪುರ ಎಂದು ಕರೆಯಲಾಗುತ್ತಿದೆ. ಬಾಳಿಗೆಮನೆ ಗ್ರಾಮದ ತೀರ್ಥ. 182ನೆಯ ಶಾಸನವನ್ನು 'ಗುತ್ತಗೆಯ ಪಟ್ಟಿಯ ಪತ್ರ' ಎಂದು ಕರೆದಿದ್ದರೆ,

ಬಿನ್ನವಿಸಿಕೊಂಡರಂತೆ. ಈ ದಾಖಲೆಗೆ ದೊರೆಯ ಸಹಿಯಿದೆ. ಮೂಲ ಸನ್ನದನ್ನು ಪ್ರತಿಗ್ರಹಿಗೆ ಹಿಂದಿರುಗಿಸಬೇಕೆಂದು ಮತ್ತು ಅದರ ಪ್ರತಿಯನ್ನು ಶಿರಸ್ತೇದಾರರ ದಾಖಲೆಗಳ ಜೊತೆ ಇರಿಸಬೇಕೆಂದೂ ಆದೇಶಿಸಲಾಗಿದೆ.

ಸ್ಮಾರಕ ಶಾಸನಗಳು

ಪ್ರಸ್ತುತ ಸಂಪುಟದ ಅರುವತ್ತಕ್ಕೂ ಹೆಚ್ಚು ಶಾಸನಗಳು ಸ್ಮಾರಕ ಸ್ವರೂಪದವಾಗಿವೆ. ಬಹುಪಾಲು ಶಾಸನಗಳು ವೀರಗಲ್ಲುಗಳ ಮೇಲಿವೆ. ಗ್ರಾಮಗಳ ಮೇಲಿನ ದಾಳಿ, ತುರುಗಾಳಗ ಅಥವಾ ಕಾದಾಟಗಳಲ್ಲಿ ಹೋರಾಡಿ ಮಡಿದ ವೀರರನ್ನು ಅವು ಉಲ್ಲೇಖಿಸುತ್ತವೆ.

ಕ್ರಿ.ಶ. 963–64ರಲ್ಲಿ ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನ ಆಳ್ವಿಕೆಯ ಕಾಲದಲ್ಲಿ ಬೆಟ್ಟುಗನೆಂಬ ವೀರ ಗೋವುಗಳನ್ನು ರಕ್ಷಿಸುವಲ್ಲಿ ಹೋರಾಡಿ ತನ್ನ ಪ್ರಾಣತೆತ್ತನು. ಇದು ಸಂಭವಿಸಿದುದು ಪ್ರಾಯಃ ಅರಕೆರೆಯಲ್ಲಿ. ಗೋವಿಗಾವುಂಡ ಮೃತವೀರನಿಗೆ ಸ್ಮಾರಕವನ್ನು ನಿಲ್ಲಿಸಿದ (ಭದ್ರಾ. 2). ಶಿವಮೊಗ್ಗದ ಇನ್ನೆರಡು ಶಾಸನಗಳು – ಶಿವ. 87 ಮತ್ತು 88 – ಇದೇ ಅರಸನ ಆಳ್ವಿಕೆಗೆ ಸೇರಿದಂಥವು. ಮೃತ ವೀರರ ಹೆಸರುಗಳು ನಷ್ಟವಾಗಿರುವುದು ದುರ್ದೈವದ ಅಂಶ. ಇವೆರಡೂ ಶಾಸನಗಳು ಗಂಗ ಬೂತುಗನ ಆಡಳಿತವನ್ನು ಉಲ್ಲೇಖಿಸುತ್ತವೆ. ಗಂಗ ಪೆರ್ಮಾಡಿಯು ಆಳುತ್ತಿದ್ದಾಗ ಗಂಗವೂರಿನಲ್ಲಿ ಉಂಟಾದ ತುರುಗಾಳಗವನ್ನು ಭೈರೆಕೊಪ್ಪದ ಶಿವ. 78ನೆಯ ಶಾಸನವು ಪ್ರಸ್ತಾಪಿಸುತ್ತದೆ. ಅಳಮ್ಮಗವುಂಡನ ಮಗ ಚೋಳ ಎಂಬ ವೀರ ಕಾದಿ ಮಡಿದ. ಅವನೊಡನೆ ಇನ್ನೂ ಐವರು ಹೋರಾಡಿ ಮೃತಪಟ್ಟಂತೆ ತೋರುತ್ತದೆ. ಇದೇ ಅರಸನ ಆಳ್ವಿಕೆಗೆ ಸೇರಿದ ಗೋಂದೀಚಟ್ಟನಹಳ್ಳಿಯ ಶಿವ. 51ನೆಯ ಶಾಸನದ ಕಾಲ ಕ್ರಿ.ಶ. 1120. ಪೊಯ್ಸಳ ಬಿಟ್ಟಿದೇವನ ಕೈಕೆಳಗಿನ ಒಬ್ಬ ದಂಡನಾಯಕನಾದ ಬೊಪ್ಪಣ ಹಾಗೂ ಗಂಗ ಪೆರ್ಮಾಡಿದೇವರ ನಡುವೆ ಹಲಸೂರಿನಲ್ಲಿ ನಡೆದ ಕಾಳಗವನ್ನು ಅದು ಉಲ್ಲೇಖಿಸುತ್ತದೆ. ತನ್ನ ಗಂಗ ಪ್ರಭುವಿಗಾಗಿ ಹೋರಾಡಿದ, ಚಂಬಣವಾಸಿ ಮತ್ತು ಬೂತಬ್ಬೆಯರ ಮಗನಾದ ಲೆಂಕ ಬಮ್ಮಯನಾಯಕ ಸುರಲೋಕಸೇರಿದನಂತೆ.

ಭದ್ರಾ. 3ನೆಯ ಶಾಸನದಲ್ಲಿ ಕುತೂಹಲಕರವಾದ ಘಟನೆಯೊಂದು ನಿರೂಪಿತವಾಗಿದೆ. ಸಾಂತರ ಪ್ರಭುವಾದ ಪೆರ್ಮ್ಮಾಡಿ ಸಾಂತರದೇವನು ಮನ್ನೆಯ ಬಮ್ಮರಸನ ಮಗನಾದ ಮನ್ನೆಯ ಗೊಗ್ಗರಸನು ತನ್ನನ್ನು ನಂಬುವಂತೆ ಮಾಡಿ, ಗೊಗ್ಗರಸನ ತಲೆಗಡಿದನಂತೆ. ಇದಕ್ಕೆ ಕಾರಣವನ್ನು ಶಾಸನದಲ್ಲಿ ತಿಳಿಸಿಲ್ಲ. ಈ ಕೃತ್ಯಕ್ಕೆ ಪ್ರತೀಕಾರವಾಗಿ ಸಾಂತರ ದೊರೆಯು ತನ್ನ ಬೀಡಿಗೆ ಹಿಂದಿರುಗುತ್ತಿದ್ದಾಗ ಆತನನ್ನು ಇರಿಯಲಾಯಿತಂತೆ. ಈ ಶಾಸನದಲ್ಲಿ ಉಕ್ತವಾದ ಹೆಸರುಗಳನ್ನೆಲ್ಲ ಗಮನಿಸಿದರೆ ಸಾಂತರ ಮನೆತನದಲ್ಲಿ ಆಂತರಿಕ ಕಲಹ–ಕಾದಾಟ ನಡೆದಿರುವಂತೆ ಕಾಣುತ್ತದೆ. ಈ ಘಟನೆ ನಡೆದುದು ಕ್ರಿ.ಶ. 1115–16ರಲ್ಲಿ. ಕ್ರಿ.ಶ. 1122ರ ತೇದಿಯ ಶಿವ. 82ನೆಯ ಶಾಸನದ ಪ್ರಕಾರ ಸಾಹಣಿ ಮಾರಸಿಂಘನು ಭಾರೀ ಸಮರದಲ್ಲಿ ('ಮಹಾಹವ') ಪರಾಕ್ರಮದಿಂದ ಕಾದಿ ಮರಣ ಹೊಂದಿದನು. ಬೆಳಗವತ್ತಿಯಲ್ಲಿ ಕ್ರಿ.ಶ. 1125ರಲ್ಲಿ ನಡೆದ ಕದನದಲ್ಲಿ ಪಡವಳ ಗಂಗ ಅಥವಾ ಗಂಗಿಮಯ್ಯ ಶತ್ರುಗಳ ವಿರುದ್ಧ ಹೋರಾಡುವಾಗ ಸಾವಿಗೀಡಾದನು (ಶಿವ. 77). ತನ್ನ ಒಡೆಯ ವೀರಗಂಗನಿಗೆ ಆತ ಹನುಮನ ಹಾಗೆ ನಿಷ್ಠನಾಗಿದ್ದನಂತೆ. ಆತ ತನ್ನ ಕುದುರೆಯನ್ನೇರಿ ಹೊರಟಾಗ "ಅದಿರ್ದ್ದುದು ಧರೆ ಖುರಘಾತದಿನುದಿರ್ದ್ದವು ತಾರಗೆಗಳ್ . . . ಬಿದ್ದಿರ್ದ್ದವರಿನರರ ಹೃದಯಂ."

ತೊರಹರ ಕಾಳಯನು ಹಿರಿಯೂರಿನ ಹಸುಗಳನ್ನು ಅಪಹರಿಸಿದಾಗ ಕ್ರಿ.ಶ. 1140ರಲ್ಲಿ ತೆಲ್ಲಿಗ ಬರ್ಮಣ್ಣನು ಹೋರಾಡಿ ಹಸುಗಳನ್ನು ಮರಳಿ ಪಡೆಯುವಲ್ಲಿ ಸಫಲನಾದರೂ ತನ್ನ ಪ್ರಾಣ ತೆರಬೇಕಾಯಿತು (ಭದ್ರಾ. 29). ಹೀಗೆಯೇ ಕ್ರಿ.ಶ. 1154ರಲ್ಲಿ ಕಮ್ಮರೂರಿನ ಚೆನ್ನಗಾವುಂಡನು ತುರುಗಾಳಗದಲ್ಲಿ ಕಾದಿ ಮಡಿದ (ಶಿವ. 21). ಶಿವ 67 ಪುರದಹಾಳು ಗ್ರಾಮದಲ್ಲಿರುವ ವೀರಗಲ್ಲು ಶಾಸನ ; ಕಾಲ ಕ್ರಿ.ಶ. 1160. ಕಾಡಿನಲ್ಲಿರುವ ಬಂಡೆಯ ತುಂಡಿನ ಮೇಲೆ ಈ ಶಾಸನವಿದೆಯೆಂದು ಹೇಳಲಾಗಿದೆ (ಎಂ.ಎ.ಆರ್. 1923, ಪು. 113). ಹೀಗಿರುವುದು ಅಪರೂಪ. ಈ ಶಾಸನದ ಪ್ರಕಾರ ಹಡವಳ ಜಕ್ಕಣ್ಣ ಮತ್ತು ಬೊಪ್ಪಕ್ಕರ ಮಗನಾದ ಹಡವಳ ಬೊಪ್ಪಣ ಹೋರಾಟದಲ್ಲಿ ತೈಲಹದೇವ ಹಾಗೂ ಇನ್ನೊಬ್ಬನನ್ನು ಕೊಂದು ವೀರಮರಣವನ್ನು ಪಡೆದ. ಸಾಂತಳಿಗೆಯ ಪ್ರಭು ಜಗದೇವರಸನು ಎರಡು ಗದ್ಯಾಣಗಳನ್ನು 'ನೆತ್ತರುಗೊಡಿಗೆ'ಯಾಗಿ ನೀಡಿದ. ಕ್ರಿ.ಶ. 1175ರಲ್ಲಿ ಮಾದಗೌಂಡ (ಶಿವ. 115) ಮತ್ತು ಕ್ರಿ.ಶ. 1180ರಲ್ಲಿ ಸೀಬಯ್ಯ (ಭದ್ರಾ. 28) ಶತ್ರುಗಳ ವಿರುದ್ಧ ನಡೆದ ಹೋರಾಟಗಳಲ್ಲಿ ನಿಧನರಾದರು.

ಭದ್ರಾ. 30ನೆಯ ಶಾಸನದ ಪ್ರಕಾರ, ಕ್ರಿ.ಶ. 1208ರಲ್ಲಿ ಹಿರಿಯೂರಿನ ಸಿದ್ಧೇಶ್ವರದೇವರ ಭಕ್ತನಾದ ಬಾರಿಕೆ ಬೆದ್ದಮ್ಮನು 'ತನಗಂ ಮುಕ್ತಿಪದಾರ್ತ್ಥವಾಗಿ' ಮರಣಹೊಂದಿದನು. ಕ್ರಿ.ಶ. 1250ರಲ್ಲಿ ಸಿರಿಯಮ್ಮ ಹಾಗೂ ಆತನ ಮಾವ ಹೊಯ್ಸಯ್ಯ ಹೋರಾಡುತ್ತಲೇ ಪ್ರಾಣಬಿಟ್ಟರು (ತೀರ್ಥ. 227). ಮಾರನೆಯ ವರ್ಷದಲ್ಲಿ ಸಿರಿಯಮವೆಗ್ಗಡೆ ಎಂಬಾತ ಕಾದಿ ಮಡಿದನು (ತೀರ್ಥ. 228). ಕ್ರಿ.ಶ. 1254ರಲ್ಲಿ ಸಿಂಘಳದೇವನ ದಳವಾಯಿ ಸಾರಂಗದೇವನು ಮಹಾಮಂಡಳಿಕ ಹರಿಚವೆಗ್ಗಡೆ ಮತ್ತಿತರರ ಮೇಲೆ ದಾಳಿ ಮಾಡಿ ಕೋದೂರನ್ನು ಸುಟ್ಟುಹಾಕಿದಾಗ, ರಾಜಿಕನ ಜಕ್ಕನೆಂಬ ವೀರ ಆತನನ್ನು

ಕ್ರಿ.ಶ. 1671ರ ಶಿವ. 91ನೆಯ ಶಾಸನವು ಸೋಮಶೇಖರನಾಯಕನ ಆಳ್ವಿಕೆಗೆ ಸೇರಿದ್ದು. ಸೀಮೊಗೆಯಲ್ಲಿ ತುಂಗಾ ನದಿಯ ಹಾಯ್ಗಡದ ಮುದಲಿಂಗ ಮತ್ತಿತರ ಕೆಲವು ಅಂಬಿಗರಿಗೆ ಕೆಳದಿ ಪ್ರಭುವು ಉಂಬಳಿಯೊಂದನ್ನು ಕೊಟ್ಟ ವಿಷಯವನ್ನು ನಿರೂಪಿಸುತ್ತದೆ. ಪ್ರಯಾಣಿಕರಿಂದ ಅವರು ಶುಲ್ಕವನ್ನು ತೆಗೆದುಕೊಳ್ಳಲು ಅವಕಾಶವಿದ್ದಿತು ; ಆದರೆ ಅಗತ್ಯಬಿದ್ದಾಗ ಮತ್ತು ಸೀಮೊಗೆ ಕೋಟೆಯವರ ಆದೇಶವಿದ್ದಾಗ ಅವರು ಅರಮನೆಯ ಸೇವೆಗೆ ಹರಿಗೋಲುಗಳನ್ನು ಒದಗಿಸಬೇಕಾಗಿತ್ತು. ಶಿವಪ್ಪನಾಯಕನು ರಂಗಬೋಯ ಹಾಗೂ ಇತರರಿಗೆ ಕೆಲವು ತೆರಿಗೆಗಳ ದಾನವನ್ನೂ ಅದು ಉಲ್ಲೇಖಿಸುತ್ತದೆ. ಲಿಂಗಮ್ಮಾಜಿಗೆ ಶಿವಲೋಕಪ್ರಾಪ್ತಿಯಾಗಲೆಂದು ಭೂದಾನವೊಂದನ್ನು ನೀಡಲಾಯಿತು (ತೀರ್ಥ. 76 ಮತ್ತು 110).

ಕೆಳದಿ ರಾಣಿ ಚೆನ್ನಮ್ಮಾಜಿಯ ಆದೇಶದ ಮೇರೆಗೆ ದೇವಪ್ಪ ಎಂಬಾತ ಪ್ರಾಯಃ ಬಸವೇಶದೇವರಿಗೆ ದಂಡಿಗೆ ಉಂಬಳಿಯಾಗಿ ಕಡೊಕಲ್ಲು ಗ್ರಾಮವನ್ನು ದಾನ ನೀಡಿದ ವಿಷಯವನ್ನು ಶಿವ 12ನೆಯ ಶಾಸನವು ದಾಖಲಿಸುತ್ತದೆ. ಹಯಿನೂರು ಎಂಬಲ್ಲಿ ತುಂಗಾನದಿಗೆ ಬಸವನವಡ್ಡು ಎಂಬ ಕಟ್ಟನ್ನು ನಿರ್ಮಿಸಿದ ವಿಷಯ ಶಿವ. 105ನೆಯ ಶಾಸನದಲ್ಲಿ ನಿರೂಪಿತವಾಗಿದೆ. ಇಮ್ಮಡಿ ಸೋಮಶೇಖರ ನಾಯಕನು ಇದನ್ನು ಕಟ್ಟಿದುದು ಹರಕೇರಿಯ ಗುರುಲಿಂಗಸ್ವಾಮಿಯವರ ವಿರಕ್ತ ಮಠಕ್ಕಾಗಿ. ಈ ಶಾಸನದ ಕಾಲ ಕ್ರಿ.ಶ. 1722 ; ಈ ಶಾಸನದಲ್ಲಿ ಮಾವ ನಿರ್ವಾಣೈಯನ ಉಲ್ಲೇಖವಿದೆ. ಕೆಳದಿ ನಾಯಕರಿಗೆ ಸೇರಿದ ಅತ್ಯಂತ ಈಚಿನ ಶಾಸನವು ಸಾವಗೊಂಡನಹಳ್ಳಿಯಲ್ಲಿದೆ (ಶಿವ. 100). ಅದರ ಕಾಲ ಕ್ರಿ.ಶ. 1732. ಗಾಜನೂರು ಸೀಮೆಯ ಚೆನ್ನಗೊಂಡನಕೊಪ್ಪಕ್ಕೆ ಪ್ರತಿಯಾಗಿ ಯೆಡತೊರೆ–ಹರುಮಗಟೆ ಸೀಮೆಯ ಸಾವಗೊಂಡನಹಳ್ಳಿಯನ್ನು ನೀಡಿದ ವಿಷಯವನ್ನು ಅದು ದಾಖಲಿಸುತ್ತದೆ. ಹಾಗೆ ನೀಡಿದುದು ಕೂಡಲಿಯ ಕಲ್ಲುಮಠದ ರಘುರಾಜತೀರ್ಥಸ್ವಾಮಿಯವರಿಗೆ.

ಕೆಳದಿ ಅರಸರ ಶಾಸನಗಳು ಸಾಹಿತ್ಯಕ ದೃಷ್ಟಿಯಿಂದ ಪ್ರಮುಖವಲ್ಲದಿದ್ದರೂ, ಡಾ. ಕೆ.ಎನ್. ಚಿಟ್ನಿಸ್ ಅವರು ತೋರಿಸಿಕೊಡುವಂತೆ ಅವು "ಕಂದಾಯದ ವಿಷಯಗಳಿಗೆ ಮತ್ತು ವಿವಿಧ ಬಗೆಯ ನಾಣ್ಯಗಳಿಗೆ ಸಂಬಂಧಿಸಿದಂತೆ"[12] ವಿಪುಲ ವಿವರಗಳನ್ನು ನಮಗೆ ನೀಡುತ್ತವೆ.

ಆನಿವೇರಿ

ನಾಗಸಮುದ್ರದ ಭದ್ರಾ. 17 ಒಂದು ತಾಮ್ರಶಾಸನ ; ಅದರ ಕಾಲ ಕ್ರಿ.ಶ. 1548. ತಮ್ಮಸಮುದ್ರ ಗ್ರಾಮವನ್ನು ಹಿರಿಯಂಕಟಪ ಹಾಗೂ ರಾಣಿಯೊಬ್ಬಳಿಗೆ – ಆಕೆಯ ಹೆಸರನ್ನು ತಿಳಿಸಿಲ್ಲ – ದಾನ ನೀಡಿದಂತೆ ತೋರುತ್ತದೆ. ಆನಿವೇರಿಯ ಹಿರಿವೆಂಕಟಪನಾಯಕನ ಮಗ ಹಿರಿರಂಗಪನಾಯಕ ಈ ದಾನ ನೀಡಿದವನು. ಪ್ರತಿಗ್ರಹಿಗಳು ನಾಗಸಮುದ್ರ ಗ್ರಾಮವನ್ನು ಸ್ಥಾಪಿಸಿದರು. ಮಲ್ಲಪಗೌಡನು ತನ್ನ ಮಗಳಿಗೆ ಕೊಟ್ಟ ದಾನವನ್ನೂ ಅದು ಪ್ರಸ್ತಾಪಿಸುತ್ತದೆ. ಈ ಶಾಸನದ ಭಾಷೆ ಬಹಳ ದೋಷಭರಿತವಾಗಿದೆ.

ಬೀಳಿಗಿ

ಕವಲೇದುರ್ಗದ ತೀರ್ಥ. 81 ಒಂದು ತಾಮ್ರಶಾಸನ ; ಬೀಳಿಗಿಯ ಮಹಾಪ್ರಭು ಘಂಟೆವಡೇರ ಮೊಮ್ಮಗನೂ ಶಿವಪ್ಪನಾಯಕನ ಮಗನೂ ಆದ ಇಮ್ಮಡಿ ಶಿವಪ್ಪನಾಯಕನ ಆಳ್ವಿಕೆಯನ್ನು ಅದು ಉಲ್ಲೇಖಿಸುತ್ತದೆ. ಹಲುಗನಹಳ್ಳಿಯ ಚರಂತಿಗಳಾದ ಗುರುಶಾಂತದೇವರ ಶಿಷ್ಯರಾದ ಕೊಳೂರದೇವರಿಗೆ 900 ಗದ್ಯಾಣಗಳಿಗೆ ಹಿಂದೆ ನೀಡಿದ ಕ್ರಯದಾನವನ್ನೂ ಆಗಿನಿಂದ ಅದನ್ನು ಅವರು ಅನುಭೋಗಿಸುತ್ತಿದ್ದ ವಿಷಯವನ್ನೂ ಅದು ಪ್ರಸ್ತಾಪಿಸುತ್ತದೆ. ಈಗ ಧರ್ಮಶಾಸನದ ಮೂಲಕ ದಾನಗ್ರಾಮವನ್ನು ತಮಗೆ ವರ್ಗಾಯಿಸಬೇಕೆಂದು ಅವರು ಹಾಗೂ ಗುರುಶಾಂತದೇವರು ಬಿನ್ನವಿಸಿಕೊಂಡರು. ಅದರಂತೆ 'ಮಹತ್ತು'ವಿನಿಂದ 70 ವರಹಗಳನ್ನು ಸ್ವೀಕರಿಸಿ ಪ್ರಭುವು ಧರ್ಮಶಾಸನವನ್ನು ಹೊರಡಿಸಿದ. ಅಲ್ಲೊಂದು ಮಠವನ್ನು ಕಟ್ಟಲೂ ಆತ ಅನುಮತಿಯನ್ನು ನೀಡಿದ. ಈ ಶಾಸನದ ಕಾಲ ಕ್ರಿ.ಶ. 1674.

ಮೈಸೂರು

ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜವೊಡೇರಿಗೆ ಸಂಬಂಧಿಸಿದಂತೆ ಈ ಸಂಪುಟದಲ್ಲಿನ ಏಕೈಕ ಶಾಸನ ತೀರ್ಥ. 160. ಮುಳಬಾಗಲುಮಠದ ಏಜಂಟರ ವಶದಲ್ಲಿದ್ದ ಒಂದು ಸನ್ನದು ಇದು. ದೊರೆಯು ಮುಳಬಾಗಲಿನ ಶ್ರೀಕೃಷ್ಣಾನಂದಸ್ವಾಮಿಮಠಕ್ಕೆ 106 ಹೈದರಿ ವರಹ ಮತ್ತು 3 ಹಣಗಳನ್ನು ನೀಡಿದ ಸಂಗತಿಯನ್ನು ನಿರೂಪಿಸುತ್ತದೆ. ಈ ಮಠವು ಭಾಗವತಸಂಪ್ರದಾಯವನ್ನು ಅನುಸರಿಸುತ್ತದೆ. ಮಠದ ಸ್ವಾಮಿಯವರು ದೊರೆಯ ಮುಂದೆ ಖುದ್ದು ಹಾಜರಿದ್ದು

ಈ ಸಂಪುಟದಲ್ಲಿ ಅತಿ ಪ್ರಾಚೀನ ಕೆಳದಿ ಶಾಸನವೆಂದರೆ ಆಲಹಳ್ಳಿಯ ಶಿವ. 5. ಅದರ ಕಾಲ ಕ್ರಿ.ಶ. 1560 ; ಅದು ಸದಾಶಿವರಾಯನ ಆಳ್ವಿಕೆಗೆ ಸೇರಿದ್ದು. ದೊರೆಯ ಅನುಮತಿಯನ್ನು ಪಡೆದು ಪರ್ವತ ಒಡೆಯನು 'ಗ್ರಾಮದೇವತೆಯಾದ' ಮಲ್ಲಿನಾಥದೇವರ ದೀಪಾರಾಧನೆಗಾಗಿ ನಾಲ್ಕು ವರಹಗಳನ್ನು ನೀಡಿದನು. ಚಿನ್ನಭಂಡಾರದ ನಾರಾಯಣಪ್ಪಯ್ಯನ ಮಗ ರಾಮಕೃಷ್ಣಯ್ಯನನ್ನು ಅಗಳಬಾಗಲು ಗ್ರಾಮದ ಸದಾಶಿವ ದೇವಾಲಯದ ಪಾರುಪತ್ಯಗಾರನನ್ನಾಗಿ ನೇಮಿಸಲಾಯಿತು ಹಾಗೂ ಕ್ರಿ.ಶ. 1577ರಲ್ಲಿ ದೇವಾಲಯದ ದುರಸ್ತಿ ಮತ್ತಿತರ ಕೆಲಸಗಳಿಗೆ ಭೂಮಿದಾನ ಮಾಡಲಾಯಿತು (ತೀರ್ಥ. 5) 'ಪ್ರಿಯ ಸ್ರಾಹೆ ನಿಜ ಘಟ್ಟಿ ವರಹಗಳನ್ನು' ಮಲ್ಲರಸಯ್ಯ ಎಂಬಾತನಿಂದ ಪಡೆದು ದೊರೆಯು ಅವನಿಗೆ ಹಿರಿಯಕಲ್ಲಹಳ್ಳಿ ಗ್ರಾಮವನ್ನು ನೀಡಿದನು (ತೀರ್ಥ. 154). ಕ್ರಿ.ಶ. 1585ರಲ್ಲಿ ಕೊಡಚಾದ್ರಿ ಕೇಶೊಭಟ್ಟನಿಗೆ ಭದ್ರಕಾಳಿ ದೇವತೆಯ ಪೂಜಾದಿಸೇವೆಗಳಿಗೆ ದತ್ತಿಯೊಂದನ್ನು ವೀರಭದ್ರನಾಯಕನು ನೀಡಿದನು (ಶಿವ. 120).

ಅವಸ್ನಾ ದೇಶವನ್ನು ಆರಗದಿಂದ ಆಳುತ್ತಿದ್ದ ವೆಂಕಟಾದ್ರಿನಾಯಕನ ಕಾಲಕ್ಕೆ ಮೇಳಿಗೆಯ ತೀರ್ಥ 215ನೆಯ ಶಾಸನವು ಸೇರುತ್ತದೆ. ಶಾಸನದಲ್ಲಿ ಆತನನ್ನು ಬಹುವಾಗಿ ಪ್ರಶಂಸಿಸಿದೆ. ಬೊಮ್ಮಣಸೆಟ್ಟಿಯು ಅನಂತನಾಥ ಬಸದಿಯನ್ನು ಶಿಲಾಮಯವನ್ನಾಗಿ ಮಾಡಿಸಿದುದನ್ನು ಹಾಗೂ ದೇವರಿಗೆ ಭೂಮಿದಾನ ಮತ್ತು ಧನದಾನ ಮಾಡಿದ ವಿಷಯವನ್ನು ಅದು ದಾಖಲಿಸುತ್ತದೆ. ಕವಲೇದುರ್ಗದ ತೀರ್ಥ. 108ನೆಯ ಶಾಸನದಿಂದ ತಿಳಿದುಬರುವಂತೆ ಆತನ ಹೆಂಡತಿಯು ವಿರುಪಣ್ಣನಾಯಕನ ಮಗಳು ; ಆದರೆ ಆಕೆ ಹೆಸರನ್ನು ತಿಳಿಸಿಲ್ಲ. ವೀರಶೈವ ಅಥವಾ ಲಿಂಗಾಯತ ಮಠಗಳಿಗಾಗಿ ಹೇರೆತ್ತುಗಳ ಮೂಲಕ ಸಾಗಿಸುವ ಸಾಮಾನು ಸರಂಜಾಮುಗಳ ಮೇಲಿನ ಸಾಗಣೆ ಸುಂಕಗಳನ್ನು ಮನ್ನಾಮಾಡಿದುದನ್ನು ತೀರ್ಥ. 67 ಮತ್ತು ಇತರ ಅನೇಕ ಶಾಸನಗಳು (ಉದಾಹರಣೆಗೆ, ತೀರ್ಥ. 60 ಮತ್ತು 94) ವಿಶದಪಡಿಸುತ್ತವೆ. ಶಾಸನದಲ್ಲಿ ಉಲ್ಲೇಖಗೊಂಡಿರುವ ಪದಾರ್ಥಗಳೆಂದರೆ ಭತ್ತ, ರಾಗಿ, ಬಿದಿರಬುಟ್ಟಿ, ದ್ವಿದಳಧಾನ್ಯ, ಎಣ್ಣೆ, ತುಪ್ಪ, ಬೆಲ್ಲ, ಅಕ್ಕಿ ಹಾಗೂ ಉಪ್ಪು. ರೈಸ್ ಅವರು ಹೇಳುತ್ತಾರೆ: "ಆದರೆ ಎಲ್ಲ ಸಂದರ್ಭಗಳಲ್ಲಿಯೂ ಅಡಕೆ, ಮೆಣಸು, ಕೊಬ್ಬರಿ ಹಾಗೂ ಮರಮಟ್ಟುಗಳಿಗೆ ಈ ವಿನಾಯಿತಿ ಇರಲಿಲ್ಲ ಮತ್ತು ಅವಕ್ಕೆ ಹಾಗೂ ಝಲ್ಲಿ ಪಟ್ಟೆಗಳಿಗೆ ಸುಂಕ ಸಂದಾಯ ಮಾಡಲೇಬೇಕಿತ್ತು." ಹಾಗಿದ್ದರೂ ವಿನಾಯಿತಿ ಪಡೆದ ಪದಾರ್ಥಗಳನ್ನು ಇತರೆಡೆಗಳಲ್ಲಿ ಮಾರುವ ಹಾಗಿರಲಿಲ್ಲ ; ಸಂಬಂಧಪಟ್ಟ ಮಠದಲ್ಲಿಯೇ ಅದನ್ನು ಸಂಗ್ರಹಿಸಿಡಬೇಕಿತ್ತು ಹಾಗೂ ಅವನ್ನು ಷಡ್ದರ್ಶನಗಳನ್ನು ಬೋಧಿಸುವ ಗುರುವರ್ಗದವರ ಮತ್ತು ಕಲಿಯುವ ಶಿಷ್ಯವರ್ಗದವರ ಪೋಷಣೆಗಾಗಿ ಬಳಸಬೇಕಿತ್ತು.

ಕೆಳದಿ ಶಾಸನಗಳಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ವಿವಿಧ ಜನರು, ಕೆಲವೊಮ್ಮೆ ನರ್ತಕಿಯರು (ತೀರ್ಥ. 82, 96 ಮತ್ತು 202) ಅಥವಾ ಶರಾಬುದಾರ (ಅಬಕಾರಿ ಗುತ್ತಿಗೆದಾರ) ಮಹತ್ತಿನ ಮಠಗಳಿಗೆ ಮಾಡಿಕೊಟ್ಟ ಭೂಮಿ ಅಥವಾ ಗ್ರಾಮ ಕ್ರಯಪತ್ರಗಳು. ಅಂಥ ಮಠಗಳ ಪಟ್ಟಿಯೊಂದನ್ನು ಬೇರೆಡೆ ನೀಡಿದೆ. ಈ ದಾಖಲೆಗಳಲ್ಲಿ ವಿವರಗಳನ್ನು ದೀರ್ಘವಾಗಿ ಕೊಡಲಾಗಿದೆ ; ಕೆಲವೊಮ್ಮೆ ಪ್ರವಾಹ ಮತ್ತಿತರ ಕಾರಣಗಳಿಂದಾಗಿ ಉಂಟಾಗುವ ನಷ್ಟಭರ್ತಿಗೆ ಮುರಿಕೆಗಳನ್ನೂ ಸೂಚಿಸಲಾಗಿದೆ. ಅರಮನೆಗೆ ಸಲ್ಲಿಸಬೇಕಾದ ಕ್ರಯಧನವು ಗುತ್ತಗೆಯ ಹತ್ತು ವರ್ಷಗಳ ಮೊತ್ತವಿರಬೇಕೆಂದು ತೋರುತ್ತದೆ. ಬಂಜರು ಭೂಮಿಯ ಸಾಗುವಳಿಗೆ ಉತ್ತೇಜನವನ್ನು ನೀಡಲಾಯಿತಾದರೂ ಅಲ್ಲಿ ಬೆಳೆದ ಮರಗಳನ್ನು ಕಡಿದುಹಾಕುವಂತಿರಲಿಲ್ಲ (ತೀರ್ಥ. 85).

ಹಿಂದೂ ದೇವದೇವತೆಗಳಿಗೆ (ಶಿವ. 92 ಹಾಗೂ ತೀರ್ಥ. 114, 130, 149, 156 ಇತ್ಯಾದಿ) ಮತ್ತು ಮುಸ್ಲಿಂ ಮಸೀದಿಗೆ (ತೀರ್ಥ. 40) ದಾನಗಳನ್ನೂ ಶಾಸನಗಳು ದಾಖಲಿಸುತ್ತವೆ. ಅಗ್ರಹಾರಗಳು ಪ್ರಭುಗಳ (ತೀರ್ಥ. 134, 223) ರಾಣಿಯರ ಮತ್ತಿತರರ ಹೆಸರುಗಳಲ್ಲಿ ರೂಪುಗೊಂಡವು. ವೀರಭದ್ರಾಪುರ (ಶಿವ. 92), ತೀರ್ಥರಾಜಪುರ (ತೀರ್ಥ. 120, 156), ತ್ರಿಯಂಬಕಪುರ (ಶಿವ. 90), ಭದ್ರಾಪುರ (ತೀರ್ಥ. 203), ಶಂಕರನಾರಾಯಣಪುರ (ತೀರ್ಥ. 130), ಶಿವರಾಜಪುರ (ತೀರ್ಥ. 159, 164, 165, 167), ಮುನಿಬೃಂದಪುರ (ತೀರ್ಥ. 210), ಸೋಮಶೇಖರಪುರ (ಶಿವ. 43), ವೆಂಕಟಾಪುರ (ತೀರ್ಥ. 143), ಭದ್ರರಾಜಪುರ (ತೀರ್ಥ. 3, 134, 220, 231), ಭಾರತೀಪುರ (ತೀರ್ಥ. 193) ಮುಂತಾದಂಥ ಅಗ್ರಹಾರಗಳನ್ನು ಉಲ್ಲೇಖಿಸಬಹುದು. ತೀರ್ಥಹಳ್ಳಿ ತಾಲ್ಲೂಕು ಅರುವತ್ತು ಅಗ್ರಹಾರಗಳ ಸೀಮೆಯಾಗಿತ್ತು.

ತೀರ್ಥ. 55 ಮತ್ತು 64ನೆಯ ಶಾಸನಗಳು (ಮಹಮ್ಮದೀಯರ) ದಾಳಿಗಳನ್ನು ಉಲ್ಲೇಖಿಸುತ್ತವೆ. ಇವೆರಡೂ ಶಾಸನಗಳಲ್ಲಿ ಇದಕ್ಕೆ ಬಳಸಿದ ಶಬ್ದ 'ಅವಾಂತ್ರ'. ಮಠವೊಂದಕ್ಕೆ "ಹೇರೆತ್ತುಗಳ ಮೇಲಿನ ಸಾಗಣಿಸುಂಕಪಾವತಿಗೆ ವಿನಾಯಿತಿ ನೀಡುವ" ತೀರ್ಥ 109ನೆಯ ಶಾಸನವು ದೇಶದ ಕೆಲವು ಭಾಗಗಳಲ್ಲಿ ತುರುಕರಿಗೆ ತೆರಿಗೆ ನೀಡುವ ಅಂಶವನ್ನು ಉಲ್ಲೇಖಿಸುತ್ತದೆ ("ಅವರು ತುರುಕರಿಗೆ ಪಗುದಿ ತೆರುಥಾರೆ"). ತೀರ್ಥ 68ನೆಯ ಶಾಸನವು ಭೋಗ್ಯದಿಂದ ಬಿಡಿಸಿಕೊಳ್ಳುವ ವಿಷಯವನ್ನು ಕುರಿತು ಉಲ್ಲೇಖಿಸುತ್ತದೆ.

ವಿಷಬೆರೆಸಿದ್ದರೂ – ಪಾರಾಗುವ ನಂಬಿಕೆಯಿಂದ – ಸೇವಿಸಿದ. ರಾಮರಾಜನ ಹೆಂಡತಿ ಲಕ್ಕಾಂಬಿಕಾ ಮತ್ತು ಅವರ ಮಗ ಶ್ರೀರಂಗರಾಜ. ಆತನ ಪತ್ನಿ ತಿರುಮಲಾಂಬಿಕಾ ; ಆಕೆಯಲ್ಲಿ ಆತನಿಗೆ ಜನಿಸಿದ ಮಕ್ಕಳು ರಾಮರಾಜ, ತಿರುಮಲರಾಜ ಹಾಗೂ ವೆಂಕಟಾದ್ರಿ. ರಾಮರಾಜನು ತನ್ನೆಲ್ಲ ಶತ್ರುಗಳನ್ನು ದಮನಮಾಡಿ ಭೂಮಂಡಲವನ್ನಾಳಿದನು ; ವೆಂಕಟಾದ್ರಿಯು ಅವನಿಗೆ ಸಹಾಯಕನಾಗಿದ್ದನು. ತಿರುಮಲ ಪಟ್ಟಾಭಿಷಿಕ್ತನಾದನು ; ಕಾಂಚೀ, ಶ್ರೀರಂಗ, ಶೇಷಾಚಲ, ಕನಕಸಭಾ, ಅಹೋಬಲಾದ್ರಿ ಮತ್ತಿತರ ಸ್ಥಳಗಳಲ್ಲಿ ಆತ ಮೇಲಿಂದ ಮೇಲೆ ಸುವರ್ಣದಾನ, ತುಲಾಪುರುಷ ಮತ್ತಿತರ ದಾನಗಳನ್ನು ಮಾಡಿದನು. ಆತನ ತರುವಾಯ ಅವನಿಗೆ ವೇಗಲಾಂಬೆಯಲ್ಲಿ ಜನಿಸಿದ ಮಗ ಶ್ರೀರಂಗರಾಯನು ಅಧಿಕಾರಕ್ಕೆ ಬಂದನು ; ತನ್ನನ್ನು ಉದ್ದಗಿರಿಯಲ್ಲಿ ಸ್ಥಾಪಿಸಿಕೊಂಡನು ; ಕೊಂಡವೀಡು, ವಿನಿಕೊಂಡಪುರ ಮತ್ತಿತರ ದುರ್ಗಗಳನ್ನು ಜಯಿಸಿ, ಪ್ರಮುಖ ಬ್ರಾಹ್ಮಣರಿಂದ ಸಿಂಹಾಸನದ ಮೇಲೆ ಪಟ್ಟಾಭಿಷಿಕ್ತನಾಗಿ ಪೆನುಗೊಂಡಪುರಿಯನ್ನು ನೆಲೆಮಾಡಿಕೊಂಡನು. ಆತ ಮುರಾರಿ ಪಾದ ಸೇರಿದಾಗ (ಅಥವಾ ಮೃತಪಟ್ಟಾಗ) ಆತನ ತಮ್ಮ ವೆಂಕಟಪತಿ ದೇವರಾಯನು ಸ್ಮರಗಿರಿಯಲ್ಲಿ ಸಾಮ್ರಾಜ್ಯದ ಸಿಂಹಾಸನಾಧೀಶ್ವರನಾಗಿ ತನ್ನದೇ ಗೋತ್ರಕ್ಕೆ ಸೇರಿದ ಗುರು ತಾತಯಾರ್ಯ್ಯ ಮತ್ತಿತರ ಮುಖ್ಯ ಬ್ರಾಹ್ಮಣರಿಂದ ಪ್ರತಿಷ್ಠಾಪಿತನಾದನು. ಸಿಂಹಾಸನವೇರಿದ ಮೇಲೆ, ಯವನರನ್ನು ಕೂಡಲೆ ನಿಗ್ರಹಿಸಿ, ಮಲಿಕ್–ಇಬ್ರಾಹಿಂನನ್ನು ಹೊರದಬ್ಬಿ ಆತ ಹತಾಶನಾಗಿ ತನ್ನ ನೆಲೆಗೆ ಹಿಂದಿರುಗುವಂತೆ ಮಾಡಿದನು ; ಹಾಗೂ ಮುಹಮ್ಮದ್ ಷಾಹನಿಗೆ ಪ್ರಬಲಪ್ರಹಾರ ಮಾಡಿದನು (ಗೋಲ್ಕೊಂಡದ ಕುತ್ಬ್–ಷಾಹಿ ದೊರೆಗಳು, ನೋಡಿ; 'ಎಪಿಗ್ರಾಫಿಯ ಇಂಡಿಕ' ಖಗಿ 270). ಆತನ ಪತ್ನಿಯರೆಂದರೆ ವೆಂಕಟಾಂಬಾ, ರಾಘವಾಂಬಾ, ಪೆದೋಬಮಾಂಬಾ ಹಾಗೂ ಪಿನೋಬಮಾಂಬಾ. ಆತನಿಗೆ ಕಾಂಭೋಜ, ಭೋಜ, ಕಳಿಂಗ, ಕರಹಾಟ ಮತ್ತಿತರ ದೊರೆಗಳು ದ್ವಾರಪಾಲಕರಾಗಿ ಸೇವೆಸಲ್ಲಿಸಿದರು ಹಾಗೂ ಸೇತುವಿನಿಂದ ಹಿಮಾದ್ರಿಯವರೆಗಿನ ತನ್ನೆಲ್ಲ ಶತ್ರುಗಳನ್ನೂ ದಮನಮಾಡಿ ತನ್ನ ಅಧಿಕಾರದಿಂದ ಕರ್ಣಾಟಸಿಂಹಾಸನಾಧೀಶ್ವರನಾಗಿದ್ದನು. ಎರಡು ಗ್ರಾಮಗಳನ್ನು ಮಲ್ಲಜ್ಯೋಸ್ಯ ಎಂಬಾತನಿಗೆ ದಾನವಿತ್ತನು. ಈ ಶಾಸನವನ್ನು ರಚಿಸಿದವನು ಸಭಾಪತಿಯ ಮೊಮ್ಮಗನಾದ ಕೃಷ್ಣಕವಿ ಕಾಮಕೋಟಿ."

ಮೇಳಿಗೆಯಲ್ಲಿ ಬೊಮ್ಮಿಸೆಟ್ಟಿಯು ಅನಂತತೀರ್ಥಂಕರ ಬಸದಿಯನ್ನು ಕಟ್ಟಿಸಿದನು. ಅವನ ಮೊಮ್ಮಗ ಬೊಮ್ಮಣಸೆಟ್ಟಿ ಮತ್ತು ಸ್ಥಳದ ಇತರರು ಅದನ್ನು ಕಲ್ಲಿನಲ್ಲಿ ಕಟ್ಟಿಸಿಕೊಟ್ಟರು (ತೀರ್ಥ. 215). ವೆಂಕಟಪತಿಯು ಪೆನುಗೊಂಡೆಯಿಂದ ರಾಜ್ಯವಾಳುತ್ತಿದ್ದ. ದೇವರ ಸೇವೆಗಾಗಿ ದಾನವೊಂದನ್ನೂ ನೀಡಲಾಯಿತು. ಈ ಸಂಪುಟದ ಕೊನೆಯ ವಿಜಯನಗರ ಶಾಸನವೆಂದರೆ ಯರಗನಹಾಳು ಅಗ್ರಹಾರದಲ್ಲಿರುವ ಕ್ರಿ.ಶ. 1621ರ ತೇದಿಯ ಶಿವ. 83. ಆಳುತ್ತಿದ್ದ ದೊರೆ ರಾಮರಾಯ. ಸಂತೆಬೆನ್ನೂರ ಪ್ರಭುವಾದ ಕೆಂಗನೃಪನು ಯರಗನಹಾಳು ಗ್ರಾಮವನ್ನು ವಿಜಯಿ ಬಿಳಿಗೆಯ ಪುಟ್ಟಪ್ಪನಿಗೆ ದಾನವಿತ್ತನು. ಪ್ರಭುವಿನ ಮಗ ಹನುಮನ ವಿವಾಹ ಮಹೋತ್ಸವ ಈ ದಾನದ ಸಂದರ್ಭ. ಪ್ರತಿಗ್ರಹಿಯು ಗ್ರಾಮವನ್ನು ಹತ್ತು ವೃತ್ತಿಗಳಾಗಿ ವಿಂಗಡಿಸಿ ಬ್ರಾಹ್ಮಣರಿಗೆ ಕೊಟ್ಟನು.

ಕೆಳದಿ

ವಿಜಯನಗರದ ಆಳ್ವಿಕೆಯು ದುರ್ಬಲವೂ ಸಡಿಲವೂ ಆದಾಗ ಹಲವು ಕಿರುಮನೆತನಗಳು ಪ್ರಬಲಗೊಂಡವು. ಅಂಥವುಗಳಲ್ಲಿ ಕೆಳದಿ ವಂಶಕ್ಕೆ ಸೇರಿದ ದೊರೆಗಳು ದಕ್ಷಿಣ ಕರ್ನಾಟಕದ ಹಲವು ಜಿಲ್ಲೆಗಳನ್ನು ಆಳಿದರು. ಪ್ರಸ್ತುತ ಸಂಪುಟದಲ್ಲಿ ಕೆಳದಿ ವಂಶಕ್ಕೆ ಸೇರಿದ ನೂರಿಪ್ಪತ್ತಕ್ಕೂ ಹೆಚ್ಚು ಶಾಸನಗಳಿವೆ. ಪ್ರಸ್ತುತ ಸಂಪುಟದಲ್ಲಿರುವ ಅತಿದೀರ್ಘತಾಮ್ರಶಾಸನ ತೀರ್ಥ. 223. ಎಂಟು ಹಲಗೆಗಳಿಂದ ಕೂಡಿದ ಇದರಲ್ಲಿ 438 ಸಾಲುಗಳಿವೆ. ಇದು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು 1997ರಲ್ಲಿ ಪ್ರಕಟಿಸಿದ 'ಕಾಪರ್‌ಪ್ಲೇಟ್ ಇನ್‌ಸ್ಕ್ರಿಪ್ಷನ್ಸ್ ಫ್ರಮ್ ಕರ್ನಾಟಕ'ದಲ್ಲಿ ಹೊಸಶಾಸನವಾಗಿ ಪ್ರಕಟವಾಗಿದೆ ; ಆದರೆ ಒಂದು ಹಲಗೆ ಸೇರಿ. ಕ್ರಿ.ಶ. 1560 ರಿಂದ ಕ್ರಿ.ಶ. 1737ರ ವರೆಗೆ ಈ ಶಾಸನಗಳ ತೇದಿಗಳು ವ್ಯಾಪಿಸಿವೆ ; ಈ ವಂಶದ ಒಟ್ಟು ಹದಿನೆಂಟು ಪ್ರಭುಗಳಲ್ಲಿ ಸುಮಾರು ಹನ್ನೆರಡು ಜನ ಆಳುವವರಿಗೆ ಅವು ಸಂಬಂಧಿಸಿದ್ದಾಗಿವೆ. ಈ ವಂಶದ ಆಳರಸರ ಬಗ್ಗೆ ಶಿವ 90ನೆಯ ಶಾಸನವು ನಮಗೆ ಕೆಲವು ವಿವರಗಳನ್ನು ಒದಗಿಸುತ್ತವೆ. ಸದಾಶಿವನಿಂದ ಈ ವಂಶದ ಆರಂಭವಾಗಿದ್ದು, ಆತನ ಮಗ ಸಂಕೇಂದ್ರ ; ಆತನ ಮಗ ವೆಂಕಟ, ಈತನನ್ನು 'ಕರ್ನಾಟಧರಣೀ ವಜ್ರಕವಾಟಾಯಿತ ವಿಕ್ರಮ'ನೆಂದೂ ತೌಳವ, ಕಿರಾತ ಮತ್ತು ಮ್ಲೇಚ್ಛರನ್ನು ನಿಯಂತ್ರಿಸಿದ ವನೆಂದೂ ಬಣ್ಣಿಸಿದೆ. ಈತನ ಉತ್ತರಾಧಿಕಾರಿ ಭದ್ರ ಮತ್ತು ಅನಂತರ ವೀರಭದ್ರ, ವೀರಭದ್ರನು ವಿಜಯನಗರದರಸ ವೇಂಕಟಾದ್ರಿಗೆ ಎಲ್ಲ ಕಾರ್ಯಗಳಲ್ಲಿ ಬಲಭುಜದಂತಿದ್ದ (ಸರ್ವಕಾರ್ಯ್ಯೇಷುದಕ್ಷಿಣೋಚ್ಚ ಭುಜಾಯಿತಃ). ಇತರ ಶಾಸನಗಳಿಂದ ನಮಗೆ ಕೆಳದಿ ವಂಶದ ಅರಸರ ಹೆಸರುಗಳು ತಿಳಿದುಬರುತ್ತವೆ. ಅವರ ಬಿರುದುಗಳಲ್ಲಿ ಗಮನಾರ್ಹವಾದವೆಂದರೆ ಯಡವಮುರಾರಿ, ಕೋಟೆಕೋಳಾಹಳ ಹಾಗೂ ವಿಶುದ್ಧವೈದಿಕಾದ್ವೈತಸಿದ್ಧಾಂತಪ್ರತಿಷ್ಠಾಪಕ. ಕೆಳದಿ ದೊರೆಗಳಿಗೆ ಸೇರಿದ ಕೆಲವು ಪ್ರಮುಖ ದಾಖಲೆಗಳನ್ನು ಬಹಳ ಸಂಕ್ಷಿಪ್ತವಾಗಿ, ಇಲ್ಲಿ ಸಮೀಕ್ಷಿಸಬಹುದು.

ಕ್ರಿ.ಶ. 1514ರಲ್ಲಿ ಕೃಷ್ಣದೇವರಾಯನು ವಿಜಯನಗರದ ದೊರೆಯಾಗಿದ್ದ (ಶಿವ. 89). ಆತನ ವಂಶಾವಳಿಯನ್ನು ಶಾಸನ ಕೊಡುತ್ತದೆ ; ರೈಸ್ ಅವರು ಶಿವಮೊಗ್ಗ ಸಂಪುಟ 7ಕ್ಕೆ ಬರೆದ ಪೀಠಿಕೆಯಲ್ಲಿ ಅದನ್ನು ವಿವರವಾಗಿ ಬರೆದಿದ್ದಾರೆ. ವಿಜಯನಗರ ದೊರೆಗಳ ಸಾಂಪ್ರದಾಯಿಕ ಸಾಧನೆ ಸಿದ್ಧಿಗಳ ಬಣ್ಣನೆಯನ್ನು ಅವರ ಅನೇಕ ತಾಮ್ರಶಾಸನಗಳಲ್ಲಿ ಕಾಣಬಹುದು. 'ಕಂಧಾಚಾರ ದ್ವಿಜೇಂದ್ರ'ನಾದ ಮಾದಪ್ಪನ ಮಗ ತಿಪ್ಪಸೋಮನ ಕೋರಿಕೆಯ ಮೇರೆಗೆ ದೊರೆಯು ತುಂಗಾ ಮತ್ತು ಭದ್ರಾನದಿಗಳ ನಡುವಣ ಪ್ರದೇಶದಲ್ಲಿದ್ದ ಭಂಡಾರಿಪಳ್ಳಿಯನ್ನು ದಾನವಿತ್ತನೆಂದು ಪ್ರಸ್ತುತ ಶಾಸನ ತಿಳಿಸುತ್ತದೆ. ಶ್ರೀರಂಗ ರಾಜ್ಯದ ಹೊನ್ನೂರು ಸೀಮೆಯಲ್ಲಿದ್ದ ಈ ಭಂಡಾರಿಪಳ್ಳಿಗೆ ಕೃಷ್ಣರಾಯಪುರವೆಂಬ ಪ್ರತಿನಾಮ ಪ್ರಾಪ್ತವಾಯಿತು. ಹರಿತಗೋತ್ರ, ಆಪಸ್ತಂಬ ಸೂತ್ರ ಮತ್ತು ಯಜುಶ್ಶಾಖೆಗೆ ಸೇರಿದ ಮಾಧವಾರಾಧ್ಯನ ಮಗ ವಿಶ್ವೇಶ್ವರ ದಾನ ಪಡೆದವನು. ಆರಗ ರಾಜ್ಯದ ಗಾಜನೂರು ಸ್ಥಳಕ್ಕೆ ಸೇರಿದ ಗಂಗಮಂಡಲನಾಡಿನಲ್ಲಿದ್ದ ಊರುಕಡವೂರು ಮತ್ತು ಅದರ ಉಪಗ್ರಾಮಗಳನ್ನು ದಾನ ನೀಡಲಾದ ಸಂಗತಿಯನ್ನು ಮತ್ತೂರು ಅಗ್ರಹಾರದ ಶಿವ. 81ನೆಯ ಶಾಸನವು ದಾಖಲಿಸುತ್ತದೆ. ದಾನ ಸ್ವೀಕರಿಸಿದವನು ಹಣ್ಣೆ ತಿಪ್ಪರಸನ ಮಗ ತ್ರಂಬಕನೆಂಬುವನು. ದೊರೆಯೇ ದಾನಿ. ದಾನವಿತ್ತ ಗ್ರಾಮವನ್ನು ಕೃಷ್ಣರಾಯಪುರವೆಂದು ಕರೆಯಲಾಯಿತು. ಪ್ರತಿಗ್ರಹಿಯು ತಾನು ಪಡೆದ ಗ್ರಾಮವನ್ನು ನೂರ ಇಪ್ಪತ್ತು ವೃತ್ತಿಗಳಾಗಿ ವಿಂಗಡಿಸಿ, ಮೂವತ್ತು ವೃತ್ತಿಗಳನ್ನು ತನಗಾಗಿ ಇರಿಸಿಕೊಂಡು ಉಳಿದವನ್ನು ಹಲವು ಬ್ರಾಹ್ಮಣರಿಗೆ ನೀಡಿದನು. ಶಾಸನದಲ್ಲಿ ಉಕ್ತವಾದ ಮೊದಲ ವೃತ್ತಿಯು 'ಶಿವಧ್ಯಾನಪರಾಧೀನ ಚೇತರಾದ' ಶ್ರಿಂಗೇರ್ಯೊಡಯರಿಗೆ ಅರ್ಪಿತವಾಯಿತು ; ಅವರನ್ನು 'ಶ್ರೀಪಾದಾನಾಂಶಿರೋರತ್ನಂ' ಎಂದು ಗೌರವದಿಂದ ಬಣ್ಣಿಸಲಾಗಿದೆ, ಇನ್ನೊಂದು ವೃತ್ತಿಯನ್ನು ತೀರ್ಥಹಳ್ಳಿ ಮಠದ 'ಶ್ರೀಪಾದಶೇಖರ' ಎನಿಸಿದ ಅಮರಾಧೀಶಪುರಿಯವರಿಗೆ ನೀಡಲಾಯಿತು. ಕೂಡ್ಲಿಯ ಶಿವ. 46ನೆಯ ಶಾಸನದ ಕಾಲ ಕ್ರಿ.ಶ. 1527. ಕೂಡಲಿಮಠದ ರಘುಪತಿಯತೀಂದ್ರರ ಶಿಷ್ಯರಾದ ನಾರಾಯಣಯತೀಂದ್ರರಿಗೆ ಕೆಲವು ಗ್ರಾಮಗಳನ್ನು ದತ್ತಿ ಬಿಟ್ಟ ವಿಷಯವನ್ನು ಅದು ದಾಖಲಿಸುತ್ತದೆ. ದೊರೆ ಕೃಷ್ಣದೇವರಾಯ ದಾನಿ. ಹಾಗೆಯೇ ಅದೇ ವರ್ಷದಲ್ಲಿ ವೈಷ್ಣವಾಗಮ ಸಿದ್ಧಾಂತ ಪ್ರತಿಷ್ಠಾಚಾರ್ಯಮೌಳಿ, ನರವೇಷದಲ್ಲಿರುವ ಶೇಷ, ಮದ್ಧ್ವಾಚಾರ್ಯ ಮತಾಂಭೋಜಮಾರ್ತಾಂಡ ಎಂದು ಬಣ್ಣಿಸಲ್ಪಟ್ಟ ವ್ಯಾಸತೀರ್ಥಯತೀಂದ್ರರು ದೊರೆಯಿಂದ ಗೌರಾಪುರ ಗ್ರಾಮವನ್ನು ದಾನವಾಗಿ ಪಡೆದರು. ಈ ಯತೀಂದ್ರರು ಬ್ರಹ್ಮಣ್ಯತೀರ್ಥರ ಶಿಷ್ಯರಾಗಿದ್ದರು. ದಾನಗ್ರಾಮಕ್ಕೆ ವ್ಯಾಸಪುರವೆಂಬ ಪ್ರತಿನಾಮಧೇಯನ್ನು ನೀಡಲಾಯಿತು. ದಾನಪಡೆದ ಯತೀಂದ್ರರು ಆ ಗ್ರಾಮವನ್ನು ಮೂವತ್ತೆರಡು ವೃತ್ತಿಗಳಾಗಿ ವಿಂಗಡಿಸಿದರು ; ಐದು ವೃತ್ತಿಗಳು ಮಠದ ರಾಮದೇವರಿಗೆ ಸಂದವು ; ಉಳಿದವನ್ನು ವೇದಾಂತಪಾರಗರಾದ ವಿವಿಧ ಗೋತ್ರಗಳಿಗೆ ಸೇರಿದ ವಿಪ್ರರಿಗೆ ನೀಡಲಾಯಿತು (ಶಿವ. 47).

ಬಳಗೋಡುಗ್ರಾಮದ ತೀರ್ಥ. 180ನೆಯ ಶಾಸನವು ಸದಾಶಿವರಾಯನ ಆಳ್ವಿಕೆಗೆ ಸೇರಿದುದು ; ಅದರ ಕಾಲ ಕ್ರಿ.ಶ. 1560. ಸದಾಶಿವರಾಯನಾಯಕ ಎಂಬಾತ ಆರಗ ರಾಜ್ಯವನ್ನು ಪಾಲಿಸುತ್ತಿದ್ದನೆಂದು ಈ ಶಾಸನ ತಿಳಿಸುತ್ತದೆ. ಕೃಷ್ಣದೇವ ಎಂಬ ವ್ಯಕ್ತಿಯು ನರಸಿಂಹಪುರವಾದ ಬಳ್ಳಗೋಡಿನಲ್ಲಿ ಲಕ್ಷ್ಮೀನಾರಾಯಣದೇಗುಲದ ನಿರ್ಮಾಣ ಮತ್ತು ದೇವಪ್ರತಿಷ್ಠಾಪನೆ ಮಾಡಿಸಿದ ವಿಷಯವನ್ನು ಇದು ದಾಖಲಿಸುತ್ತದೆ. ದೇವರ ಸೇವೆಗೆ ಹಾಗೂ ಛತ್ರಕ್ಕೆ ಕೂಡ ಗ್ರಾಮದ ಮಹಾಜನರು ಭೂದಾನವಿತ್ತರು. ಕುರುವಳ್ಳಿಯ ತೀರ್ಥ. 118ನೆಯ ಶಾಸನದ ಕಾಲ ಕ್ರಿ.ಶ. 1564. ತುಂಗಾನದಿಯ ದಕ್ಷಿಣತೀರದ ಮಲೆಯಾಳಮಠದಲ್ಲಿ ದೇವೇಂದ್ರಪುರಿಯೋಗಿವರ್ಯರು ವಿಶ್ವೇಶ್ವರದೇವರ ಪ್ರತಿಷ್ಠೆ ಮಾಡಿಸಿದ ಸಂಗತಿಯನ್ನು ಅದು ಉಲ್ಲೇಖಿಸುತ್ತದೆ ; ಯತಿಗಳ ಪರಂಪರೆಯನ್ನೂ ಶಾಸನದಲ್ಲಿ ಹೇಳಿದೆ.

ಕೂಡ್ಲಿಯ ಶಿವ. 45ನೆಯ ಶಾಸನವು ವೆಂಕಟಪತಿಯ ಆಳ್ವಿಕೆಗೆ ಸೇರಿದ್ದು, ಮಲ್ಲಾಜ್ಯೋಸ್ಯ ಎಂಬಾತನಿಗೆ ಎರಡು ಗ್ರಾಮಗಳನ್ನು ದಾನವಿತ್ತ ವಿಷಯವನ್ನು ನಿರೂಪಿಸುತ್ತದೆ. ಈ ತಾಮ್ರಶಾಸನದಲ್ಲಿ ದೊರೆಯ ವಂಶಾವಳಿಯನ್ನು ನೀಡಿದೆ. ರೈಸ್ ಅವರ ಉಲ್ಲೇಖವಿದು: "ಚಂದ್ರನಿಂದ (ಹರಿಯ ವಾಮನೇತ್ರ), ಬುಧ, ಪುರೂರವ, ಆಯು, ನಹುಷ, ಯಯಾತಿ ಹಾಗೂ ಪುರುಗಳ ಈ ವಂಶದಲ್ಲಿ ಭರತ ಜನಿಸಿದ. ಆತನ ವಂಶದಲ್ಲಿ ಬಂದವನು ಶಂತನು ; ಈತನಿಂದ ನಾಲ್ಕನೆಯ ತಲೆ ವಿಜಯ ; ಈತನಿಂದ ಅಭಿಮನ್ಯು ; ಹಾಗೂ ಅಭಿಮನ್ಯುವಿನಿಂದ ಪರೀಕ್ಷಿತ್. ಆತನಿಂದ ಎಂಟನೆಯ ತಲೆ ನಂದ ; ಅವನಿಂದ ಒಂಬತ್ತನೆಯ ತಲೆ ಚಲಿಕ್ಕ ; ಅವನಿಂದ ಏಳನೆಯ ತಲೆ ರಾಜನರೇಂದ್ರ ; ಅವನಿಂದ ಹತ್ತನೆಯ ತಲೆ ಬಿಜ್ಜಳೇಂದ್ರ ಹಾಗೂ ಆತನಿಂದ ಮೂರನೆಯ ತಲೆ ಮಾಯಾಪುರೀವಲ್ಲಭನಾದ ಹೆಮ್ಮಾಡಿರಾಯ ; ಈತ ಮುರಾರಿಗೆ ಸಾಷ್ಟಾಂಗವೆರಗಿದ. ಆತನಿಂದ ನಾಲ್ಕನೆಯವನು ತಾತಪಿನ್ನಮ ; ಇವನಿಂದ ಜನಿಸಿದವನು ಒಂದೇ ದಿನದಲ್ಲಿ ಸಪ್ತದುರ್ಗಗಳನ್ನು ವಶಪಡಿಸಿಕೊಂಡ ಸೋಮದೇವ. ಆತನ ಮಗ ರಾಘವದೇವ ; ಆತನಿಂದ ಬಂದವನು ಪಿನ್ನಮ, ಆರವೀಟಿನಗರದೊಡೆಯ; ಈತನ ಮಗ ಬುಕ್ಕ ; ಈತ ಸಾಳುವ ನೃಸಿಂಹರಾಜ್ಯವನ್ನು ಸದೃಢವಾಗಿ ಸ್ಥಾಪಿಸಿದ. ಬುಕ್ಕ ಬಲ್ಲಾಂಬಿಕಾ ಎಂಬಾಕೆಯನ್ನು ವಿವಾಹವಾದ. ಅವರಿಬ್ಬರ ಮಗ ರಾಮರಾಜ. ಸಪಾದನ ಸಪ್ತತಿ ಸಹಸ್ರ ಸಿಂಧು ಅಶ್ವ ಸೈನ್ಯದಿಂದ ಅದು ಸಂರಕ್ಷಿತವಾಗಿದ್ದರೂ ಆತ ಯುದ್ಧದಲ್ಲಿ ಆದವಾನಿ ಗಿರಿದುರ್ಗವನ್ನು ದಮನ ಮಾಡಿದ ಹಾಗೂ ಅಧಿಕಾರದಲ್ಲಿ ಇಂದ್ರನಿಗೆ ಸವಾಲೆಸೆದ ಕಾಸಪ್ಪುಡಯನು ಪಲಾಯನಗೈಯುವಂತೆ ಮಾಡಿದ. ಉತ್ತುಂಗವಾದ ಕಂದನವೋಳಿದುರ್ಗವನ್ನು ಕೂಡ ಅವನು ವಶಪಡಿಸಿಕೊಂಡು, ಅಲ್ಲಿನ ಹರಿಚರಣತೀರ್ಥವನ್ನು ಅದಕ್ಕೆ ಅವನ ಜ್ಞಾತಿಗಳು

ವೃತ್ತಿಗಳಾಗಿ ವಿಂಗಡಿಸಿ, ಮಹಾಜನರಿಗೆ ವಿತರಿಸಲಾಯಿತು. ಹಾಗೆಯೇ ಕ್ರಿ.ಶ. 1408ರಲ್ಲಿ ಒಂದನೆಯ ದೇವರಾಯನ ಆಳ್ವಿಕೆ ಇದ್ದಾಗ, ಆರಗದ ಸಮಸ್ತ ಗೌಡುಪ್ರಜೆಗಳು ನಾಗಸಮುದ್ರ ಅಗ್ರಹಾರವನ್ನು ರೂಪಿಸಿದರು (ತೀರ್ಥ. 224). ತೀರ್ಥಮುತ್ತೂರಿನ ಜ್ಞಾನೇಂದ್ರಭಾರತೀ ಶ್ರೀಪಾದರಿಗೆ ಸಂಬಂಧಪಟ್ಟ ಕೆಲವು ಕ್ರಯಪತ್ರಗಳೂ ಸಂಪುಟದಲ್ಲಿವೆ.

ಭದ್ರಾವತಿಯ ಭದ್ರಾ. 22ನೆಯ ಶಾಸನವು ನರಸಿಂಹದೇವಾಲಯದ ನಿರ್ಮಾಣವನ್ನು ಉಲ್ಲೇಖಿಸುತ್ತದೆ. ಕಾಡುಕಡಿದ ನಂತರ ಕೆರೆಯೊಂದನ್ನು ಕಟ್ಟಿಸಿದುದನ್ನು ಹಾಗೂ ನರಸಿಂಹಪುರ ಮತ್ತು ಲಕ್ಷ್ಮೀಪುರಗಳ ಸ್ಥಾಪನೆಯನ್ನು ಅದು ದಾಖಲಿಸುತ್ತದೆ. ಇವನ್ನು ಮಾಡಿಸಿದವನು ಯೆರೆ ಬೊಮ್ಮ ಎಂಬಾತ.

ವಿಜಯನಗರ ಕಾಲದಲ್ಲಿ ಅಗ್ರಹಾರಗಳು ಅಪಾರ ಸಂಖ್ಯೆಯಲ್ಲಿ ಸ್ಥಾಪಿತವಾದವು. ಬೆಳಲಿ ಮತ್ತು ಕಿತ್ತಡೂರುಗಳನ್ನು ಸೇರಿಸಿ ಅಕ್ಕಾಂಬಿಕಾಪುರವೆಂಬ ಅಗ್ರಹಾರವನ್ನು ವಿಠಣ್ಣ ಸ್ಥಾಪಿಸಿದ ; ತನ್ನ ತಾಯಿಯ ನೆನಪಿಗಾಗಿ ಅಗ್ರಹಾರಕ್ಕೆ ಹಾಗೆ ಹೆಸರಿಟ್ಟ ಆತ ಅದನ್ನು ಇಪ್ಪತ್ತೆರಡು ವೃತ್ತಿಗಳಾಗಿ ವಿಂಗಡಿಸಿ, ಬ್ರಾಹ್ಮಣರಿಗೆ ದಾನವಿತ್ತ. ಮೊದಲ ವೃತ್ತಿಯು ಕ್ರಿಯಾಶಕ್ತಿದೇವರ ಪಾದಗಳಿಗೆ ಸಮರ್ಪಿತವಾದ ಸಂಗತಿಯನ್ನು ಗಮನಿಸಬೇಕು. ದಕ್ಷಿಣಾಮೂರ್ತಿ ವೈರಾಗ್ಯ ಶಿವಾಚಾರ್ಯರಿಗೆ ಒಂದು ವೃತ್ತಿಯನ್ನು ಕೊಡಲಾಯಿತು (ತೀರ್ಥ. 190).

ಕ್ರಿ.ಶ. 1421ರಲ್ಲಿ ನಾವು ಶ್ರೀಗಿರಿನಾಥವೊಡೆಯನನ್ನು ಆರಗ ರಾಜ್ಯದ ಪಾಲಕನನ್ನಾಗಿ ನೋಡುತ್ತೇವೆ (ತೀರ್ಥ. 148). ತೀರ್ಥಮುತ್ತೂರಿನ ಪರಮಹಂಸ ಪರಿವ್ರಾಜಕಾಚಾರ್ಯರಾದ ಶಂಕರಭಾರತಿಯವರಿಗೆ ಹಂಗರಬಯಲಿನಲ್ಲಿ ಸ್ವಲ್ಪ ಭೂಮಿಯನ್ನು ಸಾಂತಳಿಗೆ ನಾಡಿನ ಹಿರಿಯ ಹೊಳಲೂರು ಮಹಾಜನರು ದಾನ ಮಾಡಿದ ವಿಷಯ ತಿಳಿದುಬರುತ್ತದೆ. ಎರಡನೆಯ ದೇವರಾಯನ ಕಾಲದಲ್ಲಿಯೂ ಶ್ರೀಗಿರಿನಾಥ ಅಥವಾ ಸಿರಿಗಿರಿನಾಥನಿಗೆ ಆರಗರಾಜ್ಯವನ್ನು ಪಾಲಿಸುವ ಅಧಿಕಾರ ಮುಂದುವರಿಯಿತು. ಸುಬ್ರಹ್ಮಣ್ಯಭಟ್ಟ ಮತ್ತು ಚೆನ್ನಮಾಂಬಾ ಅವರ ಮಗ ರಾಮಣ್ಣನಿಂದ ಗಂಗಾಧರಪುರಿಶ್ರೀಪಾದರು ಬುಕ್ಕರಾಜಪುರದ ಉಪಗ್ರಾಮ ಹೆನ್ನಂಗಿಯಲ್ಲಿ ಸ್ವಲ್ಪ ಭೂಮಿಯನ್ನು ಕೊಂಡು, ಒಂದು ಛತ್ರಕ್ಕಾಗಿ ದಾನ ನೀಡಿದರು (ತೀರ್ಥ. 152). ಅಖಂಡಬ್ರಹ್ಮೇಶ್ವರ ದೇವರ ಸೇವೆಗಳಿಗಾಗಿ ಈ ಶ್ರೀಗಿರಿನಾಥ ಐವತ್ತೈದು ವರಹಗಳನ್ನು ಕೊಟ್ಟನು (ತೀರ್ಥ. 21).

ಶಿವ. 33ನೆಯ ಶಾಸನದ ಪ್ರಕಾರ ಬೈಚಪ್ಪದಂಡನಾಯಕ ಬುಕ್ಕನ ಮಂತ್ರಿಯಾಗಿದ್ದ. ಆತನ ವಂಶಾವಳಿಯನ್ನು ಕೊಟ್ಟಿದೆ ; ಆತನ ವಂಶಸ್ಥನಾದ ಮಹಾಪ್ರಧಾನ ರಾಯಣ್ಣವೊಡೆಯನ ಕ್ರಿ.ಶ. 1431ರಲ್ಲಿ ಆರಗರಾಜ್ಯವನ್ನು ಪಾಲಿಸುತ್ತಿದ್ದ. ಆನವೇರಿನಾಡು ಮತ್ತು ಹೊಳೆಯಹೊನ್ನೂರುನಾಡಿನಂಥ ಇತರ ಕೆಲವು ನಾಡುಗಳೂ ಆತನ ಅಧಿಕಾರವ್ಯಾಪ್ತಿಗೆ ಒಳಪಟ್ಟಿದ್ದವು. ಆತನ ಜನೋಪಯೋಗಿ ಕಾರ್ಯಗಳಿಗಾಗಿ ಹನಗವಾಡಿಭಾಗ ಮತ್ತು ಹೊಳೆಯಹೊನ್ನೂರು ನಾಡಿನ ಪ್ರಜೆಗಳು ಆತನಿಗೆ ದಣ್ಣಾಯಕಪುರವನ್ನು ನೀಡಿದರಂತೆ. ಕೂಡಲಿಯ ಸಮಸ್ತದೇವತಾಸನ್ನಿಧಿಯಲ್ಲಿ ಈ ದಾನವನ್ನು ಮಾಡಲಾಯಿತು. ಆತ ಭಾರದ್ವಾಜಗೋತ್ರಕ್ಕೆ ಸೇರಿದವನು ಹಾಗೂ ಆತನ ಮಗ ಶ್ರೀಗಿರಿನಾಥವೊಡೆಯ (ತೀರ್ಥ. 14). ಮೇಗರವಳ್ಳಿಗ್ರಾಮವನ್ನು ಅಲ್ಲಿನ ಕೆಲವು ಹೆಗ್ಗಡೆಗಳು ದೇವಣ ಆಚಾರ್ಯರಿಗೆ ಶ್ರೋತ್ರಗುತ್ತಗೆಯಾಗಿ ಕ್ರಿ.ಶ. 1434ರಲ್ಲಿ ನೀಡಲಾಯಿತು (ತೀರ್ಥ. 214). ಸದರಿಗ್ರಾಮವು ಮದವಳಿಗೆನಾಡಿಗೆ ಸೇರಿತ್ತು. ಮೂರುವರ್ಷಗಳ ಅನಂತರ, ಕ್ರಿ.ಶ. 1437ರಲ್ಲಿ ಶ್ರೀಗಿರಿನಾಥನು ಆರಗರಾಜ್ಯವನ್ನು ಆಳುತ್ತಿದ್ದಾಗ, ಮಠವೊಂದರ ನಿರ್ಮಾಣಕ್ಕಾಗಿ ಮುತ್ತಪ್ಪರಸ ಹೆಗ್ಗಡೆಯು ಭೂಮಿದಾನ ಮಾಡಿದನು. ಈ ದಾನವನ್ನು ಸ್ವೀಕರಿಸಿದವರು ಗಂಗಾಧರಪುರಿಶ್ರೀಪಾದ ಹಾಗೂ ತೀರ್ಥಹಳ್ಳಿಯ ಮಲೆಯಾಳಮಠದ ಪದ್ಮನಾಭತೀರ್ಥರು. ಶಾಸನ ತ್ರುಟಿತವಾಗಿದೆ (ತೀರ್ಥ. 123).

ತೂದೂರಿನ ತೀರ್ಥ. 169ನೆಯ ಶಾಸನದಲ್ಲಿ ಎರಡನೆಯ ದೇವರಾಯನ ಸಾಹಸಸಿದ್ಧಿಗಳನ್ನು ವಿವರಿಸಿದೆ. ಇಂಥ ಬಣ್ಣನೆ ಸಾಂಪ್ರದಾಯಿಕವಾಗಿದ್ದು ಅನೇಕ ತಾಮ್ರಶಾಸನಗಳಲ್ಲಿ ಕಂಡುಬಂದಿರುವಂಥದೇ ಆಗಿದೆ. ಈ ಶಾಸನದ ಕಾಲ ಕ್ರಿ.ಶ. 1445. ಅನಂತತೀರ್ಥ ಶ್ರೀಪಾದರಿಗೆ ಮೇಣಂಗಿ ಗ್ರಾಮವನ್ನು ದಾನವಿತ್ತ ಸಂಗತಿ ಅದರಲ್ಲಿ ನಿರೂಪಿತವಾಗಿದೆ. ದಾನವಿತ್ತ ಗ್ರಾಮಕ್ಕೆ ಲಕ್ಷ್ಮೀನಾರಾಯಣಪುರವೆಂದು ಹೊಸ ಹೆಸರು ಇಡಲಾಯಿತು.

ತೀರ್ಥಹಳ್ಳಿಯ ತೀರ್ಥ. 155ನೆಯ ಶಾಸನವು ಮಲ್ಲಿಕಾರ್ಜುನನ ಆಳ್ವಿಕೆಗೆ ಸೇರಿದುದು. ಆತನನ್ನು ಇಮ್ಮಡಿದೇವರಾಯನೆಂದೂ ಕರೆದಿದೆ. ಆರಗ ರಾಜ್ಯವನ್ನು ಪಾಲಿಸುತ್ತಿದ್ದ, ಶ್ರೀಗಿರಿನಾಥನ ಮಗನಾದ, ದೇವಪ್ಪ ದಂಡನಾಥನಿಗೆ ಗಜಬೇಟೆ ದೇವರಾಯಪುರವೆಂಬ ಪ್ರತಿನಾಮ ಪಡೆದಿದ್ದ ಸರಬಳಿಗೆ ಗ್ರಾಮವನ್ನೂ ಅದರ ಉಪಗ್ರಾಮಗಳನ್ನೂ ದೊರೆಯು ದಾನ ನೀಡಿದನಂತೆ. ಈ ದಾನಕ್ಕೆ ಕಾರಣ ತನ್ನ ಮಗನಿಗೆ ದೇವರಾಯನೆಂಬ ನಾಮಕರಣೋತ್ಸವ ಮಾಡಿದುದು (ದೇವರಾಯಾಭಿಧಾನಸ್ಯ ಶ್ರೀ ನಾಮಕರಣೋತ್ಸವೇ). ಗ್ರಾಮವನ್ನು ಸ್ವೀಕರಿಸಿದ ದೇವಪ್ಪನು ಅದನ್ನು ಅಗ್ರಹಾರವನ್ನಾಗಿ ಮಾಡಿ, ಹಲವು ವೃತ್ತಿಗಳಾಗಿ ವಿಂಗಡಿಸಿ ವಿವಿಧ ಗೋತ್ರ ಸೂತ್ರಗಳಿಗೆ ಸೇರಿದ ಬ್ರಾಹ್ಮಣರಿಗೆ ದಾನವಿತ್ತನು. ಈ ಶಾಸನದ ಕಾಲ ಕ್ರಿ.ಶ. 1463. ಕ್ರಿ.ಶ. 1468ರಲ್ಲಿ ಆತ ಆರಗದ ರಾಜ್ಯಪಾಲನಾಗಿ ಮುಂದುವರಿದಿದ್ದನು (ತೀರ್ಥ. 177).

ನೀಡಿದ ಭೂಮಿವ್ಯವಹಾರದ ಬಗೆಗಿನ ಕ್ರಯಪತ್ರವಿದು. ಕೆಲವು ವಾರಗಳ ಅನಂತರ ಇದೇ ರಾಜ್ಯಪಾಲನು, ತೀರ್ಥಮುತ್ತೂರು ಮಠದ ಜ್ಞಾನೇಂದ್ರಭಾರತಿಗಳ ಯತಿಭಿಕ್ಷೆಗಾಗಿ ದೊರೆ ಎರಡನೆಯ ಹರಿಹರನು ನೀಡಿದ ದಾನವನ್ನು ನಿರೂಪಿಸುವ ಶಾಸನವನ್ನು ಬರೆಸಿದನು. ಆ ಗುರುವಿಗೆ ನಾಡವರೂ ದಾನ ನೀಡಿದರು.

ಕ್ರಿ.ಶ. 1404ರಲ್ಲಿ ಹನ್ನೊಂದು ಶಾಸನಗಳನ್ನು ಹೊರಡಿಸಲಾಯಿತು. ಎರಡನೆಯ ಹರಿಹರನ ಮರಣವನ್ನು ದಾಖಲಿಸುವುದರಿಂದ ಮುಕ್ತಿಹರಿಹರಪುರದ ತೀರ್ಥ. 205ನೆಯ ಶಾಸನವು ಪ್ರಧಾನವಾದ ವಿಜಯನಗರದ ಶಾಸನ. ಶಾಸನ ಪಾಠದ ಸಂಸ್ಕೃತ ಭಾಗದಲ್ಲಿ ಹೀಗಿದೆ:

ತಾರಣವರ್ಷೇ ವರ್ಷೇ ಮಾಸಿ ನಭಸ್ಯೇ ಏಕಾದಶೀಂದು ಶುಭವಾರೇ ।

. . . . ನಿರ್ವ್ವಾಣಂ ಪ್ರಾಪ ಹರಿಹರಾಧೀಶಃ ॥

ಆದರೆ ರೈಸ್ ಅವರು ಇದನ್ನು ತಿದ್ದಿ ಲಿಪ್ಯಂತರ ಭಾಗದಲ್ಲಿ ಹೀಗೆ ಪಾಠವನ್ನು ನೀಡಿದ್ದಾರೆ:

ತಾರಣವರ್ಷೇ ವರ್ಷೇ

ಮಾಸಿ ನಭಸ್ಯೇ ತಿಥೌ ದಶಮ್ಯಾಂ ಚ ।

ವಾರೇ ಶೌರೇ ಪಿತೃಭೇ

ನಿರ್ವ್ವಾಣಂ ಪ್ರಾಪ ಹರಿಹರಾಧೀಶಃ ॥

ಇಂಗ್ಲಿಷ್ ಭಾಷಾಂತರದಲ್ಲಿ ಅವರು ಕೊಡುವ ಭಾಗದ ಸರಳ ಕನ್ನಡಾನುವಾದ ಇದು: "ತಾರಣ ಸಂವತ್ಸರದಲ್ಲಿ, ವರ್ಷಋತುವಿನಲ್ಲಿ, ನಭಸ್ಯ (ಭಾದ್ರಪದ)ತಿಂಗಳಿನಲ್ಲಿ, ದಶಮಿ ಭಾನುವಾರದಂದು (=31 ಆಗಸ್ಟ್ 1404) ಪಿತೃ (ಮಘ) ನಕ್ಷತ್ರವಿದ್ದಾಗ ಶ್ರೇಷ್ಠ ದೊರೆ ಹರಿಹರನು ನಿರ್ವಾಣ ಹೊಂದಿದನು." ಸರಿಯಾಗಿ ಎರಡು ವಾರಗಳ ಅನಂತರ, ಅಶ್ವೀಜ ಶುದ್ಧ 11, ಸೋಮವಾರ ಎಂದರೆ ಕ್ರಿ.ಶ. 1404ರ ಸೆಪ್ಟೆಂಬರ್ 15ರಂದು, ಆರಗ ರಾಜ್ಯವನ್ನು ಪಾಲಿಸುತ್ತಿದ್ದ ವಿಠ್ಠಣ್ಣವೊಡೆಯನು ಮುಕ್ತ ಹರಿಹರಪುರ ಅಗ್ರಹಾರವನ್ನು ಸ್ಥಾಪಿಸಿದನು. ಈಗಲೂ ಗ್ರಾಮಕ್ಕೆ ಇದೇ ಹೆಸರು ಉಳಿದುಕೊಂಡುಬಂದಿದೆ. ಶ್ರವಣಬೆಳಗೊಳದ 46ನೆಯ ಶಾಸನವು ಹರಿಹರನ ಮರಣದ ತೇದಿಯನ್ನು ಹೀಗೆಯೇ ಕೊಡುತ್ತದೆಯಾದರೂ ವಾರ ಬೇರೆಯಾಗಿದೆ.

ಅಂದಿಗೆರೆಯ ತೀರ್ಥ. 1ನೆಯ ಶಾಸನದ ಪ್ರಕಾರ ಎರಡನೆಯ ಹರಿಹರನ ಮಗ ವಿರೂಪಾಕ್ಷನು ರಾಜ್ಯಭಾರಮಾಡುತ್ತಿದ್ದಾಗ, ಕ್ರಿ.ಶ. 1404ರಲ್ಲಿ ಆರಗ ರಾಜ್ಯವು ಬ್ರಹ್ಮರಾಜ ಅಥವಾ ಬೊಮ್ಮಣ್ಣವೊಡೆಯ ಮತ್ತು ವಿರುಪಾಂಬಿಕೆಯರ ಮಗನಾದ ವಿಠ್ಠಣ್ಣವೊಡೆಯನ ಪಾಲನೆಯಲ್ಲಿತ್ತು. ಆರಗರಾಜ್ಯದಲ್ಲಿ ಹದಿನೆಂಟು ಕಂಪಣಗಳು ಮತ್ತು ಮೂರು ಪಟ್ಟಣಗಳು ಇದ್ದವೆಂದು ಹೇಳಲಾಗಿದೆ. ಆರಗದಲ್ಲಿನ ಕಲ್ಲಿನಾಥದೇವರ ನೈವೇದ್ಯಾದಿ ಸೇವೆಗೆ ದಾನವೊಂದು ದಾಖಲುಗೊಂಡಿದೆ. ವಿಠಣ್ಣ ಅಥವಾ ವಿಠಪ್ಪ ಅಥವಾ ವೀರಪ್ಪವೊಡೆಯ (ಪ್ರಾಯಃ ವಿಠಪ್ಪ ಎಂಬುದನ್ನು ಹೀಗೆ ಓದಿರಬಹುದು–ವಿರಪ್ಪ, ವಿಠಪ್ಪ) ಕ್ರಿ.ಶ. 1418ರವರೆಗೆ ಆರಗ ರಾಜ್ಯದ ಪಾಲಕನಾಗಿದ್ದ. ಆತನನ್ನು ಕೆಲವು ಶಾಸನಗಳು ಬಣ್ಣಿಸುತ್ತವೆ. ಆತ ಕ್ರಿಯಾಶಕ್ತಿಗುರುಗಳ ಶಿಷ್ಯ. ಆರಗದ ಕಲ್ಲಿನಾಥದೇವರ ಸೇವೆಗೆ ದತ್ತಿಗಳನ್ನು ಆತ ನೀಡಿದನು (ತೀರ್ಥ 18); ಹಾಗೆಯೇ ಹಿರಿಯಂಗಡಿಯ ಬನಶಂಕರಿದೇವಿಗೆ ಮತ್ತು ಜಪಮಾಡುವುದಕ್ಕಾಗಿ ಅನಂತವರ್ಯ್ಯರಿಗೆ ದಾನಕೊಟ್ಟನು (ತೀರ್ಥ. 20). ಕ್ರಿ.ಶ. 1405ರಲ್ಲಿ ವಿಠಣ್ಣವೊಡೆಯ ರಾಜ್ಯಪಾಲನೆಮಾಡುತ್ತಿದ್ದಾಗ ತುಂಗಭದ್ರಾ ತೀರದ ಶೃಂಗೇರಿಯ ವಿದ್ಯಾಶಂಕರದೇವರ ಸನ್ನಿಧಿಯಲ್ಲಿ ನರಸಿಂಹಭಾರತೀತೀರ್ಥಶ್ರೀಪಾದರು ಯೋಗರಾಜ್ಯವನ್ನು ಆಳುತ್ತಿದ್ದರು (ತೀರ್ಥ. 126). ನರಸಿಂಹಭಾರತೀಪುರ ಅಗ್ರಹಾರದ ಸ್ಥಾಪನೆಯನ್ನು ಈ ಶಾಸನ ಉಲ್ಲೇಖಿಸುತ್ತದೆ. ಒಂದು ವೃತ್ತಿ ವಿದ್ಯಾಶಂಕರದೇವರ ಸೇವೆಗೆ ಸಲ್ಲುತ್ತದೆಂದು ಈ ಶಾಸನದಲ್ಲಿ ಹೇಳಿದೆ. ಬನದ ದೇವತೆಗೆ 'ಶ್ರೀಸೂಕ್ತ ಅಭಿಷೇಕ'ವನ್ನು ಮಾಡುವ ಬಗ್ಗೆ ಆರಗದ ತೀರ್ಥ. 15ನೆಯ ಶಾಸನದಲ್ಲಿ ಪ್ರಸ್ತಾಪವಿದೆ. ಶಾಸನಗಳಲ್ಲಿ ಉಕ್ತವಾಗಿರುವ ಆರಗದ ಇನ್ನೊಬ್ಬ ಜನಪ್ರಿಯ ದೇವತೆ ಕಲ್ಲಿನಾಥ (ತೀರ್ಥ 26).

ಬೇಚಿರಾಕ್ ಗ್ರಾಮವಾದ ಸೂಡೂರಿನ ಶಿವ. 102ನೆಯ ಶಾಸನವು ನಮ್ಮ ಗಮನ ಸೆಳೆಯುತ್ತದೆ. ಆನೆಯ ದಾಳಿಯಿಂದ ತನ್ನ ಜೀವವನ್ನು ಉಳಿಸಿದ ಬೊಮ್ಮಣ್ಣನಿಗೆ ಚೀಲಗೊಂಡರಸನು ಉಂಬಳಿಯಾಗಿ ಭೂದಾನವಿತ್ತ ವಿಷಯವನ್ನು ಅದು ನಿರೂಪಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ. 1407; ಎರಡನೆಯ ಹರಿಹರನ ಮಗನಾದ ದೇವರಾಯ ಆಳುತ್ತಿದ್ದ ದೊರೆ. ಬಸವಾನಿಯ ತೀರ್ಥ 179ನೆಯ ಶಾಸನದಲ್ಲಿ ಸದಾಶಿವರಾಯನ ಉಲ್ಲೇಖವಿದ್ದರೂ ವಾಸ್ತವವಾಗಿ ಆಗ ಆಳುತ್ತಿದ್ದ ದೊರೆ ಒಂದನೆಯ ದೇವರಾಯನೇ (ಕರಡಿಕೋಡಿನ ತೀರ್ಥ 34ನೆಯ ಶಾಸನಕ್ಕೂ ಇದು ಅನ್ವಯವಾಗುತ್ತದೆ). ವೈರಾಗ್ಯ ಶಿವಾಚಾರ್ಯರು ಭೂಮಿಯನ್ನು ಪಡೆದು ಅದನ್ನು ಅಗ್ರಹಾರವನ್ನಾಗಿ ಅಭಿವೃದ್ಧಿಪಡಿಸಿದರು. ಹೊಸದಾಗಿ ರೂಪುಗೊಂಡ ಅಗ್ರಹಾರವನ್ನು ದಕ್ಷಿಣಾಮೂರ್ತಿ ಶಿವಾಚಾರ್ಯಪುರ ಎಂದು ಕರೆಯಲಾಯಿತು. ಅದನ್ನು ಇಪ್ಪತ್ತನಾಲ್ಕು

ವೀರಹರಿಯಪ್ಪವೊಡೆಯರ ವಿಜಯರಾಜ್ಯೋದಯ'ವನ್ನು ಉಲ್ಲೇಖಿಸುತ್ತದೆ. ಈ ಶಾಸನದ ತೇದಿ ಕ್ರಿ.ಶ. 1346ರ ನವೆಂಬರ್ 16. ಕ್ರಿ.ಶ. 1346ರ ಮಾರ್ಚ್ 9ರ ತೇದಿಯ ಶೃಂ. 1ನೆಯ ಶಾಸನದಲ್ಲಿ ಉಕ್ತನಾದ ಪಾಂಡ್ಯಚಕ್ರವರ್ತಿ ವೀರಕಿಕ್ಕಾಯಿತಾಯಿಯನ್ನು ಪ್ರಸ್ತುತ ಶಾಸನವು ಉಲ್ಲೇಖಿಸುವಂತೆ ಕಾಣುತ್ತದೆ.

ವಿರುಪಾಪುರದ ತೀರ್ಥ. 221ನೆಯ ಶಾಸನವು ವಿಜಯನಗರ ಅರಸರ ವಂಶಾವಳಿಯನ್ನು ನೀಡುತ್ತದೆ. ಯದುಕುಲದಲ್ಲಿ ಜನಿಸಿದ ಸಂಗಮಭೂಪಾಲನಿಗೆ ಐವರು ಗಂಡುಮಕ್ಕಳು ; ಅವರೆಂದರೆ ಹರಿಹರ, ಕಂಪರಾಯ, ಬುಕ್ಕ, ಮಾರಪ ಹಾಗೂ ಮುದ್ದಪ. ಇವರಲ್ಲಿ ಪಾಂಡವರಲ್ಲಿನ ಅರ್ಜುನನಂತೆ ಪ್ರಖ್ಯಾತನಾದವನು ಬುಕ್ಕ. ಆತನನ್ನು ಆಡಂಬರದ ಮಾತುಗಳಲ್ಲಿ ಹೊಗಳಲಾಗಿದೆ : ಯುದ್ಧರಂಗದಲ್ಲಿ ಆತನ ರುದ್ರನರ್ತನ (ತಾಂಡವ) ತುರುಷ್ಕರಲ್ಲಿ ಭೀತಿಯನ್ನು ಹುಟ್ಟಿಸಿತು, ಶಂಕ ಎಂಬ ದೊರೆಯಲ್ಲಿ ದಿಗಿಲುಂಟುಮಾಡಿತು, ಆಂಧ್ರರನ್ನು ಗಡಿಭಾಗದ ಬೆಟ್ಟಗುಡ್ಡಗಳ ಗವಿಗಳಿಗೆ ಕಳುಹಿಸಿತು, ಗೂರ್ಜರರು ಜರ್ಜರಿತರಾಗುವಂತೆ ಮಾಡಿತು, ಕಾಂಭೋಜರು ಸ್ಥೈರ್ಯ ಕಳೆದುಕೊಳ್ಳುವಂತೆ ಮಾಡಿತು ಹಾಗೂ ಕಳಿಂಗರು ಭಂಗಿತರಾಗುವಂತೆ ಮಾಡಿತಂತೆ ! ಆತನ ಹೆಂಡತಿ ಗೌರಾಂಬಿಕಾ. ಎರಡನೆಯ ಹರಿಹರ ಬುಕ್ಕನ ಮಗ ; ಈತ ಷೋಡಶ ಮಹಾದಾನಗಳನ್ನು ಮಾಡಿ ಪ್ರಸಿದ್ಧನಾದವನಂತೆ.

ವೀರಬುಕ್ಕಣ್ಣವೊಡೆಯನ ಮಗನಾದ ವಂದಗಿರಿ ವಿರುಪಣ್ಣವೊಡೆಯನು ಕ್ರಿ.ಶ. 1362ರಲ್ಲಿ ಆರಗ ರಾಜ್ಯದ ಪಾಲಕನಾಗಿದ್ದ (ತೀರ್ಥ. 36). ಈತ ವಿರೂಪಾಕ್ಷರಾಯನೆಂದೂ ಪರಿಚಿತನಾಗಿದ್ದ (ತೀರ್ಥ. 232). ಸುಮಾರು ಹದಿನೆಂಟು ವರ್ಷಗಳ ಕಾಲ ಈತ ಆರಗದ ರಾಜ್ಯಪಾಲನಾಗಿದ್ದ. ಈತನ ಹೆಸರಿನಲ್ಲಿ ವಿರೂಪಾಕ್ಷಪುರವೆಂಬ ಅಗ್ರಹಾರ ರೂಪುಗೊಂಡಿತು (ತೀರ್ಥ. 187). ಈತ ಮಲೆರಾಜ್ಯವನ್ನು ಪಾಲಿಸುತ್ತಿದ್ದಾಗ, ತಡತಾಳಿನ ಪಾರ್ಶ್ವದೇವ ಬಸದಿಗೆ ಸೇರಿದ್ದ ಭೂಮಿಯ ಮೇರೆಗಳ ವಿಷಯದಲ್ಲಿ ಹೆದ್ದೂರನಾಡಿನ ಜನತೆ ಮತ್ತು ಆಚಾರ್ಯರಿಗೂ ಸೂರಿಗಳಿಗೂ ವಿವಾದ ಉದ್ಭವಿಸಿತು. ಮಹಾಪ್ರಧಾನ ನಾಗಣ್ಣ ಮತ್ತು ಇತರರ ಪ್ರವೇಶದಿಂದಾಗಿ ಈ ವಿವಾದ ಸೌಹಾರ್ದಯುತವಾಗಿ ಪರಿಹರಿಸಲ್ಪಟ್ಟಿತು. ಈ ಶಾಸನದ (ತೀರ್ಥ. 29) ಕಾಲ ಕ್ರಿ.ಶ. 1363. ಮೂಲಸಂಘ, ದೇಶಿಗಣ, ಪುಸ್ತಕಗಚ್ಛ ಮತ್ತು ಕೊಂಡಕುಂದಾನ್ವಯಗಳಿಗೆ ಸೇರಿದ ಚಾರುಕೀರ್ತಿಪಂಡಿತರನ್ನು ಉಲ್ಲೇಖಿಸುವ ಈ ಶಿಲಾಶಾಸನವನ್ನು ಈಗ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದ ಸಿಂಗನಗದ್ದೆಯ ಪಾರ್ಶ್ವನಾಥಬಸದಿಯಲ್ಲಿ ತಂದಿರಿಸಲಾಗಿದೆ. ಮಂಜಾದೇವಿಯು ವೇದಗಿರಿ ವಿರುಪ್ಪಣನ 'ರಾಣೀವಾಸ' ಎಂಬ ವಿಷಯ ತೀರ್ಥ. 23ನೆಯ ಶಾಸನದಿಂದ ತಿಳಿದುಬರುತ್ತದೆ. ಆರಗದಲ್ಲಿರುವ ಈ ಶಾಸನದಲ್ಲಿ ವಾಸುಕಾರ ರಾಮದೇವನ ಮಗಳಾದ ಪದುಮಲದೇವಿಯ ಉಲ್ಲೇಖವಿದೆ.

ಈ ಕಾಲದಲ್ಲಿ ಅನೇಕ ಅಗ್ರಹಾರಗಳು ಸ್ಥಾಪಿತವಾದವು. ವಿರುಪಣ್ಣನ 'ಮನೆಯಪ್ರಧಾನ' ರಾಮರಸನಿಗೆ ಹುತ್ತಹಳ್ಳಿಯನ್ನು ಅಗ್ರಹಾರ ನಿರ್ಮಾಣಕ್ಕಾಗಿ ದಾನ ಕೊಡಲಾಯಿತು. ಕ್ರಿ.ಶ. 1377ರಲ್ಲಿ ರಾಮರಸ ಹರಿಹರಪುರ ಅಗ್ರಹಾರವನ್ನು ಸ್ಥಾಪಿಸಿ, ಅದನ್ನು ಇಪ್ಪತ್ತೆರಡು ವೃತ್ತಿಗಳಾಗಿ ವಿಂಗಡಿಸಿ ನಾನಾ ಗೋತ್ರಸೂತ್ರಶಾಖೆಗಳಿಗೆ ಸೇರಿದ ಮಹಾಜನರಿಗೆ ನೀಡಿದನು (ತೀರ್ಥ. 233). ಹಾಗೆಯೇ ಗೊಟ್ಟಿಸೆಟ್ಟಿ ಎಂಬಾತ ತನ್ನ ತಂದೆ ನಾಗಸೆಟ್ಟಿಯ ಸ್ಮರಣಾರ್ಥ ಕ್ರಿ.ಶ. 1381ರಲ್ಲಿ ನಾಗಸಮುದ್ರ ಎಂಬ ಅಗ್ರಹಾರವನ್ನು ರೂಪಿಸಿದನು.

ಭೋಗಾರಕೊಪ್ಪದ ತೀರ್ಥ. 195ನೆಯ ಶಾಸನವು ಮಾಧವ ಮಂತ್ರಿಯನ್ನು ಉಲ್ಲೇಖಿಸುತ್ತದೆ. "ಬುಕ್ಕನ ಮಂತ್ರಿಯಾಗಿದ್ದ ಈತನನ್ನು ಕೆಲವು ವಿದ್ವಾಂಸರು ಮಾಧವವಿದ್ಯಾರಣ್ಯರೆಂದು ತಪ್ಪಾಗಿ ಗುರುತಿಸಿದ್ದಾರೆ." ಈತ "ಒಂದನೆಯ ಬುಕ್ಕ ಹಾಗೂ ಎರಡನೆಯ ಹರಿಹರರ ಕೈಕೆಳಗೆ ಬನವಾಸಿಯ ರಾಜ್ಯಪಾಲ ಹಾಗೂ 'ಸೂತಸಂಹಿತೆ'ಯ ಮೇಲಿನ ವ್ಯಾಖ್ಯಾನದ ರಚನಕಾರ"ನಾಗಿದ್ದ. ಕ್ರಿ.ಶ. 1384ರಲ್ಲಿ ಈ ಮಾಧವಮಂತ್ರಿಯು ಮಲೆರಾಜ್ಯದಲ್ಲಿದ್ದ. ಕ್ರಿ.ಶ. 1385ರಲ್ಲಿ ಆರಗರಾಜ್ಯವನ್ನು ಪಾಲಿಸುತ್ತಿದ್ದ ಈತನನ್ನು ಮಾದರಸನೆಂದೂ ಕರೆದಿದೆ (ತೀರ್ಥಮುತ್ತೂರಿನ ತೀರ್ಥ 253ನೆಯ ಶಾಸನ). ಕ್ರಿ.ಶ. 1394ರಲ್ಲಿ ಆರಗ ರಾಜ್ಯವನ್ನು ಪಾಲಿಸುತ್ತಿದ್ದವನು ಸೋವಣ್ಣ ಒಡೆಯ (ತೀರ್ಥ. 254). ಈತನನ್ನು ಸಾವಣಮಂತ್ರಿ ಎಂದೂ ಕರೆದಿದೆ (ತೀರ್ಥ. 120).

ಎರಡನೆಯ ಹರಿಹರನು ಬುಕ್ಕ ಮತ್ತು ಗೌರಾಂಬಿಕೆಯರ ಮಗ. ಕ್ರಿ.ಶ. 1394ರಲ್ಲಿಯೆ ವಿರುಪಾಪುರಗ್ರಾಮ ಮತ್ತು ಅದರ ಉಪಗ್ರಾಮಗಳು ಶ್ರೀರಂಗಪಟ್ಟಣ ರಾಜ್ಯ ಮತ್ತು ತುಂಗಭದ್ರಾ ದೇಶಕ್ಕೆ ಸೇರಿದ್ದವೆಂಬುದು ಗಮನಿಸಬೇಕಾದ ಅಂಶ (ತೀರ್ಥ. 221). ನಲವತ್ತನಾಲ್ಕು ವೃತ್ತಿಗಳನ್ನು ಒಳಗೊಂಡ ವಿರುಪಾಪುರ ಮತ್ತು ಅದರ ಉಪಗ್ರಾಮಗಳ ದಾನವನ್ನು ಈ ತಾಮ್ರಶಾಸನವು ದಾಖಲಿಸುತ್ತದೆ. ಈ ಶಾಸನದ ಬಗ್ಗೆ ಈಗಾಗಲೇ ಪ್ರಸ್ತಾಪಿಸಿದೆ. ಕ್ರಿ.ಶ. 1398ರಲ್ಲಿ ಸಾತಣ್ಣವೊಡೆಯ ಆರಗ ರಾಜ್ಯವನ್ನು ಪಾಲಿಸುತ್ತಿದ್ದಾಗ ಅಭಿನವಗೋಪಿನಾಥಪುರವೆಂಬ ಪ್ರತಿನಾಮಧೇಯ ಹೊಂದಿದ ಅಲಗೇರಿಯನ್ನು ದಾನ ನೀಡಲಾಯಿತು (ತೀರ್ಥ. 25). ಈ ದಾನದ ಪ್ರತಿಗ್ರಹಿ ಸರ್ವಜ್ಞಪುರಿ ಶ್ರೀಪಾದ.

ಕ್ರಿ.ಶ. 1401ರಲ್ಲಿ ಆರಗ ರಾಜ್ಯವನ್ನು ಪಾಲಿಸುತ್ತಿದ್ದವನು ಜನ್ನರಸಒಡೆಯ (ತೀರ್ಥ. 183). ಬೊಮ್ಮಗಡೆಯು ದಾಮೋದರ ನಾಯಕನ ಮಗ ಕೇಸಪ್ಪನಿಗೆ (ಪ್ರಾಯಃ ದಾಮೋದರಭಟ್ಟನ ಮಗ ಕೃಷ್ಣಪ್ಪ ಎಂದಿರಬೇಕು) ಬಿಕ್ಕಹಳ್ಳಿಯಲ್ಲಿ

ಅಯಿಬೆಯ ಸಾಹಣಿಯ ತನ್ನ ಅಳಿಯಂದಿರಾದ ಬಲ್ಲಯ್ಯ ಮತ್ತು ಕೇತಯ್ಯರ ಮೂಲಕ ಆನವೇರಿಯ ಮಲ್ಲಿಕಾರ್ಜುನ ದೇವಾಲಯದ ದುರಸ್ತಿಯನ್ನು ಮಾಡಿಸಿದನು (ಭದ್ರಾ. 5). ಮುದುಗಂಗವೂರು ಅಥವಾ ಖಂಡಳಿಪುರದಲ್ಲಿ ಸಾಳ್ವಭು ಮಧುಸೂದನನು ಗಂಗೇಶ್ವರ ದೇವಸ್ಥಾನವನ್ನು ಕಟ್ಟಿಸಿದನೆಂದು ಬಸವನಗಂಗೂರು ಶಾಸನವು (ಶಿವ. 74) ದಾಖಲಿಸುತ್ತದೆ. ದೇವರನ್ನು ಆತನ ತಂದೆ ಗಂಗಣನ ಹೆಸರಿನಲ್ಲಿ ಗಂಗೇಶ್ವರವೆಂದು ಕರೆಯಲಾಯಿತು. ಅಮೃತರಾಶಿಯ ಮೊಮ್ಮಗನಾದ ಸೋಮೇಶ್ವರಗುರುಗಳ ಕಾಲುತೊಳೆದು ದಾನ ನೀಡಲಾಯಿತು. ಶಾಸನದ ಕಾಲ ಕ್ರಿ.ಶ. 1218 ಮತ್ತು ಆಳುತ್ತಿದ್ದ ಅರಸ ಎರಡನೆಯ ಬಲ್ಲಾಳ. ವಾಮಶಕ್ತಿದೇವ ಈ ದೊರೆಯ ರಾಜಗುರು (ಶಿವ. 85). ಎಕ್ಕೋಟಿಗಳು ಹಾಗೂ ಗಣೇಶ್ವರರು ಉಪಸ್ಥಿತರಿದ್ದು ಕುರುಳಿಯ ತೀರ್ಥದ ಬಸದಿಗೆ 'ಜೋಗವಟ್ಟಿಗೆ'ಯನ್ನು ಕೊಟ್ಟರು. ಬಸದಿಗೆ ಎಕ್ಕೋಟಿ ಜಿನಾಲಯ ಎಂಬ ಹೆಸರು ಬಂತು ಹಾಗೂ ದೇವಭೋಗ ಮತ್ತು ನಂದಿಯಕೋಲು ಪ್ರಾಪ್ತವಾದವು.

ಭದ್ರಾವತಿಯ ಹಿಂದಿನ ಹೆಸರು ಬೆಂಕಿಪುರ. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಇದು ಲಕ್ಷ್ಮೀನರಸಿಂಹಪುರವೆಂಬ ಅಗ್ರಹಾರವಾಗಿ ಪರಿಚಿತವಾಗಿತ್ತು. ಕ್ರಿ.ಶ. 1226ರಲ್ಲಿ ವ್ಯವಸಾಯೋದ್ದೇಶಗಳಿಗಾಗಿ ಬಾಹುಬಲಿಕೊಮಾರನಹಳ್ಳಿ ಮತ್ತು ತೆಂಕಾಟೂರುಗಳಲ್ಲಿ ಕೆರೆಗಳನ್ನು ಕಟ್ಟಲು ಕೆಲವು ಜನರಿಗೆ ಇಲ್ಲಿನ ಮಹಾಜನರು ಅನುಮತಿ ನೀಡಿದರು. ಆ ವ್ಯಕ್ತಿಗಳಿಗೆ ತೆರಿಗೆಗಳನ್ನು ಮನ್ನಾಮಾಡಲಾಯಿತು (ಭದ್ರಾ. 21). ಸೋಮೇಶ್ವರನು ಕಣ್ಣಾನೂರಿನಿಂದ ರಾಜ್ಯವಾಳುತ್ತಿದ್ದ (ಶಿವ. 8).

ಕೂಡಲಿಯು ಸಂಗಮ, ನೃಸಿಂಹಕ್ಷೇತ್ರ ಮತ್ತು ದಕ್ಷಿಣವಾರಣಾಸಿ ಎಂದು ಪ್ರಖ್ಯಾತಿ ಹೊಂದಿತ್ತು. ಕ್ರಿ.ಶ. 1291ರಲ್ಲಿ ಮೂರನೆಯ ನರಸಿಂಹನು ಆಳುತ್ತಿರುವಾಗ ಕೆಲವು ಅಧಿಕಾರಿಗಳು ಕೂಡಲಿಯ ಸ್ವಯಂಭುನರಸಿಂಹದೇವರಿಗೆ ಸೂಗೂರಿನ ಅನುಪುಸುಂಕವನ್ನು ದಾನವಿತ್ತರು (ಶಿವ. 40). ಕೂಡಲಿಯ ಶಿವ 30ನೆಯ ಶಾಸನವೂ ಇದೇ ಅರಸನ ಕಾಲದ್ದು. ತುರಕವಿಗ್ರಹವನ್ನು ಅದು ಪ್ರಸ್ತಾಪಿಸುತ್ತದೆ. ದೊರೆಯ ಮಗ ನಾಲ್ಕನೆಯ ಬಲ್ಲಾಳನು ದೆಹಲಿಯಿಂದ 'ಪಟ್ಟಣಪ್ರವೇಸ ಮಾಡುವವಸರದಲ್ಲಿ' ಕೂಡಲಿಯ ರಾಮನಾಥದೇವರಿಗೆ ದಾನನೀಡಲಾಯಿತು.

ಮಾಳೇನಹಳ್ಳಿಯಲ್ಲಿ ಈಚೆಗೆ ತಾಮ್ರಶಾಸನವೊಂದು (ಭದ್ರಾ. 24) ಅನ್ವೇಷಿತವಾಯಿತು. ಅದರ ತೇದಿ ಕ್ರಿ.ಶ. 1315. ಬಲ್ಲಾಳನ ಪ್ರಧಾನನಾದ ಸಿಂಗಪ್ಪ ದಣ್ಣಾಯಕನು ಆಸಂದಿನಾಡಿಗೆ ಸೇರಿದ ಮಾಳೆಯನಹಳ್ಳಿ ಮತ್ತು ಒದೆಯೂರುಗಳನ್ನು ಒಂದು ಅಗ್ರಹಾರವನ್ನಾಗಿ ಮಾಡಿದನು ಹಾಗೂ ಅದಕ್ಕೆ ತನ್ನ ತಾಯಿ ಭೈರವದಣಾಯಕಿತಿಯ ನೆನಪಿಗಾಗಿ ಭೈರವಪುರವೆಂಬ ಹೆಸರನ್ನು ಕೊಟ್ಟನು. ಈ ಅಗ್ರಹಾರವನ್ನು ವೃತ್ತಿಗಳಾಗಿ ವಿಂಗಡಿಸಿ ವಿವಿಧ ಗೋತ್ರದ 54 ಬ್ರಾಹ್ಮಣರಿಗೆ ವಿತರಿಸಲಾಯಿತು. ಈ ಅಗ್ರಹಾರದ ಒಟ್ಟು ಆದಾಯ 500 ಗದ್ಯಾಣಗಳು; ಇದರಲ್ಲಿ $^1/_7$ನೆಯ ಭಾಗ, ಎಂದರೆ 71 ಗದ್ಯಾಣ, $4^1/_2$ ಹಣ ಹಾಗೂ 3 ಕಾಕಿಣಿಗಳನ್ನು ಅರಮನೆಗೆ ಸಲ್ಲಿಸಬೇಕಿತ್ತು. ಹೊಯ್ಸಳ ಸೇನಾನಿ ಬೆಂಬೆಯ ದಣ್ಣಾಯಕನಿಗೆ ಹೇಳಿದ ವಿಶೇಷಣಗಳು ಗಮನಾರ್ಹವಾಗಿವೆ (ಶಿವ. 31).

ಸೇಉಣ

ಕೇವಲ ಎರಡು ಶಾಸನಗಳು ಈ ವಂಶಕ್ಕೆ ಸೇರುತ್ತವೆ. ಕೋದೂರಿನ ತೀರ್ಥ. 135ನೆಯ ಶಾಸನದ ಪ್ರಕಾರ ಸಿಂಘಣದೇವನ ದಳವಾಯಿಯಾದ ಸಾರಂಗದೇವನು ಅಣ್ಣಮವೆಗ್ಗಡೆಯ ವಿರುದ್ಧ ದಂಡೆತ್ತಿ ಬಂದು ಕೋದೂರಿನ ಮೇಲೆ ದಾಳಿ ಮಾಡಿ ಅದನ್ನು ಸುಟ್ಟುಹಾಕಿದನು. ಸೇವಣ ಕಟಕ ಸೂರೆಕಾರನೆಂದು ಬಣ್ಣಿಸಲ್ಪಟ್ಟ ರಾಜಿಕನ ಜಕ್ಕನು ಸಾರಂಗದೇವನನ್ನು ಸೋಲಿಸಿದನು. ಕೋದೂರನ್ನು ವಜ್ರಧಾನಿ ಎಂದು ಉಲ್ಲೇಖಿಸಿದೆ. ಈ ಶಾಸನದ ಕಾಲ ಕ್ರಿ.ಶ. 1234. ಆದರೆ ಈ ಹೊತ್ತಿಗಾಗಲೇ ಎರಡನೆಯ ಸಿಂಘಣನ ಆಳ್ವಿಕೆ ಕೊನೆಗೊಂಡಿತ್ತು. ಇನ್ನೊಂದು ಶಾಸನವೆಂದರೆ ಚೊರಡಿಯ ಶಿವ. 57ನೆಯ ತ್ರುಟಿತ ಶಾಸನ. ಅದು ರಾಮದೇವನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.

ವಿಜಯನಗರ

ಪ್ರಸ್ತುತ ಸಂಪುಟದ ಒಂದು ನೂರಕ್ಕೂ ಹೆಚ್ಚಿನ ಶಾಸನಗಳು ವಿಜಯನಗರದ ಅರಸರ ಆಳ್ವಿಕೆಗೆ ಸೇರುತ್ತವೆ. ಮೂರು ತಾಲ್ಲೂಕುಗಳಲ್ಲಿ ವಿಜಯನಗರದ ಹೆಚ್ಚು ಶಾಸನಗಳು ಇರುವುದು ತೀರ್ಥಹಳ್ಳಿ ತಾಲ್ಲೂಕಿನಲ್ಲಿಯೇ. ಬಹುಪಾಲು ಶಾಸನಗಳು ದಾನದತ್ತಿಗಳ ಬಗೆಯವು. ಆರಗವು ಸಾಮ್ರಾಜ್ಯದ ಪ್ರಾಂತೀಯ ಕೇಂದ್ರವಾಗಿತ್ತು. ಆರಗ ರಾಜ್ಯವನ್ನು ರಾಜಕುಟುಂಬಕ್ಕೆ ಸೇರಿದ ಹಲವು ಅಧಿಪರು ಪಾಲಿಸಿದರು.

ಚಟ್ನಕೊಡಗಿಯ ಶಾಸನವೇ (ತೀರ್ಥ. 145) ಈ ಸಂಪುಟದ ಅತಿಪ್ರಾಚೀನ ವಿಜಯನಗರ ಶಾಸನ. ಶಿರಿಪತಿಯ ನರಸಿಂಹದೇವರಿಗೆ ನೈವೇದ್ಯಾದಿ ಸೇವೆಗೆ ದೊರೆಯು ಭೂದಾನವಿತ್ತುದನ್ನು ಅದು ತಿಳಿಸುತ್ತದೆ. ಗರುಡನಾರಾಯಣ ಮತ್ತು ವೇದಮಾರ್ಗಪ್ರತಿಷ್ಠಾಚಾರ್ಯ ಎಂದು ಬಣ್ಣಿಸಲ್ಪಟ್ಟ ನರಹರಿದೇವ ಈ ದಾನವನ್ನು ಸ್ವೀಕರಿಸಿದ ವ್ಯಕ್ತಿ. ಶಾಸನವು 'ಶ್ರೀ

ಗಂಗದೊರೆಗಳು ಸ್ವತಃ ಜೈನಧರ್ಮೀಯರಾಗಿದ್ದರೂ ಎಲ್ಲ ಧರ್ಮಗಳಿಗೂ ಪೋಷಣೆ ನೀಡಿದರು. ಕ್ರಿ.ಶ. 1108ರಲ್ಲಿ ಪೆರ್ಮ್ಮಾಡಿದೇವನು ಆಳುತ್ತಿದ್ದಾಗ ಬಳ್ಳಿಗಾವೆಯ ಚಟ್ಟಿಗಾಮುಂಡನ ಮಗನಾದ ಹೆಗ್ಗಡೆ ಕೇತಣನು ಸಿದ್ಧೇಶ್ವರದೇವರ ಪೂಜೆನೈವೇದ್ಯಾದಿ ಸೇವೆಗಳಿಗೆ ಭೂದಾನವಿತ್ತನು. ಈ ದಾನವನ್ನು ಸ್ವೀಕರಿಸಿದವನು ಶ್ರೀಕಂಠಪಂಡಿತ (ಭದ್ರಾ. 25). ಕ್ರಿ.ಶ. 1122ರಲ್ಲಿ, ನನ್ನಿಯಗಂಗನ ಆಳ್ವಿಕೆಯಲ್ಲಿ ಸಿದ್ಧೇಶ್ವರ ದೇವಾಲಯದ ಆಚಾರ್ಯರಾದ ಬ್ರಹ್ಮೇಶ್ವರದೇವರಿಗೆ, ದೇವಾಲಯದ ದುರಸ್ತಿಕಾರ್ಯ ಮತ್ತು ದೇವಸೇವೆಗೆ ಭೂದಾನವೀಯಲಾಯಿತು. ದಾನಿಗಳು ಎಡೆದೊರೆನಾಡಿನ ನಾಳ್ಪ್ರಭು ಸಿಂದಗಾವುಂಡ ಮತ್ತು ಆತನ ಹೆಂಡತಿ ನಾಗಗಾವುಂಡಿ (ಭದ್ರಾ. 31). ಹಾಗೆಯೇ ಹಡವಳ ಹೆಮ್ಮಾಡಿದೇವ ದಾನಕೊಟ್ಟ (ಭದ್ರಾ. 34). ಹಡವಳ ಗಂಗಯ್ಯ ಕಮತೇಶ್ವರ ದೇವಾಲಯವನ್ನು ಕಟ್ಟಿಸಿದ (ಭದ್ರಾ. 36).

ಶಾಸನಗಳಲ್ಲಿ ಹೇಳಿರುವ ಪ್ರಕಾರ ಮಂಡಲಿಯು ಕೃತಯುಗದಲ್ಲಿ ಮಹೇಂದ್ರಪುರ ಎಂದೂ, ತ್ರೇತಾ, ದ್ವಾಪರ ಹಾಗೂ ಕಲಿಯುಗಗಳಲ್ಲಿ ಕ್ರಮವಾಗಿ ಮದನಾಪುರ, ಮಂಡಲಾಪುರ ಮತ್ತು ಮಂಡಲೀಪುರಗಳೆಂದು ಪ್ರಸಿದ್ಧವಾಯಿತು.

ಸಾಂತರ ಹಾಗೂ ಗಂಗ ದೊರೆಗಳಲ್ಲಿ ಕೆಲವು ಸಾಮ್ಯಗಳನ್ನು ಪ್ರೊ. ಹಂಪನಾ ಗುರುತಿಸುತ್ತಾರೆ.

ಹೊಯ್ಸಳ

ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಹೊಯ್ಸಳರು ತಮ್ಮ ಆಳ್ವಿಕೆಯನ್ನು ಆರಂಭಿಸಿದರು. ಸುಮಾರು 40 ಶಾಸನಗಳು ಹೊಯ್ಸಳ ದೊರೆಗಳಿಗೆ ಸೇರಿದವಾಗಿವೆ. ಅತಿ ಪ್ರಾಚೀನವಾದ ಶಾಸನದ ಕಾಲ ಕ್ರಿ.ಶ. 1090–91 ; ಅದು ಹೊಯ್ಸಳದೇವನ ಮಂತ್ರಿ ಚಂದಿಮಯ್ಯನನ್ನು ಉಲ್ಲೇಖಿಸುತ್ತದೆ (ತೀರ್ಥ. 30). ತರುವಾಯದ ಶಾಸನ ಪುರಲೆಯ ಶಿವ 68. ಇದರಲ್ಲಿ ಉಕ್ತನಾಗಿರುವ ಹೆಮ್ಮಾಡಿಯರಸನು ಎರೆಯಂಗ ಹೊಯ್ಸಳನ ಅಳಿಯ. ವಿನಯಾದಿತ್ಯನ ಮಗನಾದ ಎರೆಯಂಗನು 'ಚಾಳುಕ್ಯ ಭೂಪಾಳಕನ ಬಲದಭುಜಾದಣ್ಡ' ಎನಿಸಿದ್ದನೆಂದು ಅದು ತಿಳಿಸುತ್ತದೆ. ಆತ ಮಾಳವ ಸೇನೆಯನ್ನು ತುಳಿದುಹಾಕಿದ, ಧಾರಾನಗರವನ್ನು ಸುಟ್ಟುಹಾಕಿದ, ಚೋಳನನ್ನು ಹೊರಗೆಳೆದು ಅವನ ರಾಜಧಾನಿಯನ್ನು ಸೂರೆಮಾಡಿದ ಹಾಗೂ ಕಳಿಂಗ ದೊರೆಯನ್ನು ನಾಶಮಾಡಿದ. ಹೊಯ್ಸಳ ಶಾಸನಗಳು ದೊರೆಗಳ ಕೆಲವು ಸಾಧನೆಸಿದ್ಧಿಗಳನ್ನು ಬಣ್ಣಿಸುತ್ತವೆ.

ಬಿದರೆಯ ಶಿವ. 76ನೆಯ ಶಾಸನವು ಪಡೆವಳ ಹೆಮ್ಮಾಡಿಯ ಕಾಳೇಶ್ವರ ದೇಗುಲವನ್ನು ನಿರ್ಮಿಸಿದ ಸಂಗತಿಯನ್ನು ತಿಳಿಸುತ್ತದೆ. ದೇವರನ್ನು ಆತನ ತಾಯಿ ಕಾಳವ್ವೆಯ ನೆನಪಿಗಾಗಿ ಕಾಳೇಶ್ವರ ಎಂದು ಕರೆಯಲಾಯಿತು. ಆತನ ಮಗ ಕಾಳಯ್ಯನು ದೇವಾಲಯವನ್ನು ಶಿಲಾಮಯವನ್ನಾಗಿ ಮಾಡಿಸಿದನಂತೆ. ಗರ್ಭಗೃಹವನ್ನು ಕಟ್ಟಿದವನು ಮಾಚೋಜ. ದೇವರ ಸೇವೆಗೆ ಕಾಳಯ್ಯ ದಾನವನ್ನಿತ್ತ. ಕಲ್ಯಾಣಪಂಡಿತ ದಾನವನ್ನು ಸ್ವೀಕರಿಸಿದ. ಈ ಶಾಸನದ ಕಾಲ ಕ್ರಿ.ಶ. 1167. ಬಲ್ಲಾಳನನ್ನು ಅದು ಉಲ್ಲೇಖಿಸುತ್ತದೆ. ಬಾಗೆವಾಡಿಯ ಸೋಮೇಶ್ವರಪಂಡಿತನಿಗೆ ಎಡೆದೊರೆಯ ನಾಳ್ಪ್ರಭು ನೇಮವೆಗ್ಗಡೆ ಮತ್ತು ಅವನ ಮಕ್ಕಳು ದಾನವಿತ್ತ ವಿಷಯ ಹಿರಿಯೂರಿನ ಭದ್ರಾ. 35ನೆಯ ಶಾಸನದಿಂದ ತಿಳಿದುಬರುತ್ತದೆ. ಗ್ರಾಮದ ಉತ್ತರಕ್ಕೆ ಕೆರೆ ಹಾಗೂ ದೇಗುಲಗಳನ್ನು ಅಕ್ಕಸಾಲೆ ಮಲ್ಲೋಜ ಕಟ್ಟಿಸಿದನು. ನೇಮವೆಗ್ಗಡೆಯಿಂದ ದಾನವೊಂದನ್ನು ಮಲ್ಲಿಕಾರ್ಜುನಗುರು ಪಡೆದನು (ಭದ್ರಾ. 37). ಈ ಶಾಸನದಲ್ಲಿ 'ಗಂಡುಯ್ಯಲ್' ಎಂಬ ಶಬ್ದ ಇರುವುದನ್ನು ಗಮನಿಸಬೇಕು. ಸಾಮಾನ್ಯವಾಗಿ ನಮಗೆ ಕಾಣಸಿಗುವುದು 'ಪೆಣ್ಬುಯ್ಯಲ್'. ಡಾ. ಎಸ್. ಎಂ. ಹಿರೇಮಠರ ಪ್ರಕಾರ ಇದು ವೀರಗಲ್ಲಿನ ಒಂದು ಪ್ರಕಾರ. 'ಶಿವಧರ್ಮಕಥನ'ವೊಂದನ್ನು ಕೇಳಿದ ಮೇಲೆ ಹೊಯ್ಸಳ ಗೊಯ್ಡಿಸೆಟ್ಟಿಯು ತನ್ನ ಮಕ್ಕಳೊಡನೆ ಸೇರಿ ಹಿರಿಯೂರಿನ ಸಿದ್ಧೇಶ್ವರದೇವರಿಗೆ ಭೂದಾನ ನೀಡಿದನೆಂದು ಹೇಳಲಾಗಿದೆ (ಭದ್ರಾ. 32). ಕ್ರಿ.ಶ. 1195ರಲ್ಲಿ ಎರಡನೆಯ ಬಲ್ಲಾಳನು ಮಹಾಗ್ರಹಾರ ನವಿಲೆಯಿಂದ ರಾಜ್ಯಭಾರಮಾಡುತ್ತಿದ್ದ (ಶಿವ. 86). ನವಿಲೆ ಈಗಿನ ಶಿವಮೊಗ್ಗ ಪಟ್ಟಣಕ್ಕೆ ಅತಿ ಸಮೀಪದಲ್ಲಿರುವ ಸ್ಥಳ. ಈ ಶಾಸನವು ಗಂಗನನಾಡಿನ ಕುದುಳಿಯಲ್ಲಿ ಒಂದು ತ್ರಿಕೂಟಬಸದಿಯ ನಿರ್ಮಾಣವಾದುದನ್ನು ಉಲ್ಲೇಖಿಸುತ್ತದೆ. ಬಾಳಚಂದ್ರರಿಗೆ ದತ್ತಿನೀಡಿದ ವಿಷಯವನ್ನೂ ಅದು ತಿಳಿಸುತ್ತದೆ. ಆದರೆ ವಿವರಗಳು ನಷ್ಟವಾಗಿವೆ. ಶಾಸನವಿರುವ ಸ್ತಂಭವು ಈಗ ಶಿವಮೊಗ್ಗದ ಕೋಟೆ ಆಂಜನೇಯ ದೇವಾಲಯದ ಭಾಗವಾಗಿಬಿಟ್ಟಿದೆ. ತ್ರುಟಿತವಾಗಿರುವ ಶಿವ 98ನೆಯ ಶಾಸನವು ಸಂತೆಕಡೂರಿನಲ್ಲಿದ್ದು, ಸಾವಂತಮಾರನು ಚಿಕ್ಕೇಶ್ವರದೇವರಿಗೆ ದತ್ತಿಗಳನ್ನಿತ್ತುದನ್ನು ದಾಖಲಿಸುತ್ತದೆ. ಅವನು ಈ ದೇವಾಲಯವನ್ನು ಸೂರ್ಯಾಭರಣಪಂಡಿತರ ಶಿಷ್ಯರಾದ ಮಲ್ಲಿಕಾರ್ಜುನಪಂಡಿತರಿಗೆ ಒಪ್ಪಿಸಿದನು. ಅವರು "ಶ್ರೀಪರ್ವ್ವತದ ಪೂರ್ವ್ವದ್ವಾರದ ತ್ರಿಪುರಾಂತಕದಾಚಾರ್ಯ್ಯ"ರಾಗಿದ್ದರೆಂದು ಹೇಳಿದೆ. ನೂರು ಎತ್ತುಗಳನ್ನೂ ದಾನವೀಯಲಾಯಿತು ; ಇವುಗಳಲ್ಲಿ ಇಪ್ಪತ್ತು ಎತ್ತುಗಳನ್ನು ಗೊಯ್ಡಿಸೆಟ್ಟಿಗೆ ಕೊಡಲಾಯಿತು ಮತ್ತು ಉಳಿದ ಎಂಬತ್ತು ದೇವರಿಗೆ ಸಂದಿತು. ಇವನ್ನು 'ಸರ್ವ್ವಬಾಧಾಪರಿಹಾರ'ವಾಗಿ ಕೊಡಲಾಯಿತು (ಶಿವ. 98). ರೈಸ್ ಅವರ ಪ್ರಕಾರ, ಸೋಗಾನೆ ಅಗ್ರಹಾರದ ಶಿವ. 103ನೆಯ ಶಾಸನದ ಪಾಠವು ಸ್ಥಳೀಯ ಜನರ ಹಸ್ತಪ್ರತಿಯಿಂದ ಪ್ರತಿಮಾಡಲಾಗಿದ್ದು ನಂಬಲು ಅರ್ಹವಾಗಿಲ್ಲ.

ಅದನ್ನು ಆಳಿದ. ಪರಂಪರಾಗತ ರಾಜ್ಯ ಹಾಗೂ ತಂದೆಗೆ ಇಂದ್ರ ಕೊಟ್ಟ ಆನೆ ಶ್ರೀದತ್ತನಿಗೆ ಬಂದಿತು. ಇಲ್ಲಿಂದ ಮುಂದೆ ಆನೆಯೇ ಅವರ ವಂಶಲಾಂಛನವಾಯಿತು.

ಗಂಗವಂಶದಲ್ಲಿ ಪ್ರಿಯಬಂಧು ಎಂಬಾತ ಜನಿಸಿದ. ಆತನ ಶ್ರದ್ಧಾಭಕ್ತಿಗಳನ್ನು ಮೆಚ್ಚಿದ ಇಂದ್ರನು ಐದು ಆಭರಣಗಳನ್ನು ನೀಡಿ ಹೀಗೆ ಹೇಳಿದ : "ನಿಮ್ಮ ವಂಶದಲ್ಲಿ ಯಾರಾದರೂ ತಪ್ಪನ್ನು ತಪ್ಪುಧರ್ಮವನ್ನು ಒಪ್ಪಿ ಸ್ವೀಕರಿಸಿದರೆ ಅವು ಮಾಯವಾಗುತ್ತವೆ" ಎಂದು ಹೇಳಿದನು ("ಮಿಥ್ಯಾದೃಷ್ಟಿಗಳಾಗಲೊಡಮದೃಶ್ಯಂಗಳಕ್ಕುಮೆಂದು ಪೇಳ್ದು"); ಅಹಿಚ್ಛತ್ರವೆಂದು ವಿಜಯಪುರಕ್ಕೆ ಹೆಸರನ್ನಿತ್ತು ಇಂದ್ರ ಅದೃಶ್ಯನಾದನು.

ಗಂಗವಂಶ ಮುಂದುವರಿಯಿತು ಹಾಗೂ ಈ ವಂಶದ ಕಂಪರಾಜನಿಗೆ ಪದ್ಮನಾಭ ಎಂಬಾತ ಜನಿಸಿದನು. ಅವನಿಗೆ ಶಾಸನದೇವತೆಯ ಕೃಪೆಯಿಂದ ಇಬ್ಬರು ಗಂಡುಮಕ್ಕಳಾದರು ; ಅವರಿಗೆ ರಾಮಲಕ್ಷ್ಮಣರೆಂದು ಹೆಸರಿಡಲಾಯಿತು.

ಉಜ್ಜಯಿನೀಪುರದ ಮಹೀಪಾಲನು ಇಂದ್ರನು ಪದ್ಮನಾಭನಿಗೆ ನೀಡಿದ ಆಭರಣಗಳನ್ನು ತನಗೆ ಒಪ್ಪಿಸಬೇಕೆಂದು ಒತ್ತಾಯಿಸಿದನು. ಆದರೆ ತನ್ನ ಮಂತ್ರಿಗಳೊಡನೆ ಸಮಾಲೋಚಿಸಿದ ಪದ್ಮನಾಭನು ತನ್ನ ಸೋದರಿ ಹಾಗೂ ನಲವತ್ತೆಂಟು ಬ್ರಾಹ್ಮಣರನ್ನು ಜೊತೆ ಮಾಡಿ ಮಕ್ಕಳನ್ನು ದೂರದೇಶಕ್ಕೆ ಕಳುಹಿಸಿದನು. ಇವರೆಲ್ಲರೂ ದಕ್ಷಿಣದತ್ತ ಬಂದರು. ರಾಮಲಕ್ಷ್ಮಣರಿಗೆ ದಡಿಗ ಮತ್ತು ಮಾಧವ ಎಂಬ ಹೊಸಹೆಸರುಗಳನ್ನು ನೀಡಲಾಯಿತು. ಅವರು ಪೇರೂರು ಅಥವಾ ಗಂಗಪೇರೂರಿಗೆ ಬಂದಾಗ, ಸಿಂಹನಂದಿ ಆಚಾರ್ಯರ ಭೇಟಿಯಾಯಿತು. ಆ ಆಚಾರ್ಯರಿಂದ ಅವರು ವಿದ್ಯಾಪಾರಂಗತರಾದರು. ಈ ಜೈನಮುನಿವರ್ಯರು ಪದ್ಮಾವತಿ ದೇವಿಯಿಂದ ಖಡ್ಗವೊಂದನ್ನು ಪಡೆದು ಮಾಧವನಿಗೆ ನೀಡಿದರು. ಆತ ಒಂದೇ ಏಟಿಗೆ ಕಲ್ಲಿನಕಂಬವೊಂದನ್ನು ತುಂಡರಿಸಿದನು ! ಇದೊಂದು ಶುಭಸಂಕೇತವೆಂದು ಭಾವಿಸಿದ ಸಿಂಹನಂದಿ ಗುರುಗಳು ದಡಿಗ ಮಾಧವರನ್ನು ಕರ್ಣಿಕಾರ ಪುಷ್ಪದಳಗಳ ಕಿರೀಟಗಳಿಂದ ಅಲಂಕರಿಸಿ ಸೂಕ್ತ ಪರಿವಾರದೊಂದಿಗೆ ಗಂಗವಾಡಿಯನ್ನು ದೊರಕಿಸಿಕೊಟ್ಟರು. ನಂದಗಿರಿ ಮತ್ತು ಕುವಳಾಲಗಳು ಈ ಸೋದರರ ಆಳ್ವಿಕೆಯ ಕೇಂದ್ರಗಳಾದವು.

ಈ ಇಬ್ಬರು ಸೋದರರು ಕೊಂಕಣವನ್ನು ಗೆಲ್ಲಲು ಸಾಗುತ್ತಿರುವಾಗ ಮಂಡಲಿಗೆ ಬಂದರು. ಅಲ್ಲಿನ ಸೌಂದರ್ಯವನ್ನು ಕಂಡು ಮನಸೋತ ಅವರು, ಅಲ್ಲಿ ಸಿಂಹನಂದಿ ಗುರುಗಳ ಸಲಹೆಯಂತೆ ಬೆಟ್ಟದ ಮೇಲೆ ಚೈತ್ಯಾಲಯವನ್ನು ನಿರ್ಮಿಸಿದರು.

ದಡಿಗನ ತರುವಾಯ ಬಂದವನು ಮಾಧವ ; ಆತನ ಮಗ ಹರಿವರ್ಮ್ಮ ; ಹರಿವರ್ಮ್ಮನ ಮಗ ವಿಷ್ಣುಗೋಪನು ಮಿಥ್ಯಾಧರ್ಮವನ್ನು ಅನುಸರಿಸಿದನು ; ಹೀಗಾಗಿ ಆಭರಣಗಳು ಮಾಯವಾದವು ! ಆದರೆ ಅವನ ಮಗನಾದ ಪೃಥ್ವೀಗಂಗನು ನಿಜಧರ್ಮವನ್ನು ಆಯ್ಕೆಮಾಡಿಕೊಂಡನು. ಪೃಥ್ವೀಗಂಗನ ಮಗ ತಡಂಗಾಲ ಮಾಧವ. ಈ ವಂಶದಲ್ಲಿ ಅನಂತರ ಬಂದವರೆಂದರೆ ಅವಿನೀತ, ದುರ್ವ್ವಿನೀತ, ಮುಷ್ಕರ, ಶ್ರೀವಿಕ್ರಮ, ಭೂವಿಕ್ರಮ, ನವಕಾಮ, ಎರಗ, ಎರೆಯಂಗ, ಶ್ರೀವಲ್ಲಭ, ಶ್ರೀಪುರುಷ, ಶಿವಮಾರ, ಮಾರಸಿಂಗ, ರಾಚಮಲ್ಲ, ಮರುಳ ಮತ್ತು ಬೂತುಗರು ರಾಚಮಲ್ಲನ ಮೊಮ್ಮಕ್ಕಳು. ಅನಂತರ ಎರೆಯಪ್ಪ, ವೀರವೆಡಂಗ, ರಾಚಮಲ್ಲ, ಎರೆಯಂಗ, ಬೂತುಗ, ಮರುಳದೇವ, ಗುತ್ತಿಯಗಂಗ, ಮಾರಸಿಂಗ, ಗೋವಿಂದರ, ಸೈಗೊಟ್ಟ ವಿಜಯಾದಿತ್ಯ, ರಾಚಮಲ್ಲ, ಕುರುಳಿರಾಜಿಗ ಮತ್ತು ಗರ್ವ್ವದ ಗಂಗ ರಾಜ್ಯವಾಳಿದರು. ಗೋವಿಂದರನ ಜ್ಞಾತಿಬಂಧು ರಕ್ಕಸಗಂಗ ಹಾಗೂ ಆತನ ತಮ್ಮ ಕಲಿಯಂಗ.

ಕ್ರಾಣೂರ್ಗಣಕ್ಕೆ ಸೇರಿದ ಜೈನಾಚಾರ್ಯರ ಪರಂಪರೆಯನ್ನು ಶಿವ. 10ನೆಯ ಶಾಸನ ನೀಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅವರುಗಳೆಂದರೆ ಸಿಂಹನಂದಿ, ಅರ್ಹದ್ಬಲಿ, ದಾಮನಂದಿ, ಬಾಲಚಂದ್ರ, ಮೇಘಚಂದ್ರ, ಗುಣಚಂದ್ರ, ಗುಣನಂದಿ, ಪ್ರಭಾಚಂದ್ರ, ಮಾಘನಂದಿ ಹಾಗೂ ಪ್ರಭಾಚಂದ್ರ, ಪ್ರಭಾಚಂದ್ರರ ಸಧರ್ಮರು ಅನಂತವೀರ್ಯ್ಯ ಮತ್ತು ಮುನಿಚಂದ್ರ ; ಇವರ ಶಿಷ್ಯರು ಶ್ರುತಕೀರ್ತಿ, ಕನಕನಂದಿ, ವಾದಿರಾಜ, ಮಾಧವಚಂದ್ರ ಹಾಗೂ ಬಾಳಚಂದ್ರ, ಪ್ರಭಾಚಂದ್ರರ ಶಿಷ್ಯ ಬುಧಚಂದ್ರ, ದೊರೆ ಬರ್ಮ್ಮದೇವನು ಬುಧಚಂದ್ರರ ಗುಡ್ಡನಾಗಿದ್ದ. ದಡಿಗ ಮಾಧವರು ಮರದಲ್ಲಿ ನಿರ್ಮಿಸಿದ್ದ ಬಸದಿಯನ್ನು ಕಲ್ಲಿನಲ್ಲಿ ಕಟ್ಟಿಸಿ ಅದಕ್ಕೆ ಪಟ್ಟದ ಬಸದಿ ಎಂದು ಹೆಸರು ಕೊಟ್ಟವನು ಈತ. ಈ ಬಸದಿಯು ಎಡದೊರೆನಾಡಿನ ಪ್ರಧಾನ ಬಸದಿಯಾಗಿದ್ದಿತು. ಬರ್ಮ್ಮದೇವನ ನಾಲ್ಕು ಜನ ಗಂಡುಮಕ್ಕಳು – ಮಾರಸಿಂಗ, ನನ್ನಿಯಗಂಗ, ರಕ್ಕಸಗಂಗ ಮತ್ತು ಭುಜಬಳಗಂಗ – ಆ ಬಸದಿಗೆ ದತ್ತಿಗಳನ್ನು ನೀಡಿದರು. ಕ್ರಿ.ಶ. 1112ರಲ್ಲಿ ನನ್ನಿಯಗಂಗನು ಮರದ ಬಸದಿಯನ್ನು ಕಲ್ಲಿನಲ್ಲಿ ಕಟ್ಟಿಸಿದನು ; ಹಾಗೆಯೇ ಇನ್ನೂ ಇಪ್ಪತ್ತೈದು ಬಸದಿಗಳನ್ನು ಕಟ್ಟಿಸಿದನಂತೆ. ಈತನ ಹೆಂಡತಿ ಕಂಚಲದೇವಿ ಹಾಗೂ ಮಗ ಹೆಮ್ಮಾಡಿ ಅಥವಾ ಪೆರ್ಮ್ಮಾಡಿದೇವ. ಈ ಪೆರ್ಮ್ಮಾಡಿ ಹೊಯ್ಸಳ ಎರೆಯಂಗನ ಅಳಿಯ. "ಇದು ವಂಶಕಥನ ; ಇದರ ಕೆಲವು ಭಾಗಗಳು ಕಟ್ಟುಕಥೆಗಳಂತೆ ಕಂಡುಬಂದರೆ ಇತರ ಹಲವು ನಿಜಾಂಶಗಳಾಗಿವೆ" ಎಂದು ರೈಸ್ ಅವರು ಹೇಳುತ್ತಾರೆ.

ಮುಂದಿನ ಶಾಸನ ತಟ್ಟೆಕೆರೆಯ ಶಿವ. 59. ಅದರ ಕಾಲ ಕ್ರಿ.ಶ. 1085. ರೈಸ್ ಅವರ ಪ್ರಕಾರ "ಗಂಗರ ಉಗಮ ಮತ್ತು ವಂಶಾವಳಿಯ ಬಗೆಗೆ ದೀರ್ಘ ನಿರೂಪಣೆಯನ್ನು ಒಳಗೊಂಡಿರುವ ಅತ್ಯಂತ ಪ್ರಾಚೀನ ಶಾಸನವಿದು."

ಚಾಲುಕ್ಯದೊರೆ ತ್ರಿಭುವನಮಲ್ಲನು ಮಂಡಳಿಸಾವಿರ ಪ್ರದೇಶವನ್ನು ಪಾಲಿಸಲು ಗಂಗ ಪ್ರಭು ಪೆರ್ಮ್ಮಾಡಿಗೆ ಕರುಣಿಸಿದನು (ದಯೆಗೆಯ್ಯೆ). ಗಂಗ ಪ್ರಭುವಿನ ಮಂತ್ರಿಯಾದ ಪೆರ್ಗಡೆ ನೊಕ್ಕಯ್ಯನು ದೇವಾಲಯವೊಂದನ್ನು ಕಟ್ಟಿಸಿದ, ಅರವಂಟಿಗೆಯನ್ನು ಸ್ಥಾಪಿಸಿದ, ಕೆರೆಯನ್ನು ವಿಸ್ತರಿಸಿದ, ಭತ್ತದ ಗದ್ದೆಗಳನ್ನು ರೂಪಿಸಿದ ಹಾಗೂ ತಟ್ಟೆಕೆರೆಯಲ್ಲಿ ಬಸದಿಯನ್ನು ಕಟ್ಟಿಸಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ.

ನೊಕ್ಕಯ್ಯನಿಗೆ ಇಬ್ಬರು ಮಕ್ಕಳು : ಪೆರ್ಮ್ಮಾಡಿಗಾವುಂಡನೆಂದೂ ಪರಿಚಿತನಾದ ಗುಜ್ಜಣ ಹಾಗೂ ಜಿನದಾಸ. ತಟ್ಟೆಕೆರೆಗ್ರಾಮದಲ್ಲಿ ಕೆರೆಯ ಬಳಿ ಬಸದಿಯೊಂದನ್ನು ಕಟ್ಟಿಸುವ ತಂದೆಯ ಅಭಿಪ್ರಾಯವನ್ನು ಗುಜ್ಜಣನು ವಿರೋಧಿಸಿದ್ದನು (ಅನ್ತರಾಯ). ಇದಕ್ಕೆ ಕಾರಣವನ್ನು ಶಾಸನದಲ್ಲಿ ತಿಳಿಸಿಲ್ಲ. ಅನಿರೀಕ್ಷಿತವಾಗಿ ಹಾಗೂ ದುರ್ದೈವವಶಾತ್ ನೊಕ್ಕಯ್ಯ ತನ್ನ ಇಬ್ಬರೂ ಮಕ್ಕಳನ್ನು ಕಳೆದುಕೊಳ್ಳಬೇಕಾಯಿತು. ನೆಲ್ಲವತ್ತಿ, ಹರಿಗೆ ಹಾಗೂ ತಟ್ಟೆಕೆರೆಗಳಲ್ಲಿ ಆತ ಬಸದಿಗಳನ್ನು ಕಟ್ಟಿಸಿದ. "ನೊಕ್ಕಯ್ಯನ ಪರೋಪಕಾರಾರ್ತ್ಥಕ್ಕಂ ವೀರಕ್ಕಂ ವಿತರಣಕ್ಕಂ" ಮೆಚ್ಚಿದ ಗಂಗ ಪ್ರಭು ಎಂಟುಗ್ರಾಮಗಳ ಗಾವುಂಡವೃತ್ತಿಯನ್ನು ನೀಡಿದನು ; ಈ ಎಂಟುಗ್ರಾಮಗಳಲ್ಲಿ ಈಗಿನ ಶಿವಮೊಗ್ಗವೂ (ಸೀಮೊಗೆ) ಒಂದು. ಇಷ್ಟೇ ಅಲ್ಲದೆ ಗಂಗಪ್ರಭು ರಾಜಲಾಂಛನ, 30 ಕುದುರೆ ಹಾಗೂ 500 ಆಳುಗಳನ್ನು ಮತ್ತು ಗ್ರಾಮವೊಂದರ ಸಿದ್ಧಾಯವನ್ನು ನೊಕ್ಕಯ್ಯನಿಗೆ ಕೊಟ್ಟನು. ಈ ನೊಕ್ಕಯ್ಯ ಮೂಲಸಂಘದ, ಕ್ರಾಣೂರ್ಗಣದ, ಮೇಷಪಾಷಾಣಗಚ್ಛದ ಪ್ರಭಾಚಂದ್ರ ಸಿದ್ಧಾಂತದೇವರ ಗುಡ್ಡ (ಶಿಷ್ಯ). ಈ ಶಾಸನ ದಾಮರಾಜ ರಚಿಸಿದ 'ಸಾಸನಗಬ್ಬ'.

ಕ್ರಿ.ಶ. 1108ರಲ್ಲಿ ಭುಜಬಳಗಂಗ ಪೆರ್ಮ್ಮಾಡಿದೇವನು ಗಂಗವಾಡಿ ತೊಂಬತ್ತಾರು ಸಾವಿರ ಮತ್ತು ಮೇಘುಟ್ಟಿ–ಮಂಡಲಿ ಸಾವಿರ ಪ್ರದೇಶಗಳನ್ನು ಪಾಲಿಸುತ್ತಿದ್ದ (ಭದ್ರಾ. 25). ಈತನ ಹೆಂಡತಿ ಗಂಗಮಹಾದೇವಿ (ಶಿವ. 7). ಈ ದಂಪತಿಗಳಿಗೆ ನಾಲ್ಕು ಜನ ಮಕ್ಕಳು – ಗಂಗರಸ, ಮಾರಸಿಂಗ, ಗೊಗ್ಗಿದೇವ ಮತ್ತು ಕಲಿಯಂಗದೇವ. ಈ ಅಧಿಪನು ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ (ಕುಮಾರವರ್ಗ) ಎಡೆಹಳ್ಳಿಯಲ್ಲಿದ್ದು ಮಂಡಲಿಸಾವಿರ ಪ್ರದೇಶವನ್ನು ಆಳುತ್ತಿದ್ದ. ರೈಸ್ ಅವರ ಪ್ರಕಾರ ಈ ಎಡೆಹಳ್ಳಿಯು ಈಗಿನ ನರಸಿಂಹರಾಜಪುರ ; ಇದರ ಹಿಂದಿನ ಹೆಸರು ಎಡೆಹಳ್ಳಿ. ಆದರೆ ಅವರ ಊಹೆಗೆ ಹೆಚ್ಚಿನ ಪುರಾವೆಗಳು ಬೇಕಾಗುತ್ತವೆ. ಗಂಗ ದೊರೆಯ ಇನ್ನೊಬ್ಬ ಪತ್ನಿ ಬಾಚಲದೇವಿ ; ಈಕೆ ಮಂಡಲಿನಾಡಿನ 'ತಿಣಕ' (ತಿಲಕ) ಎನಿಸುವ ಪಾರ್ಶ್ವನಾಥ ಚೈತ್ಯಾಲಯವನ್ನು ಮಾಡಿಸಿದಳು. ಈ ದೊರೆ ತನ್ನ ಪತ್ನಿಯರು, ಮಕ್ಕಳೊಡನೆ ಸೇರಿ, ಸಮಸ್ತಪ್ರಧಾನರು ಮತ್ತು ನಾಡಪ್ರಭುಗಳ ಸನ್ನಿಧಾನದಲ್ಲಿ ದಾನವಿತ್ತ. ಲೊಕ್ಕಿಯಗದ್ಯಾಣದ ಪ್ರಸ್ತಾಪವಿರುವುದು ಗಮನಾರ್ಹ ಅಂಶ.

ದೊರೆ ಬಮ್ಮದೇವನು ಮಂಡಲಿಯ ಪಟ್ಟದ ಬಸದಿಗೆ ಭೂಮಿ ದಾನ ಮಾಡಿದ ವಿಷಯವನ್ನು ಹರಕೆರೆಯ ಶಾಸನವು (ಶಿವ. 104) ನಿರೂಪಿಸುತ್ತದೆ. ಆತನ ಹೆಂಡತಿ ಮಕ್ಕಳೂ ಕೆಲವು ದತ್ತಿಗಳನ್ನಿತ್ತರು. ಶಾಸನವಿರುವ ಕಂಬವು ಈಗ ಈ ಗ್ರಾಮದ ರಾಮೇಶ್ವರ ದೇವಾಲಯದ ರಂಗಮಂಟಪದಲ್ಲಿದೆ.

ನಿದಿಗಿಯ ಶಿವ. 64ನೆಯ ಶಾಸನವು ನನ್ನಿಯ ಗಂಗನ ಆಳ್ವಿಕೆಗೆ ಸೇರಿದೆ. ಈತನೂ ಎಡೆಹಳ್ಳಿಯಲ್ಲಿ ನೆಲಸಿದ್ದ. ಶಿವ 82ನೆಯ ಶಾಸನವು ಕ್ರಿ.ಶ. 1122ರಲ್ಲಿ ನಡೆದ ಯುದ್ಧವೊಂದನ್ನು ಉಲ್ಲೇಖಿಸುತ್ತದೆ. ತನ್ನ ಅಜ್ಜ ಮಂಡಲಿಯಲ್ಲಿ ಮರದಲ್ಲಿ ಕಟ್ಟಿಸಿದ ಪಟ್ಟದ ತೀರ್ಥಬಸದಿಯನ್ನು ಈತ ಕಲ್ಲಿನಲ್ಲಿ ಕಟ್ಟಿಸಿದನು. ಈತನ ಪತ್ನಿ ಕಂಚಲದೇವಿ ಹಾಗೂ ಮಗ ಪೆರ್ಮ್ಮಾಡಿ. ಕ್ರಿ.ಶ. 1125ರಲ್ಲಿ ಪಡವಳ ಗಂಗಿಮಯ್ಯ, – ವೀರಗಂಗ ಪೆರ್ಮಾಡಿಯ ಒಬ್ಬ ಅಧಿಕಾರಿ – ಬೆಳಗವತ್ತಿಯ ಮೇಲೆ ದಾಳಿ ನಡೆಸಿದ ; ಆದರೆ ಆಗ ನಡೆದ ಹೋರಾಟದಲ್ಲಿ ಅಸುನೀಗಿದ (ಶಿವ. 77). ಈ ದೊರೆ ಮಂಡಲಿನಾಡಿನಲ್ಲಿ 'ಕನ್ನಕಾಪುರದ ಕೋಟೆಯಂ ಮಾಡಿ' ಅದರ 'ಪೂರ್ವಭಾಗದ ಮೂಲಸ್ಥಾನದೇವರ ಮುಂದೆ' ಮಾಡಿಸಲಾದ ಬಾವಿಯ ನಿರ್ವಹಣೆಗೆ ಹಾಗೂ ದೇವರಿಗೆ ಭೂದಾನವಿತ್ತ (ಶಿವ. 72).

ಶಿವ. 4, 14, 59, 64, 68 ಮುಂತಾದ ಕೆಲವು ಶಾಸನಗಳನ್ನು ಆಧರಿಸಿ ಗಂಗದೊರೆಗಳ ವಂಶಗಾಥೆಯನ್ನು ನಿರೂಪಿಸಬಹುದು : ಅಯೋಧ್ಯಾಪುರವನ್ನು ಆಳುತ್ತಿದ್ದ ಹರಿಶ್ಚಂದ್ರನು ಇಕ್ಷ್ವಾಕು ವಂಶಕ್ಕೆ ಸೇರಿದ ಧನಂಜಯ ಮತ್ತು ಗಾಂಧಾರಿದೇವಿಯರ ಮಗ. ಆತನ ಮಗ ಭರತ ; ಭರತನ ಹೆಂಡತಿ ವಿಜಯಮಹಾದೇವಿ. ಇವರಿಬ್ಬರ ಮಗ ಗಂಗದತ್ತ ; ಅವನ ಮಗ ಮತ್ತೆ ಭರತ, ಭರತನ ಮಗ ಗಂಗದತ್ತ ; ಈತನ ಮಗ ಹರಿಶ್ಚಂದ್ರ ; ಹರಿಶ್ಚಂದ್ರನ ಮಗ ಮತ್ತೊಬ್ಬ ಭರತ ; ಈ ಭರತನ ಮಗ ಗಂಗದತ್ತ. ಗಂಗವಂಶ ಮುಂದುವರಿದು, ಅದರಲ್ಲಿ ವಿಷ್ಣುಗುಪ್ತ ಹುಟ್ಟಿ, ಸಾಮ್ರಾಜ್ಯವೊಂದನ್ನು ಸಂಪಾದಿಸಿಕೊಂಡು ಅಹಿಚ್ಛತ್ರಪುರದಿಂದ ಆಳಿದ. ಅಲ್ಲಿ ಆತ ಐಂದ್ರಧ್ವಜ ಪೂಜೆಯನ್ನು ಮಾಡಿದಾಗ, ಮೆಚ್ಚಿದ ದೇವೇಂದ್ರನು ಐರಾವತವನ್ನು ಕರುಣಿಸಿದ. ಈ ವಿಷ್ಣುಗುಪ್ತನ ಪತ್ನಿ ಪೃಥ್ವೀಮತಿ. ಇವರಿಗೆ ಇಬ್ಬರು ಮಕ್ಕಳು : ಭಗದತ್ತ ಮತ್ತು ಶ್ರೀದತ್ತ. ತನ್ನ ಹಿರಿಯಮಗ ಭಗದತ್ತನಿಗೆ ಕಳಿಂಗದೇಶವನ್ನು ಆಳಲು ವಿಷ್ಣುಗುಪ್ತ ಕೊಟ್ಟ. ಆತ ಕಳಿಂಗ ಗಂಗನಾಗಿ

ಪತ್ನಿ ಗಂಗವಂಶದ ಬೀರಲದೇವಿ. ಭುಜಬಲಶಾಂತರ, ನನ್ನಿ ಶಾಂತರ, ಒಡ್ಡುಗ ಅಥವಾ ವಿಕ್ರಮಶಾಂತರರು ವೀರ ಮತ್ತು ಬೀರಲದೇವಿಯ ಮಕ್ಕಳು. ವಿಕ್ರಮಶಾಂತರನ ಹೆಂಡತಿ ಪಾಂಡ್ಯಕುಲದ ಚಂದಲ ದೇವಿ. ಅವರಿಬ್ಬರ ಮಗ ತೈಲ.

ಪ್ರಸ್ತುತ ಶಾಸನವು ಇನ್ನಷ್ಟು ಮಾಹಿತಿಯನ್ನು ನೀಡುತ್ತದೆ. ಬೀರಬ್ಬರಸಿಯು ಅರುಮುಳಿದೇವ ಮತ್ತು ಗಾವಬ್ಬರಸಿಯ ಮಗಳು ; ಈಕೆಯ ಅಕ್ಕ ಚಟ್ಟಲದೇವಿ, ದೊರೆ ತೈಲನ ಅಜ್ಜಿ. ಚಟ್ಟಲದೇವಿಯನ್ನು ಶಾಸನದಲ್ಲಿ ಪ್ರಶಂಸಿಸಲಾಗಿದೆ. ಅವಳು 'ಕಾಂಚೀನಾಥ ಮನಃಪ್ರಿಯೆ'. ಚಟ್ಟಲದೇವಿ ಹಾಗೂ ಆಕೆಯ 'ಮಕ್ಕಳು' ಎಂದರೆ ಭುಜಬಲಶಾಂತರ, ನನ್ನಿಶಾಂತರ, ವಿಕ್ರಮಶಾಂತರ ಮತ್ತು ಬರ್ಮ್ಮದೇವ – ಇವರು ಪೊಂಬುರ್ಚ್ಚದಲ್ಲಿ ಪಂಚವಸದಿಯನ್ನು ಕಟ್ಟಿಸಿದರು. ಬಸದಿಯ ದುರಸ್ತಿಕಾರ್ಯಗಳಿಗೂ 'ರಿಷಿಸಮುದಾಯಕ್ಕಾಹಾರದಾನಾರ್ತ್ಥಮಾಗಿ'ಯೂ ಕೆಲವು ಹಳ್ಳಿಗಳನ್ನು ದಾನ ನೀಡಲಾಯಿತು. ಮೃತಿಹೊಂದಿದ ಬೀರಬ್ಬರಸಿಗೆ ಸ್ಮಾರಕವಾಗಿ ಆನಂದೂರಿನಲ್ಲಿ, ದ್ರವಿಳಸಂಘದ ಮತ್ತು ಅರುಂಗಳಾನ್ವಯದ ಅಜಿತಸೇನ ಪಂಡಿತರ ನಾಮೋಚ್ಚಾರಣಮಾಡುತ್ತ ಕೆಸರಕಲ್ಲನ್ನು ಚಟ್ಟಲದೇವಿ ಮತ್ತು ತ್ರಿಭುವನಮಲ್ಲ ಶಾಂತರದೇವರು ಇರಿಸಿದರು. ಜೈನಗುರುವಿನ ಪರಂಪರೆಯನ್ನು ಕೊಟ್ಟಿದೆ. ಬಸದಿಯ ಪ್ರತಿಷ್ಠಾಪನೆಯ ಕಾಲದಲ್ಲಿ ತೈಲುಗ, ಗೋವಿಂದ ಮತ್ತು ಬೊಪ್ಪುಗ – ಈ ಮೂವರು ರಾಜಪುತ್ರರು ಉಪಸ್ಥಿತರಿದ್ದು, ದಾನವನ್ನೂ ನೀಡಿದರು.

ಭದ್ರಾ. 3ನೆಯ ಶಾಸನವು ಎಡವಲೆ–70ರ ಪ್ರಭುವಾದ ಗೊಗ್ಗರಸನಿಗೆ ಆತನ ತಮ್ಮ ಒಡ್ಡಮರಸನು ಸ್ಮಾರಕವೊಂದನ್ನು ಪ್ರತಿಷ್ಠಾಪಿಸಿದ ವಿಷಯವನ್ನು ದಾಖಲಿಸುತ್ತದೆ. ಈ ಶಾಸನ ಕುತೂಹಲಕರವಾಗಿದೆ. ತ್ರಿಭುವನಮಲ್ಲ ಶಾಂತರನು ಮನ್ನೆಯ ಗೊಗ್ಗರಸನನ್ನು ನಂಬಿಸಿದ ಹಾಗೂ ಕೊಂದುಬಿಟ್ಟ. ಆದರೆ, ಆತನೇ ತನ್ನ ಬೀಡಿಗೆ ಹಿಂದಿರುಗುತ್ತಿದ್ದಾಗ ಹತನಾದ. ಈ ಗೊಗ್ಗರಸ ಮನ್ನೆಯ ಬೊಮ್ಮರಸನ ಮಗ, ಸಾಂತರ ಕುಟುಂಬದಲ್ಲಿ ನಡೆದ ಒಂದು ಆಂತರಿಕ ಕಲಹ ಇದಾಗಿರಬೇಕೆಂದು ತೋರುತ್ತದೆ. ಶಿವ. 55 ವೀರಶಾಂತರದೇವನ ಕಾಲದ ಶಾಸನವಾಗಿದ್ದು, ಇದರಲ್ಲಿ ಕೆಲವು ಸಾಂತರ ಬಿರುದುಗಳ ಉಲ್ಲೇಖವಿದೆ. ಬಮ್ಮಯ ಮತ್ತು ಇತರರು ಮಲೆಯಜೀಯನಿಗೆ ದತ್ತಿ ನೀಡಿದ ವಿಷಯವನ್ನು ಅದು ದಾಖಲಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ. 1173.

ಚಾಲುಕ್ಯ

ಶಿವ. 117ನೆಯ ಶಾಸನದಲ್ಲಿ ತೇದಿ ಮಾತ್ರ ಉಳಿದಿದ್ದು, ಅದು ಕ್ರಿ.ಶ. 1092ಕ್ಕೆ ಹೊಂದುತ್ತದೆ. ಸಾಂತರರು, ಗಂಗರು ಹಾಗೂ ಹೊಯ್ಸಳರಂಥ ತಮ್ಮ ಸಾಮಂತರಸರ ಮೂಲಕ ಕಲ್ಯಾಣದ ಚಾಲುಕ್ಯರು ಈ ಪ್ರದೇಶವನ್ನು ಆಳಿದರು. ಚಾಲುಕ್ಯ ಶಾಸನಗಳ ಕಾಲ ಕ್ರಿ.ಶ. 1092ರಿಂದ 1192ರವರೆಗೆ ಬದಲಾಗುತ್ತದೆ. ಬಹುಪಾಲು ಶಾಸನಗಳು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದವು. ಮೃಗವಧೆಯ ತೀರ್ಥ. 211 ಹಾಗೂ ದಾನಶಾಲೆಯ ತೀರ್ಥ. 173ನೆಯ ಶಾಸನಗಳು ಕೆಲವು ಚಾಲುಕ್ಯ ಬಿರುದುಗಳನ್ನು ಉಲ್ಲೇಖಿಸುತ್ತವೆ. ಕ್ರಿ.ಶ. 1112ರ ಶಿವ 7ನೆಯ ಶಾಸನದ ಪ್ರಕಾರ ತ್ರಿಭುವನಮಲ್ಲದೇವನು ಕಲ್ಯಾಣಪುರದಿಂದ ರಾಜ್ಯವಾಳುತ್ತಿದ್ದನು. ಭದ್ರಾ. 38ನೆಯ ಶಾಸನವು ಚಾಲುಕ್ಯವಿಕ್ರಮಶಕೆಯ 51ನೆಯ ವರ್ಷವನ್ನು ಉಲ್ಲೇಖಿಸುತ್ತದೆ. ತ್ರೈಲೋಕ್ಯಮಲ್ಲದೇವನು ರಾಜ್ಯವಾಳುತ್ತಿದ್ದಾಗ, ಕಮ್ಮರೂರಿನ ಚೆನ್ನಗಾವುಂಡನು ಗುತ್ತಿಯಮಂಡಳಿಕ ಬಮ್ಮರಸನ ವಿರುದ್ಧ ತುರುಗಾಳಗವೊಂದರಲ್ಲಿ ಹೋರಾಡಿದನು (ಶಿವ. 21).

ಗಂಗ[11]

ಎರೆಯಪ್ಪನು ಪಟ್ಟವನ್ನು ಧರಿಸಿದಾಗ, ಮಂಡಲಿನಾಡನ್ನು ಬೂತುಗನು ಪರಿಪಾಲಿಸುತ್ತಿದ್ದನು ಎಂದು ಆಲಹಳ್ಳಿಯ ಶಿವ. 6ನೆಯ ಶಾಸನವು ತಿಳಿಸುತ್ತದೆ. ಈ ಶಾಸನವು ಸುಮಾರು ಕ್ರಿ.ಶ. 10ನೆಯ ಶತಮಾನಕ್ಕೆ ಸೇರಿದುದು. ಬೂತುಗನು ತನ್ನ ಅರಸಿ ಚಿಕ್ಕಬ್ಬೆಗೆ ಕೆರೆಯೊಂದನ್ನು ದಾನವಿತ್ತ ಸಂಗತಿಯನ್ನು ಅದು ನಿರೂಪಿಸುತ್ತದೆ. ಅದು ಉಲ್ಲೇಖಿಸುವ ಬಿಳ್ಳರ ಪೋಚರಸನೆಂಬ ದೊರೆಯ ಗುರುತು ತಿಳಿದಿಲ್ಲ. ಇದೇ ಕಾಲದ ಶಿವ. 78ನೆಯ ಶಾಸನವು ಮಂಡಲಿನಾಡು–ಸಾಸಿರವನ್ನು ಉಲ್ಲೇಖಿಸುತ್ತದೆ. ಆಳುತ್ತಿದ್ದ ದೊರೆ ಪೆರ್ಮ್ಮಾನಡಿ. ಗಂಗವೂರಿನಲ್ಲಿ ನಡೆದ ತುರುಗಾಳಗವೊಂದರಲ್ಲಿ ಅಳ್ಳಮ್ಮಗವುಂಡನ ಮಗನಾದ ಚೋಳ ಎಂಬ ವೀರ ಕಾದಿ ಮಡಿದ ವಿಷಯವನ್ನು ಅದು ತಿಳಿಸುತ್ತದೆ. ಶಿವ. 10ನೆಯ ಶಾಸನದಲ್ಲಿ ಗಂಗ ವಂಶಾವಳಿಯನ್ನು ನೀಡಿದೆಯಾದರು ವಿವರಗಳು ನಷ್ಟವಾಗಿವೆ. ಬಸದಿಯೊಂದರ ನಿರ್ವಹಣೆಗಾಗಿ ತಟ್ಟೆಕೆರೆ ಗ್ರಾಮವನ್ನೂ ಸ್ವಲ್ಪ ಧನವನ್ನೂ ದಾನ ನೀಡಿದ ವಿಷಯವನ್ನು ಅದು ತಿಳಿಸುವಂತೆ ತೋರುತ್ತದೆ. ಪ್ರಾಯಃ ನನ್ನಿಯಗಂಗ ಹಾಗೂ ಆತನ ರಾಣಿ ದಾನಿಗಳು. ಕ್ರಿ.ಶ. 10ನೆಯ ಶತಮಾನಕ್ಕೆ ಸೇರುವ ಈ ಶಾಸನದ ಪಾಠ ಪೂರ್ಣವಾಗಿ ದೊರೆಯುವುದಿಲ್ಲ. ಜೈನಗುರುಗಳನ್ನು ಅದು ಪ್ರಶಂಸಿಸುತ್ತದೆ ; ಅವರ ವಂಶಾವಳಿಯನ್ನು ಅದು ನೀಡಿದರೂ ಅದು ಅವಿಚ್ಛಿನ್ನವಾಗಿಲ್ಲ.

ಶಾಸನದ ಬಗೆಗೂ ಅವರದು ಇದೇ ಅಭಿಪ್ರಾಯ. ಕ್ರಿ.ಶ. 1160ರ ಶಿವ. 67ನೆಯ ಶಾಸನವು ಬಟ್ಟಕಳದ ತೈಲಹದೇವನನ್ನು ಉಲ್ಲೇಖಿಸುತ್ತದೆ.

ರಾಷ್ಟ್ರಕೂಟ

ಪ್ರಸ್ತುತ ಸಂಪುಟದಲ್ಲಿ ಈ ರಾಜವಂಶಕ್ಕೆ ಸೇರಿದ ಎಲ್ಲ ಶಾಸನಗಳೂ ವೀರಗಲ್ಲುಗಳ ಮೇಲಿವೆ. ಭದ್ರಾ 2ನೆಯ ಶಾಸನವು ಕನ್ನರದೇವನ ಆಳ್ವಿಕೆಯನ್ನು ಪ್ರಸ್ತಾಪಿಸುತ್ತದೆ ; ಈತ ಮುಮ್ಮಡಿ ಕೃಷ್ಣನಿಂದ (ಕ್ರಿ.ಶ. 939–967) ಅಭಿನ್ನ. ಈ ಶಾಸನದ ತೇದಿ ಕ್ರಿ.ಶ. 963–64. ಇನ್ದರ ಅಥವಾ ಇಂದ್ರ ಸಾಂತಳಿಗೆಯನ್ನು ಪಾಲಿಸುತ್ತಿದ್ದ. ಈತನನ್ನು ಕೃಷ್ಣನ ಮೊಮ್ಮಗನಾದ ಇಂದ್ರನೆಂದು ಗುರುತಿಸಬಹುದು. ಗೋಗ್ರಹಣ ಸಂಬಂಧದ ಹೋರಾಟದಲ್ಲಿ ಬೆಟ್ಟುಗನೆಂಬ ವೀರ ಕಾದಿ ಮಡಿದ. ಗೋವಿಗಾವುಂಡ ವೀರಗಲ್ಲನ್ನು ಹಾಕಿಸಿದ. ಶಿವ. 87ನೆಯ ಶಾಸನವು ಕ್ರಿ.ಶ. 10ನೆಯ ಶತಮಾನಕ್ಕೆ ಸೇರಿದುದು ; ಗಂಗವಾಡಿಯನ್ನು ಪಾಲಿಸುತ್ತಿದ್ದ ಗಂಗ ಬೂತುಗನನ್ನು ಅದು ಉಲ್ಲೇಖಿಸುತ್ತದೆ. ಶಿವ. 88ನೆಯ ಶಾಸನವೂ ಆತನನ್ನು ಉಲ್ಲೇಖಿಸುತ್ತದೆ.

ಸಾಂತರ

ಸಾಂತರರು–ಇವರನ್ನು ಶಾಂತರರು ಎಂದೂ ಕರೆಯುವುದುಂಟು–ಮಲೆನಾಡು ಪ್ರದೇಶವನ್ನು ಹಲವು ಶತಮಾನಗಳ ಕಾಲ ಆಳಿದರು. ಅವರ ರಾಜಧಾನಿಯಾಗಿದ್ದುದು ಪಟ್ಟಿ–ಪೊಂಬುರ್ಚ್ಚಪುರ ; ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಈಗಿನ ಹೊಂಬುಚವೇ ಅದು. ಅವರ ವಂಶಾವಳಿಯನ್ನು ಕೆಲವು ಶಾಸನಗಳು ನೀಡುತ್ತವೆ. ತೀರ್ಥ. 173ನೆಯ ಶಾಸನವು ರಾಹ ಎಂಬಾತನನ್ನು 'ಉತ್ತರಮಧುರಾಪುರೀಭುಜಂಗ' ಎಂದು ಬಣ್ಣಿಸುತ್ತದೆ. ಆತನ ಮಗ ಸಹಕಾರ ; ಸಹಕಾರನ ಮಗ ಉಗ್ರಾನ್ವಯದ ಜಿನದತ್ತ. ಈತ ಪ್ರಖ್ಯಾತ ಭಾರತಯುದ್ಧದಲ್ಲಿ ಭಾಗವಹಿಸಿ, ತ್ರಿವಿಕ್ರಮನ ಕಾರುಣ್ಯದಿಂದ ಶಂಖವೊಂದನ್ನು ಪಡೆದನು, ಧನಂಜಯನಿಂದ ಕಪಿಧ್ವಜವನ್ನು (ಶಾಖಾಮೃಗಧ್ವಜ) ಸ್ವೀಕರಿಸಿದನು ಹಾಗೂ ಸ್ವಪರಾಕ್ರಮದಿಂದ ಕಂಠೀರವಧ್ವಜವನ್ನು ಸಂಪಾದಿಸಿಕೊಂಡನು. ಈತ ದಕ್ಷಿಣ ದಿಶಾಭಿಮುಖವಾಗಿ ಜೈತ್ರಯಾತ್ರೆ ಹೊರಟು, ಪದ್ಮಾವತಿದೇವಿಯನ್ನು ಆರಾಧಿಸಿ ತನ್ನದೇ ಆದ ರಾಜ್ಯವೊಂದನ್ನು ಗಳಿಸಿ, ರಾಜಧಾನಿ ಪೊಂಬುರ್ಚ್ಚದಲ್ಲಿ ಶಾಂತರ ಪಟ್ಟವನ್ನು ಧರಿಸಿದನು. ಈತನ ಇನ್ನೊಂದು ಹೆಸರು ಶಾಂತರ ಎಂದಾಯಿತು ಹಾಗೂ ಈತ ಸಾಂತಳಿಗೆ ಸಾವಿರ ಪ್ರದೇಶವನ್ನು ಆಳಿದನು. ಈತನ ವಂಶವೂ ಶಾಂತರ ಎಂದು ಪರಿಚಿತವಾಯಿತು. ಆದರೆ ಮಾಚೇನಹಳ್ಳಿ ತಾಮ್ರಶಾಸನವು (ಎಕ XII ತರೀಕೆರೆ–103) 'ಕಾಳಿನ್ದೀಮೇಖಲಮಧುರಾಪುರೀಶ್ವರ'ನಾದ ಜಯಸಂಗ್ರಹ ಯಾನೆ ವಿನಯಾದಿತ್ಯ ಪೃಥ್ವೀವಲ್ಲಭ ಛಾನ್ತರಾಜನಿಗೆ ಸೇರಿದುದು. ಆತ ಉಗ್ರವಂಶಕ್ಕೆ ಸೇರಿದವನು. ಸ್ವಾರಸ್ಯಕರ ಸಂಗತಿ ಎಂದರೆ ಸುಮಾರು ಕ್ರಿ.ಶ. 7ನೆಯ ಶತಮಾನದ ಈ ಶಾಸನ ಕನ್ನಡದಲ್ಲಿರುವುದು ಹಾಗೂ ಮಿರಿಜವಳಿ, ಪೊಣಿಮೊಗೆ, ಕಿಟ್ಕೊಟೆ, ಗುಡಗತಾಣ, ನೊಕ್ಕಿಗೋಡು, ಮಣಲಿಮಕ್ಕಿ ಮತ್ತು ಮುದುವಕ್ಕಗಳಂಥ ಗ್ರಾಮಗಳನ್ನು ಉಲ್ಲೇಖಿಸುವುದು. ಈ ಸ್ಥಳಗಳನ್ನೆಲ್ಲ ಮಲೆನಾಡಿನ ಪ್ರದೇಶದಲ್ಲಿಯೇ ಗುರುತಿಸಬೇಕು. ಪೊಂಬುಚ್ಚವನ್ನು ಉಲ್ಲೇಖಿಸದೆ, ಮಧುರೆಯನ್ನು ಮಾತ್ರವೇ ಈ ಶಾಸನವು ಉಲ್ಲೇಖಿಸುವುದು ಗಮನಾರ್ಹ ಅಂಶ. ರೈಸ್ ಅವರ ಪ್ರಕಾರ ಜಿನದತ್ತನಿದ್ದುದು 8ನೆಯ ಶತಮಾನದಲ್ಲಿ.[10] ಆದ್ದರಿಂದ ಜಯಸಂಗ್ರಹನಿಗೆ ಇನ್ನೂ ಹಿಂದಿನ ಕಾಲವನ್ನು ನೀಡಬೇಕಾಗುತ್ತದೆ. ಪ್ರಾಯಃ ಆತ ಚಾಲುಕ್ಯ ಸಾಮಂತರಸನಾಗಿ ಆಳಿರಬೇಕು. ಸಾಂತರರ ವಲಸೆಯ ಕಥೆಯನ್ನು ಸತ್ಯವೆಂದು ನಂಬುವುದಾದಲ್ಲಿ, ಅದು ಜಿನದತ್ತನಿಗಿಂತಲೂ ಹಿಂದೆಯೇ ನಡೆದಿದ್ದಿರಬೇಕು.

ಕ್ರಿ.ಶ. 950ರ ತೇದಿಯ ಶಿವ. 18ನೆಯ ಶಾಸನವು ಪೊಳಲು ಮತ್ತು ಕುಂಬಶಿಕೆಗಳಲ್ಲಿ ಜಿನದೇಗುಲಗಳ ನಿರ್ಮಾಣವನ್ನು ಹಾಗೂ ಲೋಕಿಯಬ್ಬೆ ಮೂರ್ತಿಯ ಪ್ರತಿಷ್ಠಾಪನೆಯನ್ನು ದಾಖಲಿಸುತ್ತದೆ. ಕನಕಕುಲದಲ್ಲಿ ಜನಿಸಿದ ಮತ್ತು ಕಲಸೆರಾಜಾನ್ವಯಕ್ಕೆ ಸೇರಿದ ಜಿನದತ್ತನು ಜಿನನ ಅಭಿಷೇಕಕ್ಕಾಗಿ ಕುಂಬಸೆಪುರವನ್ನು ದಾನ ನೀಡಿದನು. ಕ್ರಿ.ಶ. 10ನೆಯ ಶತಮಾನಕ್ಕೆ ಸೇರಿದ ಶಿವ. 18ರಲ್ಲಿ ಒಬ್ಬ ಸಾಂತರ ದೊರೆಯ ಕೆಲವು ವಿಶೇಷಣಗಳು ಮಾತ್ರ ಇವೆ. ಮುನಿಯೂರಿನ ತೀರ್ಥ. 207ನೆಯ ಶಾಸನವು ಆ ಗ್ರಾಮದ ಕಲೇಶ್ವರದೇವರಿಗೆ ದಾನವಿತ್ತ ವಿಷಯವನ್ನು ನಿರೂಪಿಸುತ್ತದೆ. ಈ ಶಾಸನದ ಕಾಲ ಸುಮಾರು ಕ್ರಿ.ಶ. 10–11ನೆಯ ಶತಮಾನ.

ದಾನಶಾಲೆಯ ತೀರ್ಥ. 173ನೆಯ ಶಾಸನವು ಚಾಲುಕ್ಯ ಅರಸ ತ್ರಿಭುವನಮಲ್ಲದೇವನ (ವಿಕ್ರಮಾದಿತ್ಯ VI) ಆಳ್ವಿಕೆಗೆ ಸೇರಿದುದು. ಆತನ ಕೈಕೆಳಗೆ ತೈಲ ಎಂಬ ಸಾಂತರ ದೊರೆ ಆಡಳಿತ ನಡೆಸುತ್ತಿದ್ದ. ಈ ಶಾಸನದ ಕಾಲ ಕ್ರಿ.ಶ. 1103. ಸಾಂತರರ ವಂಶಾವಳಿಯನ್ನು ಇದು ನೀಡುತ್ತದೆ : ಒಡ್ಡುಗ ; ಆತನ ತಮ್ಮ ತೈಲ ; ಆತನ ಮಗ ವೀರ. ವೀರನ

ಕದಂಬ

ಶಿವಮೊಗ್ಗ ತಾಲ್ಲೂಕಿನ ಆಯನೂರು ಸಮೀಪದ ಹಾರನಹಳ್ಳಿಯ ಹೊಲವೊಂದರಲ್ಲಿ ಕದಂಬ ತಾಮ್ರಶಾಸನವೊಂದು (ಶಿವ. 107) ಈಚೆಗೆ ಪತ್ತೆಯಾಯಿತು. ಶಾಂತಿವರ್ಮನ (ಸು. ಕ್ರಿ.ಶ. 430–455) ಮಗನಾದ ಮೃಗೇಶವರ್ಮನ ಎರಡನೆಯ ಆಳ್ವಿಕೆಯ ವರ್ಷದಲ್ಲಿ ಅದನ್ನು ಹೊರಡಿಸಲಾಯಿತು.[4] ಪ್ರಾಯಃ ಒಂದೇ ಕುಟುಂಬಕ್ಕೆ ಸೇರಿದ ಮೂವರು ಬ್ರಾಹ್ಮಣರಿಗೆ – ಅವರೆಂದರೆ ಗೋತುಮಗೋತ್ರದ ನಾಗವರ್ಮ, ಭೂತವರ್ಮ ಹಾಗೂ ಅಜ್ಜವರ್ಮ – ಭೂಮಿದಾನ ಮಾಡಲಾದ ಸಂಗತಿಯನ್ನು ಅದು ನಿರೂಪಿಸುತ್ತದೆ. ಆರಿತಿಗೋತ್ರದ ಅಜ್ಜಕಡಕುಮಾರ ದಾನ ನೀಡಿದಾತ. ಈತನನ್ನು ಗುರುತಿಸಲು ಆಗಿಲ್ಲ. ಬ್ರಾಹ್ಮಣರಾದರೂ ಪ್ರತಿಗ್ರಹಿಗಳ ಹೆಸರುಗಳು 'ವರ್ಮ' ಎಂದು ಕೊನೆಗೊಳ್ಳುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಹಾಗೆಯೇ ಕನ್ನಡ ಶಬ್ದವಾದ ಮತ್ತರಿನ ಪ್ರಾಚೀನತಮ ಉಲ್ಲೇಖಗಳಲ್ಲೊಂದು ಪ್ರಸ್ತುತ ಶಾಸನದಲ್ಲಿರುವುದನ್ನೂ ಗಮನಿಸಬೇಕು. ಇದರಲ್ಲಿ ರಾಜನನ್ನು 'ಕದಮ್ಬಾನಾಮ್ ಕುಲಕೇತೋः' ಎಂದು ವರ್ಣಿಸಲಾಗಿದೆ. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಪುಕ್ಕೊಲ್ಲಿ ಕ್ಷೇತ್ರವು ಇನ್ನೂ ಕೆಲವು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಡಾ. ಬಾ.ರಾ. ಗೋಪಾಲ್ ಅವರು ಹೇಳುತ್ತಾರೆ : " ದಾನನೀಡಿದ ಭೂಮಿಗಳಲ್ಲಿ ಕೆಲವು ಬಳೋವರಕ್ಷೇತ್ರ, ವಾಸ್ತುಕಕ್ಷೇತ್ರ, ಪುರಾಣ(ಪುರಾತನ)ಕ್ಷೇತ್ರ, ಮಾಹೇಶ್ವರೀಕ್ಷೇತ್ರ, ಚತುಷ್ಪತ್‌ಕ್ಷೇತ್ರ ಹಾಗೂ ಪುಕ್ಕೊಲ್ಲಿಕ್ಷೇತ್ರ ಎಂಬುದಾಗಿ ವಿವರಿಸಲ್ಪಟ್ಟಿವೆ."[5] ಡಾ. ಡಿ.ಸಿ. ಸರ್ಕಾರ್ ಅವರ ಪ್ರಕಾರ ಪುಕ್ಕೊಲ್ಲಿ ಎಂಬುದು ಒಂದು ಬಗೆಯ ಭೂಮಿ.[6]

ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿಯಲ್ಲಿನ ರಂಗನಾಥದೇವಾಲಯದ ಅರ್ಚಕರ ವಶದಲ್ಲಿ ಮೂಲತಃ ಇದ್ದ ತಾಮ್ರಶಾಸನವೆಂದರೆ ಶಿವ. 93. ಕುಮಾರವರ್ಮನ ಮಗನಾದ (ಶ್ರೀ ಕುಮಾರವರ್ಮ್ಮ ಮಹಾಧಿರಾಜಸ್ಯ ಪುತ್ರಃ) ಮಾಂಧಾತನ ಐದನೆಯ ಆಳ್ವಿಕೆಯವರ್ಷಕ್ಕೆ ಈ ಶಾಸನವು ಸೇರಿದುದು. ದೊರೆಯು ಕಗ್ಗಿಗ್ರಾಮದಲ್ಲಿ ಒಂದು ಮನೆ ಮತ್ತು ಆರು ನಿವರ್ತನಗಳ ಭೂಮಿಯನ್ನು ಹಾಗೂ ಪಾಲ್ಗಟಿನಿಯಲ್ಲಿ ಕೂಡ ಸ್ವಲ್ಪ ಭೂಮಿಯನ್ನು (ಚತುಷ್ಪತ್ ಕ್ಷೇತ್ರ) ದಾನ ನೀಡಿದ ಸಂಗತಿಯನ್ನು ಈ ಶಾಸನವು ನಿರೂಪಿಸುತ್ತದೆ. ಶೀಲವಂತನೂ ವೇದಪಾರಂಗತನೂ ಆದ, ಆತ್ರೇಯಗೋತ್ರದ ತ್ರಿಯಂಬಕಸ್ವಾಮಿಯು ಈ ದಾನವನ್ನು ಸ್ವೀಕರಿಸಿದ. ಆರ್. ನರಸಿಂಹಾಚಾರ್ಯರ ಪ್ರಕಾರ ಕಗ್ಗಿಗ್ರಾಮವು ಚನ್ನಗಿರಿ ತಾಲ್ಲೂಕಿನಲ್ಲಿ ಇರುವ ಅದೇ ಹೆಸರಿನ ಗ್ರಾಮವಾಗಿದೆ. ಆದರೆ ಕಗ್ಗಿ ಮತ್ತು ಪಾಲ್ಗಟಿನಿಗ್ರಾಮಗಳು ಶಿಕಾರಿಪುರ ತಾಲ್ಲೂಕಿನ ಕಾಗಿನೆಲ್ಲಿ ಮತ್ತು ಸೊರಬ ತಾಲ್ಲೂಕಿನ ಹಾಲಗಳಲೆ ಎಂದು ಗುರುತಿಸಬಹುದು. ಪ್ರಸ್ತುತ ಶಾಸನದಲ್ಲಿ ಬಳಸಿರುವ ಸಂಸ್ಕೃತ ಭಾಷೆಯು ದೋಷಮುಕ್ತವಾಗಿಲ್ಲ. ಅಕ್ಷರಗಳು ಪೆಟ್ಟಿಗೆಯಾಕಾರದ ತಲೆಕಟ್ಟನ್ನು ಹೊಂದಿಲ್ಲ ; ಅವು ಗಂಗ ಲಿಪಿಯನ್ನು ಹೋಲುತ್ತವೆ. ಶಾಸನವು ಗಂಗ ತಾಮ್ರಶಾಸನಗಳಂತೆ 'ಸ್ವಸ್ತಿ ಜಿತಂ ಭಗವತಾ' ಎಂದು ಆರಂಭವಾಗುವುದನ್ನು ಗಮನಿಸಬೇಕು.[7]

ಶ್ರೀ ಆರ್. ನರಸಿಂಹಾಚಾರ್ಯರು ಹೇಳುವುದು ಹೀಗೆ : "ಕುಮಾರವರ್ಮ ಮತ್ತು ಮಾಂಧಾತರಾಜರ ಹೆಸರುಗಳು ಹೊಸವು ; ಈ ವಂಶದ ಪ್ರಕಟಿತ ಶಾಸನಗಳಲ್ಲಿ ಯಾವುದರಲ್ಲಿಯೂ ಕಂಡುಬಂದಿಲ್ಲ. ಕೂಡಗೆರೆ ಲೇಖಗಳಲ್ಲಿ (ಶಿಕಾರಿಪುರ–29) ವಿಜಯಶಿವಮಾಂಧಾತೃವರ್ಮನೆಂಬ ಹೆಸರುಳ್ಳ ರಾಜನೊಬ್ಬ ಉಲ್ಲೇಖಿತನಾಗಿರುವುದು ನಿಜವೇ ; ಆದರೆ ಇಬ್ಬರು ಅರಸರ ಅಭಿನ್ನತೆಯ ಬಗ್ಗೆ ಸತಾರ್ಕಿಕವಾಗಿ ಅನುಮಾನ ಪಡಲು ಕಾರಣವಾಗುವಷ್ಟು ಎರಡು ಹೆಸರುಗಳಲ್ಲಿನ ವ್ಯತ್ಯಸ ದೊಡ್ಡದಾಗಿದೆ. ದುರದೃಷ್ಟವಶಾತ್ ಕೂಡಗೆರೆ ಲೇಖಗಳು ಮಾಂಧಾತೃವರ್ಮನ ವಂಶಾವಳಿಯನ್ನು ನೀಡುವುದಿಲ್ಲ. ಒಂದು ವೇಳೆ ಆತ ಪ್ರಸ್ತುತ ಶಾಸನದ ಮಾಂಧಾತರಾಜನಿಂದ ಅಭಿನ್ನನೆಂದಾದಲ್ಲಿ, ಅದು ಸ್ಪಷ್ಟವಾಗಿ ಕುಮಾರವರ್ಮನು ಮಾಂಧಾತರಾಜನ ತಂದೆಯೆಂದು ಹೇಳುವುದರಿಂದ ; ಆತ ಶಾಂತಿವರ್ಮನ ತಮ್ಮನಾಗಲು ಸಾಧ್ಯವಿಲ್ಲ ಅಥವಾ ಡಾ. ಕೀಲ್‌ಹಾರ್ನ್ ಅವರು ಸೂಚಿಸುವಂತೆ (ಎಪಿಗ್ರಾಫಿಯ ಇಚಿಡಿಕ, VI, 13) ಮೃಗೇಶವರ್ಮನ ತಮ್ಮನಾಗಲೂ ಸಾಧ್ಯವಿಲ್ಲ." ತೇದಿ ಇಲ್ಲದ ಈ ಶಾಸನವು ಕ್ರಿ.ಶ. 5–6ನೆಯ ಶತಮಾನಕ್ಕೆ ಸೇರಿದ್ದಾಗಿರಬಹುದು.

ಅನಂತರ ಕಾಲದ ಕದಂಬ ಪ್ರಭುಗಳಿಗೆ ಸೇರಿದ ಕೆಲವು ಶಾಸನಗಳಿವೆ. ಕ್ರಿ.ಶ. 12ನೆಯ ಶತಮಾನದ ಲಿಪಿಲಕ್ಷಣಗಳಿಂದ ಕೂಡಿದ ಶಿವ. 61ನೆಯ ಶಾಸನವು ಕುವರ ತೈಲನನ್ನು ಉಲ್ಲೇಖಿಸುತ್ತದೆ. ಆತನ ಸೋದರನ ಹೆಸರು ನಷ್ಟವಾಗಿದೆ. ಈ ವೀರಗಲ್ಲು ಶಾಸನವು ತೈಲನನ್ನು ಹೊಗಳುತ್ತದೆ. ಶಿವ. 58 ಮತ್ತು 119 ಕದಂಬ ತೈಲಹನೊಂದಿಗೆ ಹೋರಾಡಿ ಅವನನ್ನು ಇರಿದ ಬೊಪ್ಪದಳಾರನೆಂಬ ವೀರನ ಮರಣವನ್ನು ಉಲ್ಲೇಖಿಸುತ್ತವೆ. ಆತನ ಸೇವೆಯನ್ನು ಪ್ರಶಂಸಿಸಿ ಸೊರಡೆಯ 'ಸಾಸಿರ್ಬರು' ದಾನ ನೀಡುತ್ತಾರೆ. ಕದಂಬ ಪುರಂದರರಾಯನು 1154ರಲ್ಲಿ ಶೃಂಗೇರಿ ಪೀಠಾಧಿಪತಿ ವಿದ್ಯಾಶಂಕರಭಾರತಿಗಳಿಗೆ ನೀಡಿದ ದಾನಶಾಸನವೆಂದು ಶಿವ. 41 ಹೇಳಿಕೊಳ್ಳುತ್ತದೆ. ಈ ಶಾಸನದ ನೈಜತೆ ಸಂದೇಹಾಸ್ಪದ. ರೈಸ್ ಹೇಳುತ್ತಾರೆ : "ಅದನ್ನು ಅತ್ಯಂತ ಗೋಜಲಾಗಿ ಮತ್ತು ಅಸಮರೀತಿಯಲ್ಲಿ ಕಂಡರಿಸಲಾಗಿದೆ . . . . ಕೆಲವು ಭಾಗಗಳಲ್ಲಿ ಅದನ್ನು ಓದುವುದು ಅಥವಾ ಅದಕ್ಕೆ ಯಾವುದೇ ಅರ್ಥವನ್ನು ಮಾಡುವುದು ಕಷ್ಟಕರ." ಶಿವ. 42ನೆಯ

ಈಗಾಗಲೇ ಪ್ರಕಟವಾಗಿರುವ ಸಂಪುಟಗಳಲ್ಲಿರುವ ಶಾಸನಗಳ ಹಂಚಿಕೆ

ತಾಲ್ಲೂಕು	VII (ಮೊದಲನೆಯ ಆವೃತ್ತಿ)	VIII (ಮೊದಲನೆಯ ಆವೃತ್ತಿ)	ಎಂ.ಎ.ಆರ್ (1923ನೆಯ ಹಾಗೂ ಅನಂತರ ವರ್ಷಗಳದ್ದು)	ಇತರೆ	ಹೆಸರು	ಒಟ್ಟು	ಷರಾ
ಶಿವಮೊಗ್ಗ	128–38(ಅ)		18	10	3	121	(ಅ) ಹಿಂದಿನ ಆವೃತ್ತಿಯ 38 ಶಾಸನಗಳು ಈಗಿನ ಭದ್ರಾವತಿ ತಾಲ್ಲೂಕಿನ ವರ್ಗಾವಣೆಗೊಂಡಿವೆ.
ತೀರ್ಥಹಳ್ಳಿ		222 –3(ಆ) +3(ಇ)	18 –1(ಜ)	7	9	255	(ಆ) ಹಿಂದಿನ ಆವೃತ್ತಿಯಲ್ಲಿ 35, 202 ಹಾಗೂ 203ನೆ ಸಂಖ್ಯೆಯ ಶಾಸನಗಳಿಲ್ಲ. (ಇ) ಹಿಂದಿನ ಆವೃತ್ತಿಯ ಮೂರು ಶಾಸನಗಳನ್ನು – 135, 175 ಮತ್ತು 212 – ಎರಡು ಶಾಸನಗಳಾಗಿ ವಿಂಗಡಿಸಿದೆ ಹಾಗೂ ಪ್ರತ್ಯೇಕ ಶಾಸನಗಳಾಗಿ – 9, 10, 122, 123, 141 ಹಾಗೂ 142 – ಈ ಆವೃತ್ತಿಯಲ್ಲಿ ಪರಿಗಣಿಸಿದೆ. (ಈ) ಹಿಂದಿನ ಆವೃತ್ತಿಯ ಎರಡು ಶಾಸನಗಳನ್ನು – 205 ಮತ್ತು ಎಂ.ಎ.ಆರ್. 1934–53 – ಒಂದೇ ಶಾಸನವೆಂದು ಪರಿಗಣಿಸಿದೆ ; ಮತ್ತು ಹಿಂದಿನ ಆವೃತ್ತಿಯ ನಾಲ್ಕು ಶಾಸನಗಳನ್ನು – 22 ಮತ್ತು ಎಂ.ಎ.ಆರ್. 1923–115 ಮತ್ತು 23 ಹಾಗೂ ಎಂ.ಎ.ಆರ್. 1923–116–ಒಂದೊಂದೇ ಶಾಸನವೆಂದು – ಕ್ರಮವಾಗಿ ಭದ್ರಾ. 2 ಮತ್ತು 3 – ಈ ಆವೃತ್ತಿಯಲ್ಲಿ ಪರಿಗಣಿಸಿದೆ.
ಭದ್ರಾವತಿ	+38(ಅ) –1(ಉ)		6 –2(ಈ)	1		42	(ಉ) ಹಿಂದಿನ ಆವೃತ್ತಿಯ 113ನೆಯ ಶಾಸನ ಪಾಠ ಲಭ್ಯವಿಲ್ಲವಾದ ಕಾರಣ ಅದು ಪ್ರಸ್ತುತ ಸಂಪುಟದಲ್ಲಿ ಸೇರಿಲ್ಲ.
	127	**222**	**39**	**18**	**12**	**418**	

ಪೀಠಿಕೆ

ಪ್ರಸ್ತುತ ಸಂಪುಟವು 'ಎಪಿಗ್ರಾಫಿಯ ಕರ್ನಾಟಿಕ' ಮಾಲೆಯಲ್ಲಿ ಹದಿಮೂರನೆಯದು ಹಾಗೂ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಮೊದಲನೆಯದು. ಈ ಸಂಪುಟದಲ್ಲಿ ಶಿವಮೊಗ್ಗ (121), ತೀರ್ಥಹಳ್ಳಿ (255) ಮತ್ತು ಭದ್ರಾವತಿ (42) ತಾಲ್ಲೂಕುಗಳಿಗೆ ಸೇರಿದ ಶಾಸನಗಳಿವೆ. ಶಿವಮೊಗ್ಗ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ದೊರೆತ ಕೆಲವು ಹೊಸಶಾಸನಗಳನ್ನು ಒಳಗೊಂಡ ಅನುಬಂಧವನ್ನೂ ನೀಡಲಾಗಿದೆ. ಪ್ರಸ್ತುತ ಸಂಪುಟದಲ್ಲಿ ಇರುವ ಒಟ್ಟು ಶಾಸನಗಳ ಸಂಖ್ಯೆ 418. ಇವುಗಳಲ್ಲಿ 134 ತಾಮ್ರಶಾಸನಗಳು. ಈ ಸಂಪುಟದ ಒಟ್ಟು ಶಾಸನಗಳಲ್ಲಿ ಸುಮಾರು 1/3 ರಷ್ಟು ತಾಮ್ರಶಾಸನಗಳಾಗಿರುವುದು ಕುತೂಹಲಕರವಾದ ಮತ್ತು ಗಮನಿಸಬೇಕಾದ ಅಂಶ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ 109 ತಾಮ್ರಶಾಸನಗಳಿದ್ದರೆ, ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕುಗಳಲ್ಲಿ ಅವುಗಳ ಸಂಖ್ಯೆ ಕ್ರಮವಾಗಿ 22 ಮತ್ತು 3.

ಅಯೋಧ್ಯೆ

ಕೂಡಲಿಯ ಶಿವ. 48ನೆಯ ಶಾಸನವು ರುಕ್ಮಾಂಗದನ ಮಗ ಧರ್ಮಾಂಗದನು ನೀಡಿದ ಭೂದಾನವೊಂದನ್ನು ದಾಖಲಿಸುತ್ತದೆ. ರುಕ್ಮಾಂಗದನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಸಕ್ಕರೆಪಟ್ಟಣದಿಂದ ಆಳುತ್ತಿದ್ದನೆಂಬುದು ಸಾಂಪ್ರದಾಯಿಕ ನಂಬುಗೆ. ದಾನಿಯನ್ನು ಅಯೋಧ್ಯಾಪುರವರಾಧೀಶ್ವರ, ವೈಷ್ಣವ ಚಕ್ರವರ್ತಿ, ಸುವರ್ಣಮಯೂರ ಲಾಂಛನಧ್ವಜ ಇತ್ಯಾದಿಯಾಗಿ ವರ್ಣಿಸಲಾಗಿದೆ. ಏಕಾದಶೀಧುರಧವಳ ಎಂಬ ವಿಶೇಷಣ ಕುತೂಹಲಕರವಾಗಿದೆ. ವಿಷ್ಣುವಿನ ಪರಮಭಕ್ತನಾದ ಧರ್ಮಾಂಗದನು "ತನ್ನ ತಂದೆಯ ಸುಖಸಂತೋಷಕ್ಕಾಗಿ ಮೋಹಿನಿಗೆ ತನ್ನ ತಲೆಯನ್ನು ಒಪ್ಪಿಸಲು ಹಿಂಜರಿಯಲಿಲ್ಲ." ಮೋಹಿನಿಯ ಪ್ರೇಮಪಾಶಕ್ಕೆ ಸಿಲುಕಿದ ರುಕ್ಮಾಂಗದನು ತಾನು ಆಕೆಯ ಆಸೆಗಳನ್ನು ಈಡೇರಿಸುವುದಾಗಿ ವಚನವಿತ್ತು ಆಕೆಯನ್ನು ಮದುವೆಯಾದ. ಆತನನ್ನು ಪರೀಕ್ಷಿಸುವುದಕ್ಕಾಗಿ ಮೋಹಿನಿಯು ಹೇಳಿದಳು: "ಏಕಾದಶಿ ದಿನದ ಉಪವಾಸವ್ರತ ಭಂಗ ಮಾಡು ಇಲ್ಲವೇ ನಿನ್ನ ಮಗನ ತಲೆಯನ್ನು ಕತ್ತರಿಸು!" ಅವೆರಡರಲ್ಲಿ ಎರಡನೆಯದು ಕಡಿಮೆಯ ಪಾಪವೆಂದು ಆತ ಅದನ್ನು ಆಯ್ಕೆ ಮಾಡಿದ. ಸ್ವಯಂ ಧರ್ಮಾಂಗದ ಅದಕ್ಕೆ ಸಿದ್ಧನಾದ. ಆದರೆ ಭಗವಾನ್ ವಿಷ್ಣು ಪ್ರತ್ಯಕ್ಷನಾದ ಹಾಗೂ ದುರಂತ ಸಂಭವಿಸಲಿಲ್ಲ.[1]

ಈ ಶಾಸನವನ್ನು ನಾಗರಿಲಿಪಿಯಲ್ಲಿ ಕಂಡರಿಸಿದೆ ; ಬಳಸಿದ ಭಾಷೆಯಾದರೋ ಸಂಸ್ಕೃತ ಹಾಗೂ ಮರಾಠಿಗಳ ಮಿಶ್ರಣ. ಈ ಶಾಸನದಲ್ಲಿ ಬಳಸಿದ ಮರಾಠಿ ಭಾಷೆ ಸಾಕಷ್ಟು ಈಚಿನದು. ಈ ಪ್ರದೇಶದಲ್ಲಿ ಮರಾಠರು ಪ್ರಬಲರಾಗಿದ್ದುದು ಕ್ರಿ.ಶ. 18ನೆಯ ಶತಮಾನದಲ್ಲಿ ; ಪ್ರಸ್ತುತ ಶಾಸನವು ಇದೇ ಕಾಲದ್ದಾಗಿರಬಹುದು.

ಪಾಂಡವ

ತೀರ್ಥ. 194 ನೆಯ ತಾಮ್ರಶಾಸನವು ಭೀಮನಕಟ್ಟೆಯದು. ಅದು ಸಂಸ್ಕೃತ ಭಾಷೆ ಹಾಗೂ ದೇವನಾಗರಿ ಲಿಪಿಯಲ್ಲಿದ್ದು, 'ಶ್ರೀವರಾಹ'ವೆಂಬ ಒಪ್ಪವು ಕನ್ನಡ ಲಿಪಿಯಲ್ಲಿದೆ. ಮಾಧ್ವ ಸಂಪ್ರದಾಯವನ್ನು ಅನುಸರಿಸುವ ಮುನಿವೃಂದ ಮಠದ ಗರುಡವಾಹನ ತೀರ್ಥಶ್ರೀಪಾದರ ಶಿಷ್ಯರಾದ ಕೈವಲ್ಯನಾಥರಿಗೆ ಭೂಮಿದಾನ ಮಾಡಿದ ವಿಷಯವನ್ನು ಅದು ನಿರೂಪಿಸುತ್ತದೆ. ತುಂಗಾ ಮತ್ತು ಮಾಲತೀನದಿಗಳ ಸಂಗಮದ ಬಳಿ ಈ ಮಠವಿದೆ. ದಾನಿಯು ಕಿಷ್ಕಿಂಧಾನಗರಿಯಿಂದ ಆಳುತ್ತಿದ್ದ ಜನಮೇಜಯರಾಜ. ಕುರುಕುಲದಲ್ಲಿ ಜನಿಸಿದ ಆತ ವೈಯಗ್ರಪೀಪಾದ ಗೋತ್ರಕ್ಕೆ ಸೇರಿದವನು. ಸೀತಾರಾಮದೇವರ ಪೂಜಾಸೇವೆಗಾಗಿ ಈ ದಾನವನ್ನು ನೀಡಲಾಯಿತು. ಶಾಸನದ ತೇದಿ ಯುಧಿಷ್ಠಿರಶಕೆಯ 89ನೆಯ ವರ್ಷ, ಎಂದರೆ ಕ್ರಿ.ಪೂ. 3012 ಹಾಗೂ ಪ್ಲವಂಗ ಸಂವತ್ಸರ. ಮುನಿವೃಂದ ಕ್ಷೇತ್ರದಲ್ಲಿ ಯುಧಿಷ್ಠಿರ ಮತ್ತು ಇತರರು ಕೆಲವುಕಾಲ ಇದ್ದರೆಂದು ಹೇಳಲಾಗಿದೆ. ಜನಮೇಜಯನು ಯುಧಿಷ್ಠಿರನ ಮರಿಮಗ.[2] ಪ್ರಸ್ತುತ ಶಾಸನವಾದರೋ ನೈಜಶಾಸನವಲ್ಲ. ಅದರ ಭಾಷೆ ಮತ್ತು ಶೈಲಿಗಳು ವಿಜಯನಗರದ ಶಾಸನಗಳ ಭಾಷೆ ಮತ್ತು ಶೈಲಿಗಳನ್ನು ಹೋಲುತ್ತವೆ. ವಾಸ್ತವವಾಗಿ, ಈ ಶಾಸನವು ವಿಜಯನಗರದ ತಾಮ್ರಶಾಸನವೊಂದರ ಕೇವಲ ಅನುಕರಣೆ ಎಂಬಂತೆ ಕಾಣುತ್ತದೆ. ರೈಸ್ ಅವರ ಪ್ರಕಾರ " . . . . ಈ ದಾನಶಾಸನದ ವಾಸ್ತವಿಕ ತೇದಿಯು ಕ್ರಿ.ಶ. 1367 ಎಂದು ಊಹಿಸಬಹುದು. ಪ್ರಾಯಃ ಬುಕ್ಕರಾಯ, ಅಥವಾ ಅವನ ಆಳ್ವಿಕೆಯಲ್ಲಿ, ಅವನ ಮಗ ಹರಿಹರನು ಅದನ್ನು ನೀಡಿದ್ದಿರಬಹುದು." ಆದರೆ ಈ ಶಾಸನಕ್ಕೆ ಯಾವುದೇ ತೇದಿಯನ್ನು ಪ್ರಸ್ತುತ ಆವೃತ್ತಿಯಲ್ಲಿ ನೀಡಿಲ್ಲ. ಶಾಸನೋಕ್ತ ಜನಮೇಜಯನನ್ನು ಅನೇಕ ಶಾಸನಗಳು ಉಲ್ಲೇಖಿಸುತ್ತವೆ.[3]

ಈಗಿನ ಆವೃತಿ Present Edition	VII	VIII	ಶಿವಮೊಗ್ಗ ಅನುಬಂಧ Shimoga Supplement	ರಿ R	ಇತರೆ Others
244		122			
245		219			
246–54					
255					ಇ.ದ. (*ID*) 14

ಭದ್ರಾವತಿ ತಾಲ್ಲೂಕು
BHADRAVATI TALUK

ಈಗಿನ ಆವೃತಿ Present Edition	VII	VIII	ಶಿವಮೊಗ್ಗ ಅನುಬಂಧ Shimoga Supplement	ರಿ R	ಇತರೆ Others
1	34				
2	22			1923–115	
3	23			1923–116	
4	104				
5	102				
6	103				
7	110				
8				1923–119	
9	112				
10	50				
11	47				
12	49				
13				1923–118	
14	35				
15	46				
16	107				
17	108				
18	33				
19	48				
20	90				
21				1931–59	
22	30				
23	31				
24					ಶಾಸನಅಧ್ಯಯನ (*Śāsana Adhyayana*) 1–1
25–27	51–53				
28–37	36–45				
38	32				
39	89				
40				1923–122	
41	111				
42	109				

ಈಗಿನ ಆವೃತಿ Present Edition	VII	VIII	ಶಿವಮೊಗ್ಗ ಅನುಬಂಧ Shimoga Supplement	ರಿ R	ಇತರೆ Others
202		100			
203		101			
204		8			
205		129			
206		141			
207		123			
208		124			
209				1934–51	
210		156			
211		169			
212		148			
213				1934–57	
214				1934–58	
215		166			
216		195			
217		150			
218–20		104–06			
221		201			
222		160			
223		7			
224		222			
225		120			
226		121			
227		25			
228		26			
229		112			
230		113			
231		136			
232		167			
233		125			
234		220			
235		163			
236		164			
237		216			
238		194			
239		155			
240		139			
241		168			
242		152			
243		130			

ಈಗಿನ ಆವೃತಿ *Present Edition*	VII	VIII	ಶಿವಮೊಗ್ಗ ಅನುಬಂಧ *Shimoga Supplement*	ರಿ *R*	ಇತರೆ *Others*
151		1			
152		2			
153		207			
154		204			
155		206			
156–59		3–6			
160				1934–52	
161–68		181–88			
169		200			
170		135			
171		214			
172		191			
173		192			
174		118			
175		137			
176		143			
178		114			
179		162			
180		103			
181		24			
182		209			
183		31			
184		158			
185		159			
186		193			
187		20			
188		21			
189		217			
190		218			
191		180			
192		107			
193		208			
194		157			
195		147			
196		213			
197		27			
198		211			
199		221			
200		190			
201		189			

ಈಗಿನ ಆವೃತಿ Present Edition	VII	VIII	ಶಿವಮೊಗ್ಗ ಅನುಬಂಧ Shimoga Supplement	ರಿ R	ಇತರೆ Others
35		132			
36		37			
37		36			
38					ಸೂರ್ಯಕೀರ್ತಿ.ಪು. 46
39					(*Sūryakīrti*) p. 46
40		38			
41		39			
42–50				1943–37to 45	
51–110		40–99			
111–113					ಮಾ.ಕ. (*MK*) 10–1
114					ಮಾ.ಕ. (*MK*) 18–1
115		32			
116		33			
117–123		170–75			
124		161			
125		165			
126		126			
127		127			
128		149			
129		23			
130		34			
131		115			
132–34		108–10			
135		177			
136		179			
137		133			
138		134			
139		176			
140		119			
141		212			
142		212			
143		178			
144		153			
145		154			
146		29			
147		210			
148		144			
149		145			
150				1934–50	

ಈಗಿನ ಆವೃತಿ Present Edition	VII	VIII	ಶಿವಮೊಗ್ಗ ಅನುಬಂಧ Shimoga Supplement	ರಿ R	ಇತರೆ Others
107					ಶಾಸನ ಅಧ್ಯಯನ (Śāsana Adhyayana) 1–1
108	61				
109	62				
110	8				
111–113	91–93				
114	101				
115					
116					ಇ.ದ. (*ID*) 18
117					ಇ.ದ. (*ID*) 18
118					ಇ.ದ. (*ID*) 14
119					ಇ.ದ. (*ID*) 14
120					ಇ.ದ. (*ID*) 11
121					ಇ.ದ. (*ID*) 11

ತೀರ್ಥಹಳ್ಳಿ ತಾಲ್ಲೂಕು
TIRTHAHALLI TALUK

Present Edition	VII	VIII	Shimoga Supplement	R	Others
1		196			
2		128			
3		117			
4		18			
5		19			
6		28			
7		102			
8		116			
9		131			
9		131			
11		138			
12–14				1934–54to56	
15		205		1934–53	
16–24		9–17			
25		146			
26		22			
27		215			
28		111			
29–31		197–99			
32		30			
33		140			
34		142			

ಈಗಿನ ಆವೃತಿ Present Edition	VII	VIII	ಶಿವಮೊಗ್ಗ ಅನುಬಂಧ Shimoga Supplement	ರಿ R	ಇತರೆ Others
59	10				
60–62	121–23				
63	63				
64–66	57–59				
67				1923–112	
68–71	64–67				
72	99				
73	100				
74	5				
75	105				
76	55				
77	56				
78	24				
79	95				
80	9				
81	26				
82	15				
83	27				
84	127				ಮಾ.ಕ.(*MK*)14–2
85					
86					
87				1935–33	
88				1935–34	
89–91	1–3				
92				1923–110	
93			129	1911, p. 32	
94				1928–58	
95	28				
96	29				
97	119				
98	88				
99	120				
100	98				
101	94				
102				1923–60	
103	54				
104	6				
105	7				
106	128				

ಶಾಸನಗಳ ಸಮೀಕೃತ ಪಟ್ಟಿ

SYNCHRONISED TABLE OF INSCRIPTIONS

ಈಗಿನ ಆವೃತಿ *Present Edition*	VII	VIII	ಶಿವಮೊಗ್ಗ ಅನುಬಂಧ *Shimoga Supplement*	ರಿ *R*	ಇತರೆ *Others*
			ಶಿವಮೊಗ್ಗ ತಾಲ್ಲೂಕು SHIVAMOGGA TALUK		
1	60				
2	106				
3	124				
4	125				
5				1923–120	
6	96				
7	97				
8	87				
9					
10				1923–113	
11	16				
12	17				
13				1923–114	
14	4				
15	18				
16	126				
17	118				
18	114				
19	115				
20			1		
21				1923–117	
22–24	19–21				
25				1923–63	
26				1923–121	
27				1928–59	
28				1928–60	
29				1938–81	
30–48	68–86				
49	25				
50–53	11–14				
54				1923–111	
55	116				
56	117				
57				1923–61	
58				1923–62	

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1753–54	ತೀರ್ಥ (Tl) 12
	17–18ನೆಯ ಶತಮಾನ (17-18th century)	ಶಿವ (Sh) 56
	18ನೆಯ ಶತಮಾನ (18th century)	ಶಿವ (Sh) 2
	1862	ತೀರ್ಥ (Tl) 13
	18–19ನೆಯ ಶತಮಾನ (18-19th century)	ಶಿವ (Sh) 49
	19ನೆಯ ಶತಮಾನ (19th century)	ಶಿವ (Sh) 54
	. . .	ಶಿವ (Sh) 1, 3, 11, 38, 60, 66, 73, 80, 84, 97, 99, 110, 112, 114; ತೀರ್ಥ (Tl) 171; ಭದ್ರಾ (Br) 1, 9, 10, 12,14, 18

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	14ನೆಯ ಶತಮಾನ (14th century)	ತೀರ್ಥ (Tl) 131, 184, 188
	1403	ತೀರ್ಥ (Tl) 249
	1406	ತೀರ್ಥ (Tl) 199
	1407	ಭದ್ರಾ (Br) 7
	1413	ತೀರ್ಥ (Tl) 247
	1440–41	ತೀರ್ಥ (Tl) 121
	1456	ತೀರ್ಥ (Tl) 150
	1477	ತೀರ್ಥ (Tl) 226
	1485	ಶಿವ (Sh) 24
	1490	ತೀರ್ಥ (Tl) 255
	14–15ನೆಯ ಶತಮಾನ (14-15th century)	ತೀರ್ಥ (Tl) 2, 7, 33, 146
	15ನೆಯ ಶತಮಾನ (15th century)	ತೀರ್ಥ (Tl) 9,144,219,236,238
	1535	ತೀರ್ಥ (Tl) 185
	1573	ತೀರ್ಥ (Tl) 14
	1577–78	ಭದ್ರಾ (Br) 16
	1583	ತೀರ್ಥ (Tl) 119
	15–16ನೆಯ ಶತಮಾನ (15-16th century)	ಶಿವ (Sh) 50, 111; ತೀರ್ಥ (Tl) 11, 141, 142, 153, 182, 245
	16ನೆಯ ಶತಮಾನ (16th century)	ತೀರ್ಥ (Tl) 4, 28, 128, 196
	1640	ತೀರ್ಥ (Tl) 209
	1641	ತೀರ್ಥ (Tl) 63
	1645	ಶಿವ (Sh) 101
	1650	ಭದ್ರಾ (Br) 8
	1683	ಶಿವ (Sh) 44
	1699	ಶಿವ (Sh) 25
	16–17ನೆಯ ಶತಮಾನ (16-17th century)	ಶಿವ (Sh) 27; ಭದ್ರಾ (Br) 13
	17ನೆಯ ಶತಮಾನ (17th century)	ತೀರ್ಥ (Tl) 37–39, 170; ಭದ್ರಾ (Br) 11, 15
	1714	ಶಿವ (Sh) 15
	1748	ಭದ್ರಾ (Br) 41

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	ಮೈಸೂರು (MYSORE)	
ಕೃಷ್ಣರಾಜವೊಡೆಯರ್ III (Kṛishṇarāja-voḍeyar III)	1862	ತೀರ್ಥ(Tl) 160
	ವಿವಿಧ (MISCELLANEOUS)	
	9ನೆಯ ಶತಮಾನ (9th century)	ತೀರ್ಥ (Tl) 208
	928–29	ತೀರ್ಥ (Tl) 197
	1092	ತೀರ್ಥ (Tl) 31
	10–11ನೆಯ ಶತಮಾನ (10-11th century)	ಶಿವ (Sh) 19
	1107	ಶಿವ (Sh) 70
	1131	ತೀರ್ಥ (Tl) 229
	1126	ಶಿವ (Sh) 75
	11–12ನೆಯ ಶತಮಾನ (11-12th century)	ಶಿವ (Sh) 16
	12ನೆಯ ಶತಮಾನ (12th century)	ಶಿವ (Sh) 9, 65
	1203	ಭದ್ರಾ (Br) 33
	1208	ಭದ್ರಾ (Br) 30
	1250	ತೀರ್ಥ (Tl) 227
	1251	ತೀರ್ಥ (Tl) 228
	12–13ನೆಯ ಶತಮಾನ (12-13th century)	ತೀರ್ಥ (Tl) 216
	13ನೆಯ ಶತಮಾನ (13th century)	ಶಿವ (Sh) 29, 35
	1303	ತೀರ್ಥ (Tl) 240
	1338	ಶಿವ (Sh) 79
	1367	ತೀರ್ಥ (Tl) 225
	1378	ತೀರ್ಥ (Tl) 132
	1381	ಶಿವ (Sh) 113
	1390	ಭದ್ರಾ (Bh) 4
	1397	ಶಿವ (Sh) 71
	13–14ನೆಯ ಶತಮಾನ (13-14th century)	ಶಿವ (Sh) 39, 63; ತೀರ್ಥ (Tl) 230

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1674	ತೀರ್ಥ (Tl) 46, 84, 164, 168
	1677	ತೀರ್ಥ (Tl) 88
	1678	ತೀರ್ಥ (Tl) 136
	1679	ತೀರ್ಥ (Tl) 75
	1681	ತೀರ್ಥ (Tl) 100
	1687	ತೀರ್ಥ (Tl) 124, 191
	1688	ತೀರ್ಥ (Tl) 72
	1690	ತೀರ್ಥ (Tl) 68, 101
	1694	ತೀರ್ಥ (Tl) 57
	1695	ತೀರ್ಥ (Tl) 47
	1697	ಶಿವ (Sh) 12
ಬಸವಪ್ಪನಾಯಕ (Basavappa-nāyaka)	1698	ತೀರ್ಥ (Tl) 143
	1702	ತೀರ್ಥ (Tl) 3, 90, 134, 167, 175, 193, 220, 231
	1707	ತೀರ್ಥ (Tl) 104, 111
	1708	ತೀರ್ಥ (Tl) 48, 71
	1709	ತೀರ್ಥ (Tl) 58, 102, 106, 112
	1711	ತೀರ್ಥ (Tl) 49, 83
	1712	ಶಿವ (Sh) 96; ತೀರ್ಥ (Tl) 70, 201
ಸೋಮಶೇಖರನಾಯಕ (Somaśēkhara-nāyaka)	1718	ಶಿವ (Sh) 106
	1719	ತೀರ್ಥ (Tl) 113
	1720	ಶಿವ (Sh) 20
	1722	ಶಿವ (Sh) 105; ಭದ್ರಾ (Br) 40
	1723	ತೀರ್ಥ (Tl) 50,98,159,163, 166
	1737	ಶಿವ (Sh) 100

ಆನಿವೆರಿ (ANIVERI)

ಹಿರಿ ರಂಗಪ್ಪನಾಯಕ (Hiri Raṅgappa-nāyaka)	1548	ಭದ್ರಾ (Br) 17

ಬೀಳಗಿ (BILIGI)

ಶಿವಪ್ಪನಾಯಕ II (Śivappa-nāyaka II)	1674	ತೀರ್ಥ(Tl) 81

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1573	ತೀರ್ಥ (Tl) 158
ರಾಮರಾಜನಾಯಕ (Ramarāja-nāyaka)	1577	ತೀರ್ಥ (Tl) 5
	16ನೆಯ ಶತಮಾನ (16th century)	ತೀರ್ಥ (Tl) 22, 154
ವೀರಭದ್ರನಾಯಕ (Vīrabhadra-nāyaka)	1585	ಶಿವ (Sh) 120, 121
ವೆಂಕಟಪ್ಪನಾಯಕ (Veṅkaṭappa-nāyaka)	1610	ತೀರ್ಥ (Tl) 215
	1615	ತೀರ್ಥ (Tl) 108
	1616	ತೀರ್ಥ (Tl) 67
	1623	ತೀರ್ಥ (Tl) 94
	1624	ತೀರ್ಥ (Tl) 77, 93
	1627	ತೀರ್ಥ (Tl) 40, 41
ವೀರಭದ್ರನಾಯಕ (Vīrabhadra-nāyaka)	1630	ತೀರ್ಥ (Tl) 62, 69
	1632	ಶಿವ (Sh) 92; ತೀರ್ಥ (Tl) 105
	1633	ತೀರ್ಥ (Tl) 161
	1635	ತೀರ್ಥ (Tl) 73, 95
	1640	ತೀರ್ಥ (Tl) 74, 125, 156, 157
	1641	ಶಿವ (Sh) 90; ತೀರ್ಥ (Tl) 54–56, 90, 99, 162, 203
	1642	ತೀರ್ಥ (Tl) 42, 52,53,60, 65
	1645	ತೀರ್ಥ (Tl) 51
ಶಿವಪ್ಪನಾಯಕ (Śivappa-nāyaka)	1659	ತೀರ್ಥ (Tl) 92
ಭದ್ರಪ್ಪನಾಯಕ (Bhadrappa-nāyaka)	1661	ತೀರ್ಥ (Tl) 114
	1662	ತೀರ್ಥ (Tl) 87, 96, 149
ಸೋಮಶೇಖರ ನಾಯಕ (Sōmaśēkhara-nāyaka)	1664	ತೀರ್ಥ (Tl) 64, 91, 97, 103 103, 107, 130, 165
	1665	ತೀರ್ಥ (Tl) 43, 59, 66, 223
	1666	ತೀರ್ಥ (Tl) 44, 210
	1667	ತೀರ್ಥ (Tl) 76, 89, 110
	1668	ಶಿವ (Sh) 43; ತೀರ್ಥ (Tl) 109
	1669	ತೀರ್ಥ (Tl) 61, 85
	1670	ಶಿವ (Sh) 95; ತೀರ್ಥ (Tl) 86
	1671	ಶಿವ (Sh) 91; ತೀರ್ಥ (Tl) 82
	1673	ಶಿವ (Sh) 94
ಚೆನ್ನಮ್ಮಾಜಿ (Chennammāji)	1672	ತೀರ್ಥ (Tl) 80, 174, 202
	1673	ತೀರ್ಥ (Tl) 45, 78, 79

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1424	ತೀರ್ಥ (Tl) 21, 115
ದೇವರಾಯ II (Dēvarāya II)	1424–25	ತೀರ್ಥ (Tl) 117, 235
	1431	ಶಿವ (Sh) 33
	1431–32	ತೀರ್ಥ (Tl) 151
	1432	ತೀರ್ಥ (Tl) 129
	1434	ತೀರ್ಥ (Tl) 214
	1437	ತೀರ್ಥ (Tl) 123
	1435	ತೀರ್ಥ (Tl) 169
	15ನೆಯ ಶತಮಾನ	ಶಿವ (Sh) 28;
	(15th century)	ತೀರ್ಥ (Tl) 122,189, 241, 234
. . .	1451	ತೀರ್ಥ (Tl) 242
ಮಲ್ಲಿಕಾರ್ಜುನ	1463	ತೀರ್ಥ (Tl) 155
	15ನೆಯ ಶತಮಾನ	
	(15th century)	ತೀರ್ಥ (Tl) 239
ವಿರೂಪಾಕ್ಷ (Virūpāksha)	1468	ತೀರ್ಥ (Tl) 177
ಬುಕ್ಕ ? (Bukka ?)	1470	
. . .	15ನೆಯ ಶತಮಾನ	ತೀರ್ಥ (Tl) 116, 181, 192
	(15th century)	218, 237
ಕೃಷ್ಣದೇವರಾಯ (Krishnadēvarāya)	1514	ಶಿವ (Sh) 89
	1523	ಶಿವ (Sh) 81
	1527	ಶಿವ (Sh) 46, 47
ಅಚ್ಯುತರಾಯ ? (Achyutarāya ?)	16ನೆಯ ಶತಮಾನ	
	(16th century)	ತೀರ್ಥ (Tl) 217
. . .	1535	ತೀರ್ಥ (Tl) 198
ಸದಾಶಿವರಾಯ (Sadāśivarāya)	1560	ತೀರ್ಥ (Tl) 180
	1564	ತೀರ್ಥ (Tl) 118
ಶ್ರೀರಂಗರಾಯ (Śrīraṅgarāya)	1573	ತೀರ್ಥ (Tl) 158
ವೆಂಕಟಪತಿ (Veṅkaṭapati)	1587	ಶಿವ (Sh) 45
. . .	15–16ನೆಯ ಶತಮಾನ	
	(15-16th century)	ತೀರ್ಥ (Tl) 206
ವೆಂಕಟಪತಿ (Veṅkaṭapati)	1610	ತೀರ್ಥ (Tl) 215
ರಾಮ್ಮರಾಯ (Rāmarāya)	1621	ಶಿವ (Sh) 83
. . .	. . .	ತೀರ್ಥ (Tl) 215
	ಕೆಳದಿ (KELADI)	
ಸದಾಶಿವ (Sadāśiva)	1560	ಶಿವ (Sh) 5

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date* (*in A.D.*)	ಶಾಸನ ಸಂಖ್ಯೆ *Inscription No.*
	1369	ತೀರ್ಥ (Tl) 35
	1370	ತೀರ್ಥ (Tl) 186
	1371	ತೀರ್ಥ (Tl) 140
	1377	ತೀರ್ಥ (Tl) 6
	14ನೆಯ ಶತಮಾನ (14th century)	ಶಿವ (Sh) 13
ಹರಿಹರ II (Harihara II)	1377	ತೀರ್ಥ (Tl) 23, 233
	1379	ತೀರ್ಥ (Tl) 178
	1381	ತೀರ್ಥ (Tl) 8, 232
	1384	ತೀರ್ಥ (Tl) 195
	1385	ತೀರ್ಥ (Tl) 253
	1394	ತೀರ್ಥ (Tl) 120, 221, 254
	1396	ತೀರ್ಥ (Tl) 204
	1397	ತೀರ್ಥ (Tl) 222
	1398	ತೀರ್ಥ (Tl) 25
	14ನೆಯ ಶತಮಾನ (14th century)	ಶಿವ (Sh) 42,147
	1401	ತೀರ್ಥ (Tl) 183, 248
	1404	ತೀರ್ಥ (Tl) 1,16–18,20,137,138, 205, 243, 250, 251
	1406	ಭದ್ರಾ (Br) 23
ಬುಕ್ಕ (Bukka)	1405	ತೀರ್ಥ (Tl) 19, 126
ದೇವರಾಯ I (Dēvarāya I)	1405	ತೀರ್ಥ (Tl) 15
	1405–06	ತೀರ್ಥ (Tl) 26
	1407	ಶಿವ (Sh) 102; 244 ತೀರ್ಥ (Tl) 10, 176, 200
	1408	ತೀರ್ಥ (Tl) 179, 224, 252
	1409	ಶಿವ (Sh) 32
	1412	ತೀರ್ಥ (Tl) 246
	1413	ತೀರ್ಥ (Tl) 34
	1414	ಭದ್ರಾ (Br) 22
	1415	ತೀರ್ಥ (Tl) 139
	1416	ತೀರ್ಥ (Tl) 190
	1417	ತೀರ್ಥ (Tl) 212, 213
ಬುಕ್ಕ III (Bukka III)	1419	ತೀರ್ಥ (Tl) 133
ದೇವರಾಯ I (Dēvarāya I)	1421	ತೀರ್ಥ (Tl) 148
	1422	ತೀರ್ಥ (Tl) 152

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1214	ಶಿವ (Sh) 103; ಭದ್ರಾ (Br) 5
	1218	ಶಿವ (Sh) 74
	12–13ನೆಯ ಶತಮಾನ (12-13th century)	ಶಿವ (Sh) 85; ಭದ್ರಾ (Br) 19
ನರಸಿಂಹ II (Narasimha II)	1226	ಭದ್ರಾ (Br) 21
ಸೋಮೇಶ್ವರ (Somēśvara)	13ನೆಯ ಶತಮಾನ (13th century)	ಶಿವ (Sh) 8
ನರಸಿಂಹ III (Narasimha III)	1287	ಶಿವ (Sh) 108, 109
	1291	ಶಿವ (Sh) 34, 40
	1296	ಶಿವ (Sh) 37
ಬಲ್ಲಾಳ (Ballāḷa)	12–13ನೆಯ ಶತಮಾನ (12-13th century)	ಶಿವ (Sh) 36; ಭದ್ರಾ (Br) 20
ಬಲ್ಲಾಳ III (Ballāḷa III)	1309	ಶಿವ (Sh) 22
	1313	ಶಿವ (Sh) 30
	1315	ಭದ್ರಾ (Br) 24
	1320	ಶಿವ (Sh) 31
	1324	ಶಿವ (Sh) 69
	14ನೆಯ ಶತಮಾನ (14th century)	ಶಿವ (Sh) 26
. . .	12ನೆಯ ಶತಮಾನ (12th century)	ಶಿವ (Sh) 62
. . .	. . .	ಭದ್ರಾ (Br) 26, 27

ಸೇಉಣ (SEUNA)

ಕನ್ನರ (Kannara)		
ಸಿಂಘಳದೇವ ? (Siṅghaḷadēva ?)	1254	ತೀರ್ಥ (Tl) 135
ರಾಮದೇವ (Rāmadēva)	13–14ನೆಯ ಶತಮಾನ (13-14th century)	ಶಿವ (Sh) 57

ವಿಜಯನಗರ (VIJAYANAGARA)

ಹರಿಹರ I (Harihara I)	1346	ತೀರ್ಥ (Tl) 145
	1351	ತೀರ್ಥ (Tl) 24
ಬುಕ್ಕ (Bukka)	1362	ತೀರ್ಥ (Tl) 36
	1362–63	ತೀರ್ಥ (Tl) 187
	1363	ತೀರ್ಥ (Tl) 29
	1368	ತೀರ್ಥ (Tl) 32

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
ನನ್ನಿಯಗಂಗ (Nanniya-Gaṅga)		ಶಿವ (Sh) 10
ಗಂಗಪೆರ್ಮ್ಮಾಡಿ (Gaṅga-Permmāḍi)	1085	ಶಿವ (Sh) 59
ಬಮ್ಮದೇವ (Bammadēva)	11ನೆಯ ಶತಮಾನ (11th century)	ಶಿವ (Sh) 104
	1103	ಶಿವ (Sh) 53
	1108	ಭದ್ರಾ (Br) 25
	1111	ಭದ್ರಾ (Br) 39
	1112	ಶಿವ (Sh) 7, 68
ಪೆರ್ಮ್ಮಾಡಿದೇವ (Permmāḍidēva)	1115	ಶಿವ (Sh) 64
	1120	ಶಿವ (Sh) 51
ನನ್ನಿಯಗಂಗ (Nanniya-Gaṅga)	1122	ಶಿವ (Sh) 52, 82; ಭದ್ರಾ (Br) 31
ವೀರಗಂಗ (Vīra-Gaṅga)	1125	ಶಿವ (Sh) 77
	1127	ಶಿವ (Sh) 72
ನನ್ನಿಯಗಂಗ (Nanniya-Gaṅga)	1140	ಭದ್ರಾ (Br) 29
	1142–43	ಶಿವ (Sh) 23
	12ನೆಯ ಶತಮಾನ (12th century)	ಭದ್ರಾ (Br) 34, 36
	1218	ಶಿವ (Sh) 74
ಮಂಡಲ ಮಹೀಪಾಲ (?)	1240	ತೀರ್ಥ (Tl) 172
. . .	13ನೆಯ ಶತಮಾನ (13th century)	ಶಿವ (Sh) 8

ಹೊಯ್ಸಳ (HOYSALA)

	1090–91	ತೀರ್ಥ (Tl) 30
ವಿಷ್ಣುವರ್ಧನ (Vishṇuvardhana)	1111	ಭದ್ರಾ (Br) 39
ನರಸಿಂಹ ? (Narasimha ?)	1112	ಶಿವ (Sh) 68
	1120	ಶಿವ (Sh) 51
ಬಲ್ಲಾಳ I (Ballāḷa I)	1167	ಶಿವ (Sh) 76
ಬಲ್ಲಾಳ II (Ballāḷa II)	1172	ಭದ್ರಾ (Br) 35, 37
	1175	ಶಿವ (Sh) 115
	1180	ಭದ್ರಾ (Sh) 28, 32
	1181	ಶಿವ (Sh) 17
	1195	ಶಿವ (Sh) 86
	1202	ಶಿವ (Sh) 98
	1211	ಭದ್ರಾ (Br) 6

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
ತ್ರಿಭುವನಮಲ್ಲ ಸಾಂತರ (Tribhuvanamalla-Sāntara)	11ನೆಯ ಶತಮಾನ (11th century)	ತೀರ್ಥ (Tl) 211
	1103	ತೀರ್ಥ (Tl) 173
ಸಾಂತರದೇವ (Sāntaradēva)	1115–16	ಭದ್ರಾ (Br) 3
ಜಗದೇವರಸ	1160	ಶಿವ (Sh) 67
ವೀರ ಸಾಂತರದೇವ (Vīra Sāntaradēva)	1173	ಶಿವ (Sh) 55
	ಚಾಲುಕ್ಯ (CHALUKYA)	
. . .	1092	ಶಿವ (Sh) 117
ತ್ರಿಭುವನಮಲ್ಲ (Tribhuvanamalla)	11ನೆಯ ಶತಮಾನ (11th century)	ತೀರ್ಥ (Tl) 211
	1103	ತೀರ್ಥ (Tl) 173
	1108	ಭದ್ರಾ (Br) 25
	1111	ಭದ್ರಾ (Br) 39
	1112	ಶಿವ (Sh) 7, 68
	1115	ಶಿವ (Sh) 64
ತ್ರೈಲೋಕ್ಯ ಮಲ್ಲ (Trailōkyamalla)	1122	ಶಿವ (Sh) 14
ತ್ರಿಭುವನಮಲ್ಲ (Tribhuvanamalla)	1122	ಭದ್ರಾ (Br) 31
ವಿಕ್ರಮಾದಿತ್ಯ VI (Vikramāditya VI)	1125	ಶಿವ (Sh) 77
ಭೂಲೋಕಮಲ್ಲ (Bhūlōkamalla)	1127	ಶಿವ (Sh) 72
. . .	1134	ಭದ್ರಾ (Br) 38
ತ್ರೈಲೋಕ್ಯಮಲ್ಲ (Trailōkyamalla)	1154	ಶಿವ (Sh) 21
ಭೂಲೋಕಮಲ್ಲ (Bhūlōkamalla)	1160	ಶಿವ (Sh) 67
. . .	1192	ಶಿವ (Sh) 116
ತ್ರಿಭುವನಮಲ್ಲ (Tribhuvanamalla)	11–12ನೆಯ ಶತಮಾನ (11-12th century)	ಶಿವ (Sh) 4
ವಿಕ್ರಮಾದಿತ್ಯ (Vikramaditya)		ಶಿವ (Sh) 119
ತ್ರಿಭುವನಮಲ್ಲ (Tribhuvanamalla)	12ನೆಯ ಶತಮಾನ (12th century)	ಭದ್ರಾ (Br) 34
	. . .	ಭದ್ರಾ (Br) 36
	ಗಂಗ (GANGA)	
ಎರೆಯಪ್ಪ (Ereyappa)	10ನೆಯ ಶತಮಾನ (10th century)	ಶಿವ (Sh) 6
ಸತ್ಯವಾಕ್ಯ (Satyavākya)		ಶಿವ (Sh) 78

ವಂಶಾನುಕ್ರಮದಲ್ಲಿ ಶಾಸನಗಳ ಸೂಚಿ

DYNASTIC INDEX OF INSCRIPTIONS

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	ಅಯೋಧ್ಯಾ (AYODHYA)	
ಧರ್ಮಾಂಗದ (Dharmāṅgada)	18ನೆಯ ಶತಮಾನ (18th century)	ಶಿವ (Sh) 48
	ಪಾಂಡವ (PANDAVA)	
ಜನಮೇಜಯ (Janamējaya)	. . .	ತೀರ್ಥ (Tl) 194
	ಕದಂಬ (KADAMBA)	
ಮೃಗೇಶವರ್ಮ (Mṛigēśavarma)	5ನೆಯ ಶತಮಾನ (5th century)	ಶಿವ (Sh) 107
ಮಾಂಧಾತವರ್ಮ (Māndhātavarmma)	5–6ನೆಯ ಶತಮಾನ (5-6th century)	ಶಿವ (Sh) 93
ಪುರಂದರರಾಯ (Purandararāya)	1154	ಶಿವ (Sh) 41
ತೈಲ (Taila)	12ನೆಯ ಶತಮಾನ (12th century)	ಶಿವ (Sh) 58, 61, 119
ಕದಂಬರಾಯ (Kadambarāya)	13ನೆಯ ಶತಮಾನ (13th century)	ಶಿವ (Sh) 42
	ರಾಷ್ಟ್ರಕೂಟ (RASHTRAKUTA)	
ಕೃಷ್ಣ III (Kṛishṇa III)	963–64 A.D. 10ನೆಯ ಶತಮಾನ (10th century)	ಭದ್ರಾ (Br) 2 ಶಿವ. (Sh) 87, 88
	ಸಾಂತರ (SANTARA)	
ಜಿನದತ್ತರಾಯ (Jinadattarāya)	950 10ನೆಯ ಶತಮಾನ (10th century) 10–11ನೆಯ ಶತಮಾನ (10-11th century)	ಶಿವ (Sh) 18 ಶಿವ (Sh) 118 ತೀರ್ಥ (Tl) 207

Bhadravati Taluk (Br)

Index of Villages where Inscriptions were found

Shivamogga Taluk (Sh)

Tirthahalli Taluk (Tl)

ಭದ್ರಾವತಿ ತಾಲ್ಲೂಕು (ಭದ್ರಾ)

ಶಾಸನಗಳು ದೊರೆತಿರುವ ಊರುಗಳ ಅಕಾರಾದಿ

ಶಿವಮೊಗ್ಗ ತಾಲ್ಲೂಕು (ಶಿವ)

ತೀರ್ಥಹಳ್ಳಿ ತಾಲ್ಲೂಕು (ತೀರ್ಥ)

ಚಿತ್ರಗಳ ಪಟ್ಟಿ

List of Illustrations

ಸಂಕೇತಾಕ್ಷರಗಳು

ಇ ದ = ಇತಿಹಾಸ ದರ್ಶನ; ಎ.ಕ = ಎಪಿಗ್ರಾಫಿಯ ಕರ್ನಾಟಿಕ; ತ = ತರೀಕೆರೆ; ತೀರ್ಥ = ತೀರ್ಥಹಳ್ಳಿ; ಬೇ = ಬೇಲೂರು; ಭದ್ರಾ = ಭದ್ರಾವತಿ; ಮಾ ಕ = ಮಾನವಿಕ ಕರ್ನಾಟಕ; ಮೂಡ = ಮೂಡಗೆರೆ; ರಿ (ಎಂಎಆರ್) = ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್; ಶಾ ಅ = ಶಾಸನ ಅಧ್ಯಯನ; ಶಿವ = ಶಿವಮೊಗ್ಗ; ಶೃಂ = ಶೃಂಗೇರಿ; ಸಿಕೆಐ = ಕಾರ್ಪಸ್ ಆಫ್ ಕದಂಬ ಇನ್‌ಸ್ಕ್ರಿಪ್ಷನ್ಸ್; ಎಸ್‌ಐಐ = ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್.

ABBREVIATIONS

ID = Itihāsa Darśana; *EC* = Epigraphia Carnatica; *Tk* = Tarikere; *Tl* = Tīrthahaḷḷi; *Bl* = Bēlūr; *Br* = Bhadrāvati; *MK* = Mānavika Karnāṭaka; *Mg* = Mūḍagere; *R* (*MAR*) = Mysore Archaeological Report; *SA* = Śāsana Adhyayana; *Sh* = Śivamogga; *Sg* = Śṛingēri; *CKI* = Corpus of Kadamaba Inscriptions; *SII* = South Indian Inscriptions.

ಪರಿವಿಡಿ

CONTENTS

Institute. Dr. D. Gururatna Babu, Sri B. Venkataramanna and Dr. S. Renuka have rendered their help in the sorting of Index slips. Sri K. Mohammed Shariff served in the *Epigraphia Carnatica* section till the end of December, 2003.

My colleague Sri H.M. Nagaraja Rao has worked ably in bringing out this volume. He is by nature humane and soft spoken, but tenacious to complete the work assigned to him. He is good and virtuous. From the inception of the *Epigraphia Carnatica* Revision and Reprint Project till now, *i.e.*, for about 35 years he has served in the Section, worked with scholars like Dr. B.R. Gopal and Dr. A.V. Narasimha Murthy and has earned a name in the field. Also I should acknowledge the co-operation of the members of the Advisory Committee. My thanks are due to all people who have helped in bringing out this volume.

It is planned to publish a separate volume for the Introductions written by Rice to *Epigraphia Carnatica* volumes. An introduction is written afresh. I welcome opinions and suggestions from scholars and researchers to improve the *Epigraphia Carnatica* volumes.

Kuvempu Institute of Kannada Studies
23-03-2006

Prof. Aravinda Malagatti
Director

volume is one year. The work of all volumes has begun simultaneously. We hope all volumes will be brought out soon. This is the thirteenth volume in the series. This is being released now. Moreover, four volumes are at the final stages of completion. We are happy to state that in a year or two the project will be completed with all 25 volumes being published.

The present Volume is the thirteenth in the series of *Epigraphia Carnatica* being brought out by the Kuvempu Institute of Kannada Studies. In this volume, consisting of about 1250 pages, there are 418 records from Shivamogga (121), Tirthahalli (255) and Bhadravati (42) taluks.

The new volumes of *Epigraphia Carnatica* are being published by the Kuvempu Institute of Kannada Studies with the generous help of the Government of Karnataka and its love for language and culture. Nine volumes were published. Later, due to some reasons the grant was stopped. However, the University continued the project. Now, simultaneously the editing work of twelve volumes is in progress. It is expected that within two years all the volumes would be available at the disposal of the scholars and researchars. To bear the financial burden of all the volumes to be published simultaneously by the University is however, a stupendous task. Hence with the expectation of the release of a liberal grant from the government, this adventurous step is taken. Honourable Chief Minister of Karnataka Sri H.D. Kumara Swamy has great respect and love for Karnataka, Kannada language and culture and he can understand the value of this project and we expect whole hearted-support from him. Also Sri B.S. Yediyurappa, honourable Deputy Chief Minister and also the Finance Minister has genuine concern for the language and culture of the land. I hope he fully supports us by giving the much needed patronage. I thank both the celebrities. I sincerely thank the Government of Karnataka, especially the honourable ministers for Education, and Kannada and Culture and also officers and staff of these departments.

Our respectable Vice-Chancellor Prof. J. Sashidhara Prasad has given us all encouragement and help, which are beyond words. He has provided special financial help to the early publicaiton of all the remaining volumes. I sincerely dream and hope that all the volumes would be published soon. It is my duty to express my congratulations as well as gratitude to our Vice-chancellor for all his encouragement in this stupendous task. The Registrar, Finance officer, other officers and staff of the University of Mysore have given us the needed encouragement and support. I am indebted to all of them. The graphic work of this Volume is done by young and polite person Sri P.S. Prasanna. The printing work is done by the staff of Mysore University Printing Press. I thank Sri Chandrasekhara Doddamani and his colleagues for their full co-operation.

To add a few new records to this volume many scholars have helped us: Prof. P. Narasimha Murthy, Dr. Rajaram Hegade, Dr. H.S. Gopala Rao, Sri M. Hanumanta Rao, Sri U.S. Ramanna, Sri K. Mohammed Shariff, Sri M.R. Guru, Sri Jayadevappa Jainakeri and Dr. B.V. Kallapura.

Sri N.S. Sharada Prasad has corrected the proofs and Smt. Krishnaveni prepared the Kannada Index out of love for the Institute. Both of them were my former colleagues at the

PREFACE

The study of history, society and culture of Kannaḍa Nāḍu is based on sources which may be classified into two types : unwritten and written. Among the written sources inscriptions have a predominant place. It is true that they are mainly related to the political power or creeds. It is impossible to draw a complete picture of our ancient society merely based on a study of inscripitons. However, many factors related to the life of common folk have been incorporated in epigraphs. Their fairs and festivals, disputes and agreements, customs and beliefs are mentioned in inscriptions. They throw light on the antiquity of our language and literature. In fact the earliest Kannada literature is epigraphical literature.

Many scholars and epigraphists are of the opinion that in variety and essence Kannada inscriptions occupy the foremost place in the world of Indian epigraphs. This is really a matter of pride. Benjamin Lewis Rice (A.D. 1837-1927) collected, edited and published – in twelve volumes of *Epigraphia Carnatica* Series – 8869 epigraphs from old Mysore State and Coorg region, between 1884 and 1906. Later on thousands of inscriptions have come to light.

The volumes of *Epigraphia Carnatica* are indispensable primary source books for the study and research work of scholars and students. But they had run out of stock since many years ; there was a long-felt need for bringing out their new edition. As per the unanimous recommendations of the Co-ordination Committee for the Research Work on Karnataka Life and Cutlure in 1970 the responsibility of this work was entrusted to the Institute of Kannada Studies of the University of Mysore. The work was entrusted to the Institute by the Government. However, the work actually began in the latter half of December, 1971, with meagre expert staff. An Advisory Committee was formed and it worked under the Chairmanship of the Director of the Institute.

However, the set pattern in the editing of the *Epigraphia Carnatica* volumes followed from 1 to 13 volumes has to be changed for the remaining volumes. The reasons for this change are many. Mention must be made a few precise reasons: the impossibility of appointing suitable persons to the posts in the section, because of government's restrictions; and the retirement of all elder scholars of the section.

Hence a different administrative policy had to be followed for the perpetuation of the editing work of the volumes. Accordingly, volumes have been given for editing and other works to various scholars in the field. Each scholar is the whole and sole editor of the volume allotted to him. From revising the text of the inscription, translation, editing, getting DTP work done and correcting the proofs up to the handing over the tracing sheets to the Institute, - the entire responsibility belongs to the editor of the concerned volume. And the entire financial burden for the work is to be borne by the University. The Institute has the responsibility of getting the volumes printed. A time limit has been set for all the editors. The editors after the completion of their work will be duly rewarded with remuneration.

On these guidelines the editing work of volumes 14 to 25 has been assigned to scholars of repute belonging to different places of Karnataka. The allotted time for editing the

ನನ್ನ ಸಹೋದ್ಯೋಗಿಯಾಗಿರುವ ಶ್ರೀ ಎಚ್.ಎಂ. ನಾಗರಾಜರಾವ್ ಅವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಎಪಿಗ್ರಾಫಿಯ ಕರ್ನಾಟಕ ಪರಿಷ್ಕರಣೆ ಹಾಗೂ ಪುನರ್ಮುದ್ರಣ ಯೋಜನೆ ಆರಂಭವಾದಾಗಿನಿಂದ ಇಂದಿನವರೆಗೂ ಎಂದರೆ ಸುಮಾರು ಮೂವತ್ತೈದು ವರ್ಷಗಳ ಕಾಲ ನಿರಂತರವಾಗಿ ಈ ಯೋಜನೆಯೊಂದಿಗಿದ್ದು ಸೇವೆ ಸಲ್ಲಿಸುತ್ತಿದ್ದಾರೆ. ಅಪಾರ ಅನುಭವ ಸಂಪಾದಿಸಿದ ಇವರು ಸಂಪನ್ನಗುಣಶೀಲರು; ಡಾ. ಬಾ.ರಾ. ಗೋಪಾಲ, ಡಾ. ಎ.ವಿ. ನರಸಿಂಹಮೂರ್ತಿಯವರಂಥ ವಿದ್ವಾಂಸರೊಂದಿಗೆ ಕಾರ್ಯನಿರ್ವಹಿಸಿದವರು; ಸ್ವಭಾವತಃ ಮೃದುಮಾತಿನ ಹೃದಯವಂತರು; ಹಿಡಿದ ಕೆಲಸವನ್ನು ಪಟ್ಟುಬಿಡದೆ ಮಾಡಿಮುಗಿಸುವ ನಿಷ್ಠಾವಂತ ಕೆಲಸಗಾರರು; ಇವರು ಈ ಸಂಪುಟವನ್ನು ಸಮರ್ಥವಾಗಿ ಸಿದ್ಧಪಡಿಸಿದ್ದಾರೆ. ಸಲಹಾಮಂಡಲಿಯ ಸದಸ್ಯರು ಸಹಕಾರ ನೀಡಿದ್ದಾರೆ. ಈ ಸಂಪುಟವನ್ನು ಹೊರತರುವಲ್ಲಿ ನೆರವಾದ ಎಲ್ಲರಿಗೂ ನನ್ನ ಧನ್ಯವಾದಗಳು.

ರೈಸ್ ಪೀಠಿಕೆಗಳನ್ನೇ ಪ್ರತ್ಯೇಕವಾಗಿ ಪ್ರಕಟಿಸಬೇಕೆಂಬ ಉದ್ದೇಶವಿದೆ. ಹಾಗಾಗಿ ಈ ಸಂಪುಟದ ಪೀಠಿಕೆಯನ್ನು ಹೊಸದಾಗಿ ಬರೆಯಲಾಗಿದೆ. ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಉತ್ತಮಪಡಿಸಲು ವಿದ್ವಾಂಸರು ಮತ್ತು ಸಂಶೋಧಕರು ನೀಡುವ ಅಭಿಪ್ರಾಯಗಳಿಗೆ ಸ್ವಾಗತ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
23–03–2006

ಪ್ರೊ. ಅರವಿಂದ ಮಾಲಗತ್ತಿ
ನಿರ್ದೇಶಕರು

ಆರಂಭವಾಗಿದೆ. ಈ ಸ್ವರೂಪದ ಕಾರ್ಯವಿಧಾನದಿಂದ ಸಂಪುಟಗಳನ್ನು ಬೇಗನೆ ಹೊರತರಬಹುದೆಂಬ ನಿರೀಕ್ಷೆಯೂ ನಮ್ಮದಾಗಿದೆ. ಈಗಾಗಲೇ ಒಂದು ಸಂಪುಟಕ್ಕೆ ಒಬ್ಬರೇ ಸಂಪಾದಕರೆಂದು ನೇಮಕಮಾಡಿ ಪೂರ್ಣಗೊಳಿಸುವ ಈ ಹೊಸ ತಿರುವಿನ ಯೋಜನೆಯಂತೆ ನಾಲ್ಕು ಸಂಪುಟಗಳ ಕೆಲಸಗಳು ಅಂತಿಮ ಹಂತದಲ್ಲಿವೆ. ಎಂದರೆ ಈಗ ಸಂಪಾದನೆಗೊಳಗಾಗಿ ಎಲ್ಲ ಹನ್ನೆರಡು ಸಂಪುಟಗಳು ಇನ್ನೊಂದು ಅಥವಾ ಎರಡು ವರ್ಷದಲ್ಲಿ ಎರಡು ಕಂತುಗಳಲ್ಲಿ ಹೊರಬರುವ ಸಾಧ್ಯತೆಗಳಿವೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಹೊರಬರುತ್ತಿರುವುದು ಈಗ ಹದಿಮೂರನೆಯ ಸಂಪುಟ. ಸುಮಾರು ಸಾವಿರದ ಇನ್ನೂರೈವತ್ತು ಪುಟಗಳ ಈ ಸಂಪುಟದಲ್ಲಿ ಶಿವಮೊಗ್ಗ (121), ತೀರ್ಥಹಳ್ಳಿ (255) ಹಾಗೂ ಭದ್ರಾವತಿ (42) ತಾಲ್ಲೂಕುಗಳಿಗೆ ಸೇರಿದ ಒಟ್ಟು 418 ಶಾಸನಗಳಿವೆ.

1 ಸ್ವಸ್ತಿ ಸಮ . . . . ಲ್ಲಭ
2–5 (ಸವೆದಿದೆ.)
6 ಶ್ರೀಮನ್ಮ . . . .
7 . . ದೇವರು . . . . . . ಮಣ್ಡಳೇಶ್ವ
8 ರಂ ತ್ರಿಭು . . . .
9 ಮಿರೆ . . . . ಚಾಳುಕ್ಯ
10 ವಿಕ್ರಮಕಾಲದ . . ನೆ ಸುಭಾನುಸಂವತ್ಸರದ ಕಾರ್ತ್ತೀಕ ಶುದ್ಧ
11 ೫ ಬ್ರಿಹವಾರದನ್ದು ಲಿಂಗ ಪ್ರತಿಷ್ಠೆಯಂ ಮಾಡಿ ದೇವಾಲ್ಯ
12 ಮಂ ಕಳಸನಿರ್ಮ್ಮಾಣ ಮಾಡಿ ಶ್ರೀಮತು ಪರ್ವ್ವತವಳ್ಳಿ
13 ಯ ಜಗದಿನ್ದುಪಣ್ಡಿತರ ಕಾಲಂಕರ್ಚ್ಚಿ ಧಾರಾಪೂರ್ವ್ವಕಂ
14 ಮಾಡಿ ಜಕ್ಕೇಶ್ವರದೇವರಿಗೆ ತಾಂ ಕಟ್ಟಿಸಿದ ಪಿರಿಯಕೆಱೆಯ
15 ಮೊದಲೇರಿಯ ಕೆಳಗೆ ಗಳೆಯಲರೆಮತ್ತಲ ಗಟ್ಟಿಗಳೆಯ
16 ವೊನ್ದು ಮತ್ತರು ಬೆಟ್ದಲೆ ಇನಿತುಮಂ ಪ್ರತಿಪಾಳಿಸುವರು ಇ
17 . . . ನ ಕಿಡದೆ ಪ್ರತಿಪಾಳಿಸಿದವರು ವಾರಣಾಸಿಕುರು
18 ಕ್ಷೇತ್ರದಲು ಸಹಸ್ರ ಭೋಜನವಂ ಮಾಡಿ[ಸಿ] ಸಹಸ್ರ ಕವಿಲೆಯಂ ಕೊ
19 ಟ್ಟ ಫಲ ಈ ಧರ್ಮ್ಮಮನಳಿದವ(ವ)ರು ವಾರಣಾಸಿಯಂ ಸಹ
20 ಸ್ರ ಬ್ರಾಹ್ಮಣರುಮಂ ಸಹಸ್ರಕವಿಲೆಯನಳಿದ ಬ್ರಹ್ಮ
21 ತಿ ॥

54 (ರಿ. 1923–111)

ಚಊಳಂಗ

ಶಿವಮೊಗ್ಗಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ನೆಟ್ಟಿರುವ ಕಲ್ಲು

This undated short record registers a grant of the village Chaüḷaṅga to Masīthiya-maṭha as *koḍage*. It may belong to c.19th century.

1 ಸ್ವಸ್ತಿ ಶ್ರೀಮತು ಮಸೀಥಿಯಮಠ[1]
2 ದ ಕೊಡಗೆನಿಮಿತ್ತವಾಗಿ
3 ಚಉಳಂಗಗ್ರಾಮವನು
4 ಬಿಟ್ಟರು

55 (VII ಶಿವ 116)

ಚಾಮೇನಹಳ್ಳಿ

ರಾಮೇಶ್ವರಗುಡಿ ಬಳಿ ನೆಟ್ಟಿರುವ ಕಲ್ಲು

This slightly damaged record refers to the rule of Śāntara king Vīra Sāntaradēva and is dated Śaka 1096, Vijaya, Śrāvaṇa, Friday, the fortnight and the *tithi* being lost. The details correspond to July 13, 20, 27 or August 3 or 10, 1173 A.D. The Śaka year was current.

It registers a grant of certain lands to god Brahmēsvara by *paṭṭasāhaṇi* Bammayya and Sāntara-gāvuṇḍa, son of Masaṇa-gāvuṇḍa and Kāḷabbe. It further records a gift made over to Maleya-jīya by *paṭṭasāhaṇi* Bammayya, Masaṇa-gāvuṇḍa and his son Sāntara gāvuṇḍa. It also refers to a grant made by Sāntaradēva to

1 ಮೇಲ್ಭಾಗ ಹೋಗಿದೆ.

Masaṇa-gāvuṇḍa. It is to be noted that the imprecatory verse is given in the beginning of the record, after the invocatory verse.

1 ನಮಸ್ತುಂಗ ಸಿರಶ್ಚುಂಬಿಚಂದ್ರಚಾಮರಚಾರವೇ ತ್ರೈಳೋಕ್ಯನಗರಾರಂ
2 ಭಮೂಲಸ್ತಂಭಾಯ ಶಂಭವೇ ॥[1] ಸ್ವದತ್ತಂ ಪರದತ್ತಂ ಬ್ವಾಯೋ
3 ಹರೇತಿ ವಸುಂಧರಾ ಷಷ್ಟಿರ್ವರ್ಷ ಸಹಸ್ರಾಣಿ ಯಿಷ್ಟಾ
4 ಯಾಂ ಜಾಯತೇ ಕ್ರಿಮಿಃ ॥[1] ಸ್ವಸ್ತಿ ಸಮಧಿತಗಪಂಚಮಹಾಸಬ್ದ
5 ಮಹಾಮಂಡಳ ಉತ್ತರಮಧುರಾಧೀಸ್ವರ ಪಟ್ಟಿಪೊಂಬುಚ್ಚಪು
6 ರವರಾಧೀಸ್ವರ ಪದ್ಮಾವತೀದೇವಿಲಬ್ಧವರಪ್ರಸಾದಂ ಶಾನ್ತ
7 ರಾದಿತ್ಯಂ ಸಕಳಜನಸ್ತುತ್ಯಂ ನೀತಿಸರ್ಬ್ಬಜ್ಞಕಂದುಕಾಚಾ
8 ರ್ಯ್ಯಂ ಗಣಿಕಾಮನೋಜಂ ಹಯವತ್ಸರಾಜಂ ಜಿ
9 ನಪಾದಾಂಬು . ದಪಂಕಜಭ್ರಮರಂ ಮಂಡಳಿಕ
10 ಭೇರುಂಡಂ ಜಗದೇಕದಾನಿನಾಮಾದಿಯಸಮಸ್ತಪ್ರಸಸ್ತಿಸಹಿ
11 ತಂ ಶ್ರೀಮನ್ಮಹಾಮಂಡಳೇಶ್ವರಂ ವೀರಸಾಂನ್ತರದೇವರ ವಿಜಯ
12 ರಾಜ್ಯ ಮುತ್ತರೋತ್ತರಾಭಿ ವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾ
13 . . . ಸಲುತ್ತಮಿರೆ ॥ ತತ್ಪಾದ ಪದ್ಮೋಪಜೀವಿಗಳು
14 . . . ಮನುಮಹಾಪ್ರಧಾನಂ ಕುಮಾರಂ ಎಱೆಯಮ
15 . . . ಪುತ್ರ ಗೋತ್ರಪವಿತ್ರ ಯಾಚಕಜನಚಿನ್ತಾಮ
16 . . . ಮಸ್ತಗುಣಸಂಪನ್ನರಪ್ಪ ಪಟ್ಟಸಾಹಣಿ ಬಮ್ಮಯ್ಯ
17 . . . ಮಿಯಹಳ್ಳಿಯ ಮಸಣಗಾವುಂಡಂಗಂ ಕಾಳಬ್ಬೆಗಾ
18 . . . ಪುಟ್ಟಿದ ಸಾಂತರಗಾವುಂಣ್ಡ ಅಂನ್ತಿ(ನಿ)ಬರುಂ ಬ್ರಹ್ಮೇಸ್ವರ
19 . . . ಬಿಟ್ಟ ಭೂಮಿ ಸಕ . . ೧೦೯೬ನೆಯ ವಿಜ
20 ಯಸಂವತ್ಸರದ ಶ್ರಾವಣ . . . ಕ್ರವಾರದಂದು ಕೊ
21 ಟ್ಟಗದೆ ಕಂಮ್ಮಂ ೫೦೦ ತಿರುಳಿಗ ಕಂಮ್ಮಂ ೫೨ ಎಳ . . ಕ . . . ಕಮ್ಮ ೨೫
22 ಇಂನ್ತೀಧರ್ಮ್ಮಮ ಪ್ರತಿಪಾಳಿಸಿದವರ್ಗ್ಗಗಂ . . . ಯಲು ಸಾ
23 ಸಿರ ಕವಿಲೆಬ್ರಾಹ್ಮಣರ್ಗ್ಗೆ ಕೊಟ್ಟ . . . . ದ ಪಾತಕಂ
24 ಬ್ರಾಹ್ಮಣರಂ ಕವಿಲೆಯಂ ಕೊ . . ದೋಶ ॥ ಪಟ್ಟಸಾ[ಹ]ಣಿ ಬಮ್ಮಯ್ಯನುಂ ಮ
25 ಸಣಗಾವುಂಡನುಂ ಆತನ ಮಗ ಸಾಂತರಗಾವುಂಡನುಂ ಮಲೆಯಜೀಯಂಗೆ ಕಾ
26 ಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿದ . . ಸಾಂತರದೇವರು ಮಸಣಗಾ
27 ವುಂಡಗೆ . . ಬಳಿ ಕರಡಿಕೆಱೆಯ ಕೆಳಗೆ ಗದ್ದೆ ಮತ್ತರು ೧ ಅಸನೆಗ ಭೂಮಿ
28 ಮತ್ತರುಂ . . ಗವಿನು . . ಮತ್ತರು ೧। ಮಂಗಳಮಹಾಶ್ರೀ ॥

56 (VII ಶಿವ 117)

ಚಿಕ್ಕ ಮರಸ

ಗರಡಿಮನೆಯ ಹಿತ್ತಲಲ್ಲಿ ನೆಟ್ಟಿರುವ ಕಲ್ಲು

This undated small epigraph registers a grant of the village Chikka Marasa by Raṅgappa-rājaiyya son of Veṅkatādri-rajaiya for the food offerings (of the god?).

It mentions Pramōdūta, no other details are given. It is in characters of c.17-18th century.

1 ಶ್ಲೋಕ

1 ಪ್ರಮೋದೂಟ್ಸರ
2 ದಲ್ಲಿ ಕಲೂಬೆರಂ
3 ಗನಾಥನ ಚಿಕ್ಕಮರ
4 ಸ ಎಂಬ ಗ್ರಾಮವನೂ
5 ವೆಂಕಟಾದ್ರಿರಾಜ್ಯೆಯ
6 ನವರ ಕೊಮಾರ ರಂಗಪ್ಪ
7 ರಾಜ್ಯೆಯ್ಯನು ಅಮ್ರುತ
8 ಪಡಿಗೆ ಧಾರೆ ನೆರ್ರೆದು ಕೊ
9 ಟರು ಯದನು ಅಳುಪಿದರೆ
10 ಕಡೆಗಹ ಪತಕ

57 (ರಿ. 1923–61)

ಚೊರಡಿ

ಗ್ರಾಮಕ್ಕೆ ಪೂರ್ವದಲ್ಲಿ ಬಿದ್ದಿರುವ ಕಲ್ಲು

This highly damaged and incomplete epigraph seems to register a grant of land to a *gavuḍa* whose name is lost. The details are not clear.

It belongs to the reign-period of the Sēüṇa king Rāmadēva and extant date details are *viz.*, Dundubhi, śu 10. All other details are lost. It is in characters of c.13-14th century. The given date is however wrong.

1 ಸ್ವಸ್ತಿ ಶ್ರೀಮತು ಯಾದವನಾರಾಯಣ
2 ಭುಜಬಳಪ್ರತಾಪಚಕ್ರವರ್ತಿ ಶ್ರೀ
3 ರಾಮದೇವರಾಜ್ಯೋದಯದ . . . . .
4 ॥ . . ದುಂದುಭಿಸಂವತ್ಸರ
5 . . . . . ಸು ೧೦ . . . . ವಾರ
6 . . . . ಗವುಡ . . . . . ಕೊಟ್ಟ ಗದ್ದೆ
7 . . . . . ವೊಡಂಬಟ್ಟು . . . . . .
8 . . . . . ಇದಮಟಿದೊ . . . . .
9 . . . . . ವಾರಣಾಸಿಯ

58 (ರಿ. 1923–62)

ಚೊರಡಿ

ಅದೇ ಸ್ಥಳದಲ್ಲಿರುವ ಇನ್ನೊಂದು ಕಲ್ಲು

This undated hero-stone record refers to the death of Bopadaḷāra in a cattle-raid after killing Kadamba Tailaha of the ancient *agrahāra* Sōraḍe (Choraḍi). It also registers a gift of lands as *koḍaṅge* and certain taxes to the deceased hero by the *sāsirbbar* of *agrahāra* Sōraḍe in appreciation of the victory won by him. Chīladaḷāra set up the hero-stone and Māchōja engraved it. The exact meaning is not clear. It is in characters of c.12-13th century.

1 ಕಳ
2 ಪನ್ನರ
3 ಪ್ರಾಣಜ
4 ಮಾದಿ
5 ಗುಣಸಂ
6 ಪ್ಪ ಶ್ರೀ
7 ಮದನಾದಿಯಗ್ರಹಾರಂ ಸೋರಡೆಯ ಅಶೇಷಸಾಸಿರ್ಬ್ಬರ್ ತಮ್ಮ ಮಗಂ ಚೀಲದಳಾಱ
8 ಬೊಪಧಳಾಱನ್ಮಣ್ಣಱಾಣ್ಮ ಗೋವಕೊಲ್ಲ ಅಹಿತರಂ ಗೆಲಲ್ವಡೆಱಾ ಮಾರ್ಗ್ಗಂ
9 ದಲೆ ಕೊಣ್ಡುದರ್ಕ್ಕೆ ಮೆಚ್ಚಿ ಗದ್ದೆ ಗಳೆಯ ಮತ್ತ ೧ ಬೆದ್ದಲೆ ಗಳೆಯ ಮತ್ತ
10 ಪ ೨ ಒಕ್ಕಲುದೆಱೆ ಮನೆದೆಱೆ ಅನ್ತುವಂ ಕೊಡಂಗೆಯಂ ಬಿಟ್ಟು ಕೊಟ್ಟರು ಇ ಕೊ
11 ಡಂಗೆಯ ಅಟಿದಾತಂ ಸೀಮೆಯಿಂ ಬಾಹಿರಂ ಸ್ವಸ್ತಿ ಶ್ರೀಮದನಾದಿಯಗ್ರ
12 ಹಾರಂ ಸೋರಡೆಯ ಕದಂಬರ ತೈಲಹನಿಱಿದು ಪೆಂಡಿರುಡೆ ಉರ್ಚ್ಚಲಾ ತುಱುಪ
13 ರಿಯೆ ಬೊಪದಳಾಱ ಕಾದಿ ಸುರಲೋಕಪ್ರಾಪ್ತನಾದಡೆ ಚೇಲದಳಾರಯಾತಂಗೆ ಪ

14 ರೋಕ್ಷವಿನ

15 ಯಮಂ ಮಾಡಿ

16 ಕಲ್ಲನಿಜಿಸಿ

17 ದ ಕಂಡರಿಸಿ

18 ದ ಮಾಚೋಜ

59 (VII ಶಿವ 10)

ತಟ್ಟೆಕೆರೆ

ರಾಮೇಶ್ವರ ದೇವಸ್ಥಾನದ ಮುಂದೆ ನೆಟ್ಟಿರುವ ಕಲ್ಲು

This slightly damaged record refers to the Gaṅga king Gaṅga-Permmāḍidēva and is dated Śaka 1001, Krōdhana, Jyēshṭha ba.6, Saturday. These details equate with Saturday, 17th May, 1085 A.D. However, the Śaka year was 1007.

It states that the great minister, *perggaḍe* Nokkayya got erected a temple, established an *aravaṇṅge*, enlarged a tank, formed paddy fields and built a *basadi* at Taṭṭekere. It further states that after the death of his sons Gujjana and Jinadāsa Nokkayya got erected two Jaina *basadis* at Harige and Nellavatti. It is stated that as a reward of *perggaḍe* Nokkayya's boldness and liberality, Gaṅga-Permmāḍidēva granted the royal insignia of two horns, a canopy *etc*., and bestowed upon him the *gāvuṇḍa-vṛtti* of eight villages (named) and twenty horses, five hundered slaves *etc*. Nokkayya, a lay disciple of Prabhāchandra-siddhānta of the Mūla-saṅgha, Krāṇūr-gaṇa and Mēshapāshāṇa-gachchha got erected four *basadis* and granted certain lands for the *sthānapatis* of Taṭṭekere. Further, it also records a grant of certain customs dues made by Gaṅga-Permmāḍidēva.

The record was written by Dāmarāja, the minister for peace and war and engraved by Sāntōja and Padma.

1 ಸ್ವಸ್ತಿ ಸಕವರ್ಷಂ ೧೦೦೧ನೆಯ

2 ಕ್ರೋಧನಸಂವತ್ಸರದ ಜೇಷ್ಟಬಹು

3 ಳಚ್ಚಟ್ಟಿ ವಡ್ಡವಾರಂ ಶಾಶನ ನಿಂದುದು

4 ಶ್ರೀಮತ್ಪರ[ಮ]ಗಂಭೀರಸ್ಯಾದ್ವಾದಾಮೋಘಲಾಂಛನಂ ಜೀಯಾತ್ತ್ರೈಳೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥[1] ನಮೋ ವೀತರಾಗಾಯ

5 ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ . .

6 ತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲದೇವರ್ಕಲ್ಯಾಣದ ನೆಲವೀಡಿನೊಳ್ಸುಖದಿಂ ರಾಜ್ಯಂ ಗೆಯ್ಯುತ್ತಮಿ . . .

7 ಜೀಯಾತ್ಸಮಸ್ತಕಕುಭಾಂತರವರ್ತ್ತಿಕೀರ್ತ್ತಿರಿಕ್ಷ್ವಾಕ್ವಂಶಕುಳವಾರಿಧಿವರ್ದ್ಧನೇಂದುಃಕೈಳಾಶಶೈಳಜಿನಧರ್ಮ್ಮ ಸುರಕ್ಷಣಾರ್ತ್ಥಂ ಭಾಗೀರಥೀವಿ . . .

8 ತೋದ್ವಿತೀಯಃ ॥[2] ಸ್ವಸ್ತಿ ಸಮಸ್ತಭುವನಾಧೀಶ್ವರಿಕ್ಷ್ವಾಕ್ವಂಶಕುಳಗಗನಗಭಸ್ತಿಮಾಳಿನೀಪರಾಕ್ರಮಾಕ್ರಾಂತ ಕನ್ಯಕುಬ್ಜಾಧೀಶ್ವರ ಶಿರೋ . .

9 ಳಿಮುಖೋಪಾರ್ತ್ಥಿವಪಾರ್ತ್ಥಃ । ಸಮರಕೇಳೀಧನಂಜಯೋ ಧನಂಜಯಃ । ತಸ್ಯ ವಲ್ಲಭಾ ಗಾಂಧಾರಿದೇವೀ ತತ್ಸುತೋ ಹರಿಶ್ಚಂದ್ರಃ । ರೋಹಿ . .

1 ಶ್ಲೋಕ 2 ವಸಂತತಿಲಕ

10 ದಡಿಗಮಾಧವಾಪರನಾಮಧೇಯಃ ॥ ಆ ಗಂಗಾನ್ವಯದರಸುಗಳೆಲ್ಲವೇಳ್ಗೆವಾಡಿವದ ಚಂದ್ರನಂತುದಿತೋದಿತವಾಗಿ ಪಲ . . . .

11 ಜ್ಯಂ ಗೆಯ್ಯುತ್ತಿರೆ ತದನ್ವಯಾಂಬರದ್ಯುಮಣಿಯುಂ ಗಂಗಚೂಡಾಮಣಿಯುಮೆನಿಸಿದ ಭುಜಬಳಗಂಗ ಪೆರ್ಮ್ಮಾಡಿ . . . .

12 ಗುಣಿ ಬೇಳ್ಪರ್ತ್ಥಿಜನಕ್ಕೆ ದಾನಮಣಿ ದೋರ್ಗ್ಗರ್ಬ್ಬೋರ್ದ್ಧತಾಧ್ಮಾತನಿರ್ಘೃಣ ವೈರಿಪ್ರಕರಕ್ಕೆ ಬಲ್ಗಣಿ ಕಳಾವಿನ್ಯಾನವಾರಾಸಿ ಸತ್ವ . .

13 ವೇಷ್ಟಿತಯಶಂ ವಿಕ್ರಾಂತ ತುಂಗಂ ನೃಪಾಗ್ರಣಿಯಾದಂ ಕಲಿಗಂಗದೇವನ ಸುತಂ ಶ್ರೀಬರ್ಮ್ಮ ಭೂಪಾಳಕಂ ॥[1] ಕಂದ . . . .

14 ರ್ವ್ವಿಬಾಹಾಪರಿಘದಿನರಿನೃಪರನಲೆದು ಸೆಲೆಯಾಳ್ವೊಯ್ಯುರ್ವ್ವರೆ ಬಣ್ಣಿಸಲೆಸೆದಂ ಗಂಗರ ಭೀಮಂ ಲೋಕದೊಳಗೆ ಭುಜಬಳಗ . . .

15 ಳಿಯೆನಿಸಿದ ಪೆರ್ಮ್ಮಾಡಿ ಬರ್ಮ್ಮದೇವಂಗಂ ಪಾಣ್ಡ್ಯಕುಳೋದ್ಭವೆಯೆನಿಸಿದ ಗಂಗಮಹಾದೇವಿಯರ್ಗ್ಗಂ ರತ್ನತ್ರಯಂ ಪುಟ್ಟುವಂತೆ . . .

16 ವೃ ॥ ಶ್ರೀಮಾರಸಿಂಗನವನೀತಳರಕ್ಷಪಾಳಂ ಕಾಮೋಪಮಂ ಭಗೀರತಾನ್ವಯರತ್ನದೀಪಂ ಭೀಮಪ್ರತಾ ಪನಹಿತಾ . . . .

17 ಸಾಮಾನ್ಯನಲ್ಲನುದಿತೋದಿತನೇಕವಾಕ್ಯಂ ॥[2] ಆತನಣ್ಣುಮಾರ್ಪ್ಪಂ ಲೋಕವಿಖ್ಯಾತಮಾದ ತದನಂತರ ದೊಳ್ ॥ ಸ್ವಸ್ತಿ ಸತ್ಯ . . . .

18 ವರ್ಮ್ಮಧರ್ಮ್ಮಮಹಾರಾಜಾಧಿರಾಜ ಪರಮೇಶ್ವರಂ ಕುವಳಾಳಪುರವರಾಶ್ವರಂ । ನಂದಗಿರಿನಾಥಂ ರಾಜಮಾನ್ಧಾತಂ । ಪದ್ಮಾವತೀಲಬ್ಧವರಪ್ರ . . .

19 ಚಕಿಳಾಮೋದ । ನಸತೀಸಹೋದರಂ ವೀರವೃಕೋದರಂ । ಸಮ್ಯಕ್ತರತ್ನಾಕರಂ ಜಿನಪಾದಸೇಖರಂ । ಮದಗಜೇಂದ್ರಲಾಂಛನಂ ಚತುರವಿ . .

20 ಗಗಾಂಗೇಯಂ ಶೌಚಾಂಜನೇಯಂ । ಗಂಗಕುಳಕಮಳಮಾರ್ತ್ತಣ್ಡಂ ದುಟ್ಟರಗಣ್ಡಂ । ನನ್ನಿಯಗಂಗಂ ಜಯದುತ್ತರಂಗಂ । ಶ್ರೀಮನ್ಮಹಾಮ

21 ಣ್ಡಳೇಶ್ವರಂ ತ್ರಿಭುವನಮಲ್ಲ ಗಂಗಪೆರ್ಮ್ಮಾಡಿದೇವರ್ಗ್ಗಂ [ಗಂ]ಗವಾಡಿತೊಂಭತ್ತಱುಸಾಸಿರಮಂ ಬಾಯ್ಕೇಳಿಸಿ ತದಾಭ್ಯಂತರದ ಮಣ್ಡಳಿಸಾಸಿರಮಂ ಶ್ರೀ

22 ಮತ್ರಿಭುವನಮಲ್ಲದೇವರ್ದ್ದಯೆಗೆಯ್ಯೆ ನಿಧಿನಿಧಾನಮೊಳಗಾಗಿ ತ್ರಿಭಾಗಾಭ್ಯಂತರ ಸಿದ್ಧಿಯಿಂದೆ ಸುಖದಿಂ ರಾಜ್ಯಂ ಗೆಯ್ಯುತ್ತಿರೆ ॥ ಕಂದ ॥

23 ಶ್ರೀಗೆ ನೆಲೆಯಾಗಿ ವಚನಶ್ರೀಗಾಗರಮಾಗಿ ನಿಜಭುಜಾರ್ಜ್ಜಿತವಿಜಯಶ್ರೀಗರುಹನಾಗಿ ಕೀರ್ತ್ತಿಶ್ರೀಗದಿ ಪತಿಯಾಗಿ ಸುಖದಿನಿರೆ

24 ಗಂಗನೃಪಂ ॥ ವೃ ॥ ನುಡಿದುದೆ ನನ್ನಿ ಮಾಡಿದುದೆ ಶಾಸನಮಿತ್ತುದೆ ರಾಮರೇಸುಮಾರ್ಪ್ಪಿಡಿದುದೆ ವಜ್ರಲೇಪಮುಱದಿಱ್ದುದೆ ಮೃತ್ಯು ಪ

25 ರೋಪಕಾರದೊಳ್ನಡೆದುದೆ ಬಟ್ಟೆ ಷಣ್ಗುಣಮೆ ಮೆಯ್ಯೆನೆ ಧರ್ಮ್ಮದೊಳೊಂದಿ ನಿನ್ನವೋಲ್ನಡೆವ ನೃಪೇಂದ್ರನಾವನಖಿಳಾವನಿಯೊಳ್ಕಲಿಗಂಗಭೂಪತೀ ॥[3]

26 ಸ್ಥಿರನೇ ಮೇರುಗಿರೀಂದ್ರದೊಳ್ಪೆಸುವಂ ಗಂಭೀರನೇ ವಾರ್ದ್ಧಿಯೊಳ್ಪುರುಡಿಪ್ಪಂ ಕಲಿಯೇ ಸುರೇಂದ್ರ ಸುತನಂ ಮೆಚ್ಚಂ ಮಹಾದಾನಿಯೇ ಸುರಭೂಜ

27 ಕ್ಕೊಱೆಗಟ್ಟವಂ ಚದುರನೇ ಪಾಂಚಾಳನಿಂ ಮಿಕ್ಕನೆಂದಿರದೀಗಳ್ಧರೆ ಬಣ್ಣಿಕುಂ ರಣಜಯ ಪ್ರೋತ್ತುಂಗನಂ ಗಂಗನಂ ॥[1] ಕ ॥ ಅಮಳಚರಿತ್ರಂ ಪುರುಷೋತ್ತಮ

28 ನೆನಿಸಿದ ಗಂಗಭೂಪನಾತನ ತಮ್ಮಂ ವಿಮಳಯಶಂ ಗೋವಿಂದರನಮೋಘವಾಕ್ಯಂ ಕುಮಾರ ಚೂಡಾರತ್ನಂ ॥ ಅಂತೀರ್ವ್ವರುಂ ಸುಖದಿಂ ರಾಜ್ಯಂ ಗೆ

29 ಯ್ಯುತ್ತಿರೆ ॥ ಕ ॥ ಧರ್ಮ್ಮಕ್ಕಾರ್ಮ್ಮಂ ದಯೆಗೆ ತವರ್ಮ್ಮನೆ ಸಿಷ್ಟೇಷ್ಟಕಳ್ಪಭೂಜಂ ಗೋತ್ರಾಸಿರ್ಮ್ಮಂ ಕುಳೋತ್ತಮಂ ಪೊಲೆಯಮ್ಮನೆನಲ್ನಲ್ಲಗುಣ

1 ಮತ್ತೇಭವಿಕ್ರೀಡಿತ 2 ವಸಂತತಿಲಕ 3 ಚಂಪಕಮಾಲೆ

30 ಕೆ ಮಚ್ಚರಮುಂಟೇ ॥ ಆ ಗುಣೋತ್ತಮನೆನಿಸಿದ ಪೊಲೆಯಮ್ಮಂಗಂ ರಮಣೀರತ್ನಮೆನಿಸಿದ ಕೆಳೆಯಬ್ಬೆಗಂ ಸುಪುತ್ರಃ ಕುಳದೀಪಕ ಎನಿಸಿ ನೊ

31 ಕ್ಕಯ್ಯಂ ಪುಟ್ಟಿ ಸಮರ್ತ್ಥನಾಗಿ ಮಣ್ಡಲಿಯ ಕೆಂಬಗಾವುಣ್ಡನ ಮಕ್ಕಳು ಕಾಳೆಯಬ್ಬೆಯುಂ ಮಲ್ಲಿಯಬ್ಬೆಯುಮಂ ಮದುವೆಯಾಗಿ ಕಾಳಬ್ಬೆ

32 ಗಾವಿತಿಗೆ ಗುಜ್ಜಣಂ ಪುಟ್ಟೆ ತಂದೆಗೆ ಪದಿರ್ಮ್ಮಡಿಯಾಗಿ ಪೆರ್ಮ್ಮಾಡಿಗಾವುಣ್ಡನೆಂಬ ಪೆಸರಂ ಪಡೆದಂ । ಮಲ್ಲಿಯಬ್ಬೆ ಜಿನದಾಸನೆಂಬ ಮಗನಂ

33 ಪಡೆದಳಂತೀರ್ವ್ವರ್ಮ್ಮಕ್ಕಳ್ವೆರಸು ನೊಕ್ಕಯ್ಯಂ ಸುಖದಿನಿರ್ಪ್ಪುದುಂ ಗಂಗಪೆರ್ಮ್ಮಾಡಿದೇವರ್ತ್ತಟ್ಟಕೆಱೆಗೆ ಬಿಜಯಂಗೆಯ್ದು ಸಮಸ್ತಾಧಿಕಾರಮಂ

34 ಕುಡೆ ದೇವೇಂದ್ರಂಗೆ ಬೃಹಸ್ಪತಿಯಂತು ಬಲೀಂದ್ರಂಗೆ ಭಾರ್ಗ್ಗವನೆಂತಂತೆ ಸಮಸ್ತ ರಾಜ್ಯಭರನಿರೂಪಿತ ಮಹಾಮಾತ್ಯಪದವೀ ವಿರಾಜಮಾ

35 ನಮಾನೋನ್ನತ ಪ್ರಭುಮಂತ್ರೋತ್ಸಾಹಶಕ್ತಿತ್ರಯಸಂಪನ್ನಂ ಮಹಾಮಹಿಮೋತ್ಪನ್ನಂ । ಸುಜನಜನಾ ಧಾರಂ ಬಾನ್ಧವಪ್ರಕಾರಂ । ಪು

36 ರುಷರತ್ನಾಕರಂ ಪರಬಳಭೀಕರಂ । ಪತಿಕಾರ್ಯ್ಯಭಾರಕ್ರಮನಸಹಾಯವಿಕ್ರಮ । . ನುಪಾರ್ಜ್ಜನಾಚಾರ್ಯ್ಯನಚಳಿತಧೈರ್ಯ್ಯಂ . .

37 ಕ್ಷಾರಸಮುದ್ರಂ ಲಂಚಕಾಯಮುಖಿಮುದ್ರಂ । ಪತಿಗೆ ಕಳಾಪಂ ಜಯಲಕ್ಷ್ಮೀನಿಕ್ಷೇಪಂ । ಕೋದಣ್ಡ ಪಾರ್ತ್ಥಂ ಸೌಜನ್ಯತೀರ್ತ್ಥಂ । ಜಿನಪಾದಾರಾಧಕಂ ।

38 ಕಲಿಯುಗಸಾಧಕಂ । ಗಂಗನಹನುಮಂತಂ । ಜಯಲಕ್ಷ್ಮೀಕಾಂತಂ । ಶ್ರೀಮನ್ಮಹಾಪ್ರಧಾನಂ ಪಿರಿಯ ಪೆರ್ಗ್ಗಡೆ ನೊಕ್ಕಯ್ಯಂ ॥ ವೃ ॥

39 ಪಾರ್ತ್ಥಿವರಂ ನಿರಾಕರಿಪದಾನಗುಣೋಕ್ತಿಯಿನರ್ತ್ಥಿಗರ್ತ್ಥಮಂ ಪ್ರಾರ್ತ್ಥಿಸದೀವಕಾರಣದೆ ಪೆರ್ಗ್ಗಡೆ ನೊಕ್ಕಣನೀ ಪರೋಪಕಾರಾರ್ತ್ಥಮಿದಂ ಶರೀರಮೆನಿಪೊಂ

40 ದು ಪುರಾಣವಚೋಕ್ತಿಯಿಂದಮಪ್ರಾರ್ತ್ಥಿತ ದಾನದಿಂದೆ ನೆಗಳ್ವುನ್ನತಿ ಸಂದುದಿಳಾತಳಾಗ್ರದೊಳ್ ॥[1] ಮಾರ್ಗದೊಳೊಳ್ಪಿನೊಳ್ಗುಣದೊಳಣ್ಮಿನೊಳಾರ್ಪ್ಪಿ

41 ನೊಳಾದುದೊಂದು ಪೆಂಪಾರ್ಗ್ಗಮಸಾಧ್ಯಮಿಂತಿಱುವ ಕಾವಗುಣಂಗಳೆ ಸಾಜಮೆಂದು ಕೇಳ್ದರ್ಗ್ಗದೆ ಗೊಣ್ಡು ಜೇಂಕರಿಸೆ ರಾಜಗುಣಕ್ಕಳವಟ್ಟನೊಕ್ಕನಂ

42 ಪೆರ್ಗ್ಗಡೆಯೆಂಬುದೇ ಧುರಕೆ ಮಾರ್ಗ್ಗೆಡೆಯಂ ಪತಿಗೇಕಸಾಧನಂ ॥[1] ಕ ॥ ಪೆರ್ಗ್ಗಡೆತನಮಂ ಬಲ್ಲಖ್ಖಿಳ್ಗ ಮನಣಮಱಿಯರುಳಿದಮಾತ್ಯರ್ನ್ನೊಕ್ಕಂ

43 ಪೆರ್ಗ್ಗಡೆಗಂಗನ ಮನೆಯೊಳ್ಮಾರ್ಗ್ಗಡೆ ಸಂಗರದ ಮೊನೆಯೊಳೆನೆ ಮೆಚ್ಚದರಾರ್ ॥ ಕಿಱಿದಱಲಳವಡ ದಮನಂ ನೆಱೆ ಪಿರಿದಕ್ಕಾಸೆಗೆಯ್ವ

44 ಬುದ್ಧಿಯಿನಚಿತಂತೆಱೆವಿಡಿದು ಜೊನ್ನದಂದಿನ ಪೆಱೆಯಂದದೆ ನೊಕ್ಕನುತ್ತರೋತ್ತರಮಾದಂ॥[2] ಅಗಳಿಸಿದ ಕೆಱೆಗೆ ಮಾಡಿಸಿದ ಗಟ್ಟಿಗೆತ್ತಿಸಿದ ದೇವತಾ

45 ಗೃಹಕಜವಂಟಗೆಗನ್ನದಾನದೆಡೆಗೀ ಜಗದೊಳ್ಪವಣಿಲ್ಲದೇಂ ಕೃತಾರ್ತ್ಥನೊ ನೊಕ್ಕಂ ॥[2] ಸರನಿಧಿ ಬಳಸಿದುದೆಂಬಂತಿರಲಿತ್ತಾ ತಟ್ಟಕೆಱೆ

46 ಯ ಪೆರ್ಗ್ಗೆಱೆ ಸುತ್ತಲ್ಪರಿಯುನಡುವಮರ ಸೈಳದ ದೊರೆಯೆನಿಸಿದ ತೆಱದೆ ಬಸದಿ ಸೊಗಯಿಸಿ ತೋರ್ಕ್ಕುಂ ॥[2] ಪಿರಿಯ ಮಗಂ ಗು

47 ಜ್ಜಣನಂತರಾಯವಾಗಿಲ್ದನಾತನೆಯ್ದುಗೆ ಸರ್ಗ್ಗಂ ಬರಲಿಂದು ನೊಕ್ಕವೆರ್ಗ್ಗಡೆ ಹರಿಗೆಯಲೆತ್ತಿಸಿದನೆರಡು ಜಿನಮಂದಿರಮಂ ॥[2] ತನಗೆ ಪರಹಿತಮೆ ಹಿತಮೆಂ

48 ದನುಮಾನಿಸಿ ನೊಕ್ಕನೊಲ್ದು ಮಾಡಿಸೆ ವಿಶ್ವಾವನಿಯೊಳಗೆ ನೆಲ್ಲವತ್ತಿಯ ಜಿನಭವನಂ ರಿತು ವಿಮಾನಮಂ ಪೋಲ್ತಿರ್ಕ್ಕುಂ ॥[2] ಆ ನೆಲವತ್ತಿಯ ತಟ್ಟಕೆಱೆಯೆ

49 ರಡುಂ ಬಸದಿಯುಮಂ ಜಿನದಾಸಂಗೆ ಪರೋಕ್ಷವಿನಯಮಾಗೆ ಮಾಡಿಸಿದ ಪೆರ್ಗ್ಗಡೆ ನೊಕ್ಕಯ್ಯನ ಪರೋಪಕಾರಾರ್ತ್ಥಕ್ಕಂ ವೀರಕ್ಕಂ ವಿತರಣಕ್ಕಂ ಶ್ರೀಗಂಗ

50 ಪೆರ್ಮ್ಮಾಡಿದೇವರ್ಮ್ಮೆಚ್ಚಿರುಗಳೆ ಗುಡಿಚಾಮರಮೇಘಾಡಂಬರಾದಿ ರಾಜ್ಯಚಿಹ್ನಂಗಳನಿತ್ತದಕ್ಕೆ ತೆಲ್ಲಂಟಿ ಯೆಂದು ಮೊದಲ ಮೂಲಧನ ತಟ್ಟಕೆಱೆ

1 ಉತ್ಪಲಮಾಲೆ 2 ಕಂದ

51 ಕೀಳೂರು ಅಱೆಯೂರು ಹಱೆಗೆ ಕಡವೂರು ಸೀಮೊಗೆ ತಱೆಕೇರಿ ಹೆನ್ನವುರದ ಗಾವುಣ್ಡವೃತ್ತಿಯು ಮನಿರ್ಪ್ಪತ್ತು ಕುದುರೆಗವಯ್ಯೂರಾಳ್ಗ

52 ಳನಿತ್ತೂರ್ಗ್ಗಳ ಸಿದ್ಧಾಯವನಿತ್ತು ಚಂದ್ರಾರ್ಕ್ಕತಾರಂಬರಂ ಸರ್ವ್ವನಮಸ್ಯಮಾಗೆ ಪನಸವಾಡಿಯಂ ಬಿಟ್ಟನಿತು ಮಹಾಮಹಿಮೆಯಂ

53 ತಾಳ್ದಿದ ಪೆರ್ಗ್ಗಡೆ ನೊಕ್ಕಯ್ಯಂ ಮೂಲಸಂಗದ ಕ್ರಾಣೂರ್ಗ್ಗಣದ ಮೇಷಪಾಷಾಣಗಚ್ಛದ ಶ್ರೀಪ್ರಭಾ ಚಂದ್ರಸಿದ್ಧಾನ್ತಿಗರ ಗುಡ್ಡನಾ

54 ಗಿ ನಾಲ್ಕುಂ ಬಸದಿಯಂ ಮಾಡಿಸಿ ತಟ್ಟೆಕೆಱೆಯ ಬಸದಿಯಂ ಪೂಜಿಸುವರಾಗಣಗಚ್ಛದ ಸ್ಥಾನಪತಿಗಳ್ಗೆ ತಮ್ಮ ಬಳಿಯಲ್ಲಿಟ್ಟೆ

55 ಕೆಱೆಯ ಕೆಳಗೆ ಗಟ್ದಿ ಗಳೆಯ ಮತ್ತರೊಂದು ವಳಗೆಱೆಯಲು ಬೆಟ್ದಲೆ ಮತ್ತರೊಂದು ಅಲ್ಲಿ ಪಱೆಕಾರರ್ಗ್ಗೆ ಗ

56 ಟ್ದಿಗುಣಿಗನ ಮತ್ತ ಮೂಱು ಬೆಟ್ದಲೆಗಳೆಯ ಮತ್ತರೊಂದು। ಕುಂಬಾಱರ್ಗ್ಗೆ ಗಟ್ದಿ ಗುಣಿಗನ ಮತ್ತ ರೊಂದು ಬೆಟ್ದಲೆಗು

57 ಣಿಗನ ಮತ್ತರೊನ್ದು ತಟ್ಟೆಕೆಱೆಯ ಅಂಗಡಿಯ ತೆಱೆಯುಂ ಸುಂಕಮಂ ಬಸದಿಗೆ ಗಂಗಪೆರ್ಮ್ಮಾ ಡಿದೇವಂ ಬಿಟ್ಟ ॥

58 ಯಿಾ ಧರ್ಮ್ಮಮಂ ರಕ್ಷಿಸಿದಾತಂ ಸಾಸಿರ ಕಪಿಲೆಯಂ ದಾನಂ ಗೆಯ್ದಂ ಕಿಡಿಸಿದಂ ಗಂಗೆಯೊಳ್ಸಾಸಿರ ಕಪಿಲೆಯ ತಿಂದಂ ॥

59 ಸನ್ಧಿವಿಗ್ರಹಿ ದಾಮರಾಜಂ ಸಾಸನಗಬ್ಬಮಂ ಪೇಳ್ದು ಬರೆದಂ ಪೊಯ್ದಂ ಸಾನ್ತೋಜನುಂ ಪದ್ಮನುಂ ಮಂಗಳ ಶ್ರೀ ॥

60 (VII ಶಿವ 121)

ದೇವನಗೆರೆ

ಸಿದ್ದೇಶ್ವರ ದೇವಾಲಯದ ದಕ್ಷಿಣ ಕಡೆ ನೆಟ್ಟಿರುವ ಕಲ್ಲು

This damaged and fragmentary record contains only the imprecatory portion. All other details are lost.

1 . . . . ರಮಾ
2 . . . . . ಹತ್ರ ಪರತ್ರಂಯು
3 . . . ವಾನ್ಕೆಡಿಸುತಿವುಮವ . .
4 . . ತಕಸಂಯುಕ್ತನಕ್ಕುಂ ವಹು
5 . . ಕ್ತಾ ರಾಜಭಿಸ್ಸಗರಾದಿಭಿಃ
6 . . ಯದಾ ಭೂಮಿ ತಸ್ಯ ತಸ್ಯ . .
7 . . [1]ದತ್ತಂ ಪರದತ್ತಂ ವಾ ಹೋ ಹರೇ . .
8 . . . ಷಷ್ಟಿವರ್ಷ ಸಹಸ್ರಾಣಿ . .
9 . . ಜಾಯತೇ ಕ್ರಿಮಿಃ[1] ಈ ಪರಿಹಾರ
10 . . ಣ್ಣಸುರಾಸಿಗನು ಮೊದಲು . .
11 . . . . . . ಧರ್ಮ

61 (VII ಶಿವ 122)

ದೇವನಗೆರೆ

ಅದೇ ಸ್ಥಳದಲ್ಲಿರುವ ವೀರಗಲ್ಲು

This fragmentary hero-stone record refers to Taila and contains his eulogy. It may belong to c.12th century

1 . . ಯಿಂ ಪರಬಳವೆಂಬರ್ಕ್ಕಮಂಡಳಂಗಳ
2 . ಡನು . . ಬರಿ . . . . ಬರಭೂಪಂ ಪರ
3 ಮಾರ್ತ್ಥಂ ಕುವರ ತೈಲನಿಂದಂ ಕಿಱೆಯಂ ಪೊ
4 ರದಾಳ್ವ . . . . ಪರಬಳದ ವಿರಾಡಂ

1 ಶ್ಲೋಕ

5 ಪರಬಳೆ . . . ಧರೆಯೊಳು ॥ . ಕ್ಷನನೇಕ
6 . . ದೇಱೆಗೆ ವಿಚಕ್ಷಣನೆನೆ ರಾಜನೀ ತೈಲನು
7 ನಯದಿಂದ ಶಿಕ್ಷಿಸಲಭಿನವ . . ರಾ
8 ಕ್ಷಸನೆನೆ ಕುವರ ತೈಲನೆಸೆದಂ ಧರೆಯೊಳು ।[1]
9 ಪರಹಿತಚರಿತದ ವಿಶ್ವಚರಿಯ ಸಿವಪಾ
10 ದಪದ್ಮಸೇವನೆಯೊಳುರೆ ಕೆಳಿಯೆ ಯಱಗನ
11 . . . . . . ಪೊಗಳ . ಬಿರುದ ಪಾತ್ರ
12 ಗಜಕೇಸರಿಯ ॥[2] ಕೊಟ್ಟಗರಲಿಟ್ಟಂ ವೊಟ್ಟಿನ
13 ಲಟ್ಟಿದರಾಜಿ಼ಯ ಸರೀರವ . . . . . .
14 ಟ್ಟಾಸವರಸಿನದಿಂದ ನಿಟ್ಟೆಯ್ದೆ . ಪ್ಪದಿಯ
15 . . . .

62 (VII ಶಿವ 123)

ದೇವನಗೆರೆ

ಅದೇ ಸ್ಥಳದಲ್ಲಿರುವ ಎರಡನೆಯ ವೀರಗಲ್ಲು

This incomplete and damaged record refers to some battle probably fought between Bammaya-sāhaṇi of Mūḍalu-nāḍ and Sō[va?] ṇa-nāyaka. It seems to refer to a Hoyasaḷa king. The exact import is not clear. It is in characters of c.12th century.

1 ಸ್ವಸ್ತಿ ಸಮಧಿಗತಪಂಚಮಹಾಷಬ್ದ ಮಂಡಳೇಸ್ವರ
2 . . . .
3 . . . . ಕಥಾವಿ
4 ನೋದದಿಂ ರಾಜ್ಯಂ ಗೆಯುತ್ತಿ . ಮುಡಲುನಾಡ
5 . ಬಂಮಯಸಾಹಣಿ . . ಯಸಾಹಣಿ
6 . ಹೊಯ್ಸಳ . . . . ಧಾಳಿ
7 ಸೊ . ಣನಾಯಕರು ಅ . . . . ಮರೆಯ .
8 . . . ಯೊಳಬಂದು . . . .

63 (VII ಶಿವ 63)

ದುಮ್ಮಳ್ಳಿ

ಹಾಲಸಿದ್ದೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ನೆಟ್ಟಿರುವ ವೀರಗಲ್ಲು

This damaged hero-stone record refers to the death of probably Kētaya-nāyaka in a cattle-raid. The details are lost.

Thc extant date details are Kshaya, Phālguṇa śu. . ; other details are lost. It is in characters of c.13-14th century.

1 ಸ್ವಸ್ತಿಶ್ರೀ . ಕ್ಷಯಸಂವತ್ಸರದ ಫಾಲ್ಗುಣ ಸುದ . . . . .
2 ವಾರದಂದು ಬಿಲಗೌ . ರಸನ ನಚ್ಚಿ ನಾಳ್ತ್ರ . . . . . .
3 . . . . ಯಕನ ಮಗ ಕೇತಯನಾಯಕ . . . .

---

1 ಕಂದ 2 ಕಂದ;ಅಶುದ್ಧ

4 . . . . ಚ್ಚಿದಲ್ಲಿ ತಳುತಿಜಿದು ಕಾದಿ ಪಲರಂ ಕೊಂದು ಸುರಲೋ

5 . . . .

64 (VII ಶಿವ 57)

ನಿದಿಗಿ

ಗ್ರಾಮಕ್ಕೆ ಉತ್ತರ ಹೊಲವೊಂದರಲ್ಲಿ ನೆಟ್ಟಿರುವ ಕಲ್ಲು

This damaged record refers to the construction of a Jaina-basadi and registers a grant of lands to the *basadi* for worship and for the food of ascetics by Barmmi-seṭṭi, a subordinate of the Gaṅga king Permmāḍidēva after receiving the lands from the king. The recipient of the grant was Śubhakīrttidēva-bhaṭṭāraka of Mēshapāshāṇa-gachcha. The record also refers to the lineage of the Jaina ascetic Simhanandi of Mūla-saṅgha.

It refers to the rule of Tribhuvanamalla, the Chālukya king and is dated 42nd year of the Chāḷukya Vikrama era, Manmatha, Uttarāyaṅa-saṅkramaṇa. The details correspond with 25th December, 1115 A.D.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥[1] ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ

2 ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾ

3 ಭರಣಂ ಶ್ರೀಮತ್ತ್ರಿಭುವನಮಲ್ಲದೇವರ ವಿಜಯರಾಜ್ಯಮು . . . ರಾಭಿವ್ರಿದ್ಧಿಪ್ರವರ್ಧ್ಧಮಾನಮಾಚ ನ್ದ್ರಾರ್ಕ್ಕತಾರಂಬ

4 ರಂ ಸಲುತ್ತಮಿರೆ ॥ ತತುಪಾದಪದ್ಮೋಪಜೀವಿ ॥ ಉತ್ತಮಮಪ್ಪ ನಂ . . . . ತೊಂಭತ್ತಱು ಸಾಸಿರಂ ವಿಷಯಮಾ

5 ಪ್ತನನಿನ್ದ್ಯಜಿನೇಂದ್ರನಾಜಿರಂಗಾತ್ತಜಯಂ ಜಯಂ ಜಿನಮತಂ ಮತಮಾಗಿರೆ ಸಂತತಂ ನಿಜೋದಾ ತ್ತತೆಯಿಂದ ಮಾಧವಭೂಭುಜ

6 ರಾಳ್ದರುರ್ವ್ವಿಯಂ ॥[2] ಉತ್ತರ ದಿಕುತಟಾವಧಿಗೆ ತಾಗೆ ಮ[ರಂ]ದಲೆ ಮ . ಡೆ ತೊಂಡೆನಾಡತ್ತ ಪರಾಶೆಗಂಬುನಿಧಿ ಚೇ . . ಯಿಪ್ಪ . . .

7 ಕೊಂಗು ಮತ್ತಿತ್ತೊಳಗುಳ್ಳ ವೈರಿಗಳನಿಕ್ಕಿ ಪರಾವ್ರಿತ ಗಂಗವಾಡಿ ತೊಂಭತ್ತಱುಸಾಸಿರಂ . . ಲೆ ಮಾಡಿದನಿಂತುಟು ಗಂಗನುಜ್ಜುಗಂ ॥[2] . .

8 ಗಂಗನಿಂ ಭಯಮಿಲ್ಲದ ಹರಿವರ್ಮ್ಮ ವಿಷ್ಣುನ್ರಿಪನಿಂ ನಿಜದಿಂ ಬಲ್ಲೆ ತಡಂಗಾಲ ಮಾಧವನಲ್ಲಿಂ ಬಳಿ ಚುರ್ಚ್ಚುವಾಯ್ದುಗಂಗನ್ರಿಪಾಳಂ ॥[3] ಶ್ರೀಪುರುಷಂ

9 ಶಿವಮಾರಂ ಭೂಪಾಳಕ್ರಿಂತ . . . ಪನಾ ಸಯಿಗೊಟ್ಟಂ ದ್ವೀಪಾಧಿಪದೊಳರಿನ್ರಿಪ ಕೋಪಾನಳ ಶಿಖೆಯೆನಿಪ್ಪ ವಿಜಯಾದಿತ್ಯಂ ॥[3] ಮ

10 . ಯೆಱೆದ ಮಾರಸಿಂಗನಾ ಕುರುಳರಾಜಿಗಂ ಪೆಸರ್ವೆತ್ತಾ ಮರುಳಂ ತಂ ನ್ರಿಪತಿಳಕಂ ಪಿರಿಯ ಮಗಂ ಸತ್ಯವಾಕ್ಯನಚಳಿತಶೌರ್ಯ್ಯಂ[4] ಗರ್ವ್ವದ ಗಂ

11 . ವಸುಧೆಯೊಳೋರ್ವ್ವನೆ ಕಲಿ ಚಾಗಿ ಶೌಚಿ ಗುತ್ತಿಯಗಂಗಂ ದೋರ್ವ್ವಿಕ್ರಮಾಭಿರಾಮನಗುರ್ವ್ವಿನ ಕಲಿ ರಾಚಮಲ್ಲ ಭೂನ್ರಿ[ಪ]ತಿಳಕಂ ॥[3] ತೆಂಗಂ ಮು

12 . . ವಹಸಿಯ ಕೌಂಪ್ವುಂಗಂ ಪಿಡಿದಡಸಿ ಕೀಳ್ವ ನಾಮದ ಕರಿಯಂ ಪಿಂಗದೆ ನಿಲಿಸುವ ಸಾಹಸ ತುಂಗಂ ಕೇವಳಮೆ ನೆಗಳ್ದ ರಕ್ಕಸಗಂಗಂ ॥[3] ಇನ್ತೆನಿಸಿ ನೆಗಳ್ದ

---

1 ಶ್ಲೋಕ 3 ಕಂದ

2 ಉತ್ಪಲಮಾಲೆ 4 ಕಂದ;ಅಶುದ್ಧ

13 ಗಂಗವಂಶೋದ್ಭವರೊಳಾ ದಡಿಗನ ಮಗಂ ಚುರ್ಚುವಾಯ್ದಗಂಗನಾತನ ಸುತಂ ದುರ್ವ್ವಿನೀತನಾತನ ತನೆಯಂ ಶ್ರೀವಿಕ್ರಮನಾತನ ಪುತ್ರಂ ಭೂವಿಕ್ರಮಂ ತ

14 ತ್ಸೂನು ಶ್ರೀಪುರುಷಮಹಾರಾಜಂ । ತತ್ತನೆಯಂ ಶಿವಮಾರದೇವಂ । ತತ್ತನೂಭವನೆಱೆಯ . . . . ತು ಪುತ್ರಂ ಬೂತುಗಪೆ

15 ರ್ಮ್ಮಾಡಿ । ತದಾತ್ಮಜಂ ಮರುಳದೇವಂ । ತದನುಜ ಗುತ್ತಿಯಗಂಗನಾತನ ತಮ್ಮಂ ಮಾರಸಿಂಗ ದೇವನಾತನ ಮಗಂ ಕ . . ಗದೇವನಾತನ ಮಗಂ ಬರ್ಮ್ಮದೇವ

16 ನಿನ್ತು ಗಂಗವಂಶೋದ್ಭವರು ರಾಜ್ಯಂ ಗೆಯ್ಯೆ ॥ ದಕ್ಷಿಣದೇಶನಿವಾಸೀ ಗಂಗಮಹೀಮಂಡಳಿಕ ಕುಳ ಸಂಧರಣಃ ಶ್ರೀಮೂಳಸಂಘನಾಥೋ ನಾಮ್ನಾ ಶ್ರೀ

17 ಸಿಂಹನನ್ದಿಮುನಿಃ ॥[1] ಶ್ರೀಮೂಲಸಂಘವಿಯದಮ್ರಿತಾಮಳರುಚಿರುಚಿರಕೊಣ್ಡಕುನ್ದಾನ್ವಯಲಕ್ಷ್ಮೀಮಹಿತಂ ಜಿನಧರ್ಮ್ಮಲಲಾಮಂ ಕ್ರಾನೂರ್ಗ್ಗಣಂ

18 ಜನಾನಂದಕರಂ ॥[2] ಆ ಗಣದನ್ವಯದೊಳು ॥ ಮಣಿರಿವ ವನರಾಶೌ ಮಾಳಿಕೇವಾಮರಾದ್ರೌ ತಿಳಕಮಿವ ಲಲಾಟೇ ಚಂದ್ರಿಕೇವಾಮ್ರಿತಾಂಶೌ ಇವ ಸರಸಿ ಸರೋ

19 ಜೇ ಮತ್ತಭೃಂಗೀ ನಿಕಾಯಂ ಸಮಜನಿ ಜಿನಧರ್ಮ್ಮೇ ನಿರ್ಮ್ಮಳೋ ಬಾಳಚಂದ್ರಃ ॥[3] ಅವರ ಶಿಷ್ಯರು ॥ ವಿಮಳಶ್ರೀಜೈನಧರ್ಮ್ಮಾಂಬರಹಿಮಕರ

20 ನುದ್ಯತ್ತಪೋರಾಜ್ಯಲಕ್ಷ್ಮೀರಮಣಂ ಭೂಮಂಡಳಾಧೀಷನುಮುಭಯಸಿದ್ಧಾನ್ತರತ್ನಾಕರಂ ಜಂಗಮ ತೀರ್ತ್ಥಂ ಭವ್ಯವಕ್ತ್ರಾಂಬುಜಖರ ಕಿ

21 ರಣಂ ಶ್ರೀಪ್ರಭಾಚಂದ್ರಸಿದ್ಧಾನ್ತಮುನೀಂದ್ರಂ ಕ್ಷೀರನೀರಾಕರಜಳದಯಶೋವೇಷ್ಟಿತಾಶಾವಿಭಾಗಂ ॥[4] ಅವರ ಶಿಷ್ಯರು ॥ ಗುಣಿಯೆ

22 ನೆ ಜಿನಮತರಕ್ಷಾಮಣಿಯೆನೆ ಕವಿಗಮಕವಾದಿವಾಗ್ಮಿಪ್ರವರಾಗ್ರಣಿಯೆನೆ ಪಂಡಿತಚೂಡಾಮಣಿಯೆನೆ ಗುಣನನ್ದಿ ದೇವರೆಸೆದರ್ಧರೆಯೊ

23 ಳು ॥[5] ತತ್ಸಧರ್ಮ್ಮರು ॥ ಅಳವೇ ಪೇಳು ನುಡಿಯಲ್ಕೆ . ಬಿರುದ ಮಾಣು ಮಾಣೆಲೆ ಶಾಂಖ್ಯ ವಾಗ್ಭರಮಂ ನಚ್ಚದೆ ನೀನಡಂಗಿಡ . . ದೊಡಿರ್ಚ್ಛಾರ್ಬ್ಬಾಕ ನೈಯ್ಯಾಯಿಕಾ

24 ಮಲೆಯದಿರಿಂತುಮಿಟ್ಟಮೇಕೆ ಚಲದಿಂದೀಬಂದ . ಪಂ . ರ್ಮ್ಮನಂದರೆಯಲು ಶ್ರೀಗುಣಚಂದ್ರದೇವನ ಮಳಂ ವಾದೀಭಕಂಠೀರವಂ ॥[6] ತತ್ಸಧರ್ಮ್ಮರು ॥

25 ಗಂಗಾವಾರಿ ಸುಸ್ಯೆವಳಂ ಸುರಕರೀ ದಾನಾರ್ದ್ರಗಂಡಸ್ಥಳಃ ಸಂಭುಃ ಕಂಠವಿಲಗ್ನಘೋರ ಗರಳಃ ಚಂದ್ರಃ ಕಳಂಕಾಂಕಿತಃ ಕೈಳಾಸೋ ವನವಲ್ಲರೀಪರಿವ್ರಿ

26 ತಃ ಸಾಮ್ಯಂ ಕಥಂ ವಚ್ಮ್ಯಹಂ ಕಿಂ ತೂ . ಸಹ ಮಾಘಣಂದಿಯಮಿನಃಶ್ಚಿತ್ರಂ ತಪೋದ್ಯಚ್ಛ್ರಿಯಂ ॥[7] ಆ ಚಾರಿತ್ರಚಕ್ರೇಶ್ವರ ಮುನಿರಾಜರಾಜನ

27 ಶಿಷ್ಯರು ॥ ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾಕಲ್ಯಾಣಾಷ್ಟಮಹಾಪ್ರತಿಹಾರ್ಯ್ಯ ಚತುಸ್ತ್ರಿಂಶ ದತಿಶಯವಿರಾಜಮಾನ

28 ಭಗವದರ್ಹತ್ಪರಮೇಶ್ವರ ಪರಮಭಟ್ಟಾರಕ ಮುಖಕಮಳವಿನಿರ್ಗ್ಗತ . . ಸದಾದಿವಸ್ತುಸ್ವರೂಪ ನಿರೂಪಣ ಪ್ರವಣಸಿದ್ಧಾನ್ತಾಮ್ರಿತವಾರ್ದ್ಧಿ

29 ವಾರ್ದ್ಧಿತ ವಿಶುದ್ಧೇದ್ಧಬುದ್ಧಿಸಮ್ರಿದ್ಧ . . ಸಕಳಭುವನಪ್ರಸಿದ್ಧರುಂ ಶಮದಮಯಮ ನಿಯಮಿತಾಂತಃ ಕರುಣರುಂ ವಾಕ್ಸುಂದರೀಸ್ತನಮಂ

30 ಡನರತ್ನಾಭರಣರುಮಪ್ಪ ಶ್ರೀಮತ್ಪ್ರಭಾಚಂದ್ರಸಿದ್ಧಾನ್ತದೇವರೆನ್ತೆಂದಡೆ ॥ ಆಶೀದಾಶಾನ್ತರಾಳಪ್ರಥಿತ ಪ್ರಿಥು ಯಶೋವ್ಯೋಮಗಂಗಾತರಂಗಃ ಚಂಚ

31 ಚ್ಚಾರಿತ್ರ ಧಾತ್ರೀಭವದತಿಲಲಿತೋದಾರಗಂಭೀರಮೂರ್ತ್ತಿಃ ವಾಕ್ಕಾನ್ತೋತ್ತುಂಗಪೀನಸ್ತನಕಳಶ ಲಸಂ ನೂತಚೂತ[ಃ]ಪ್ರವಾಳಃ ಸಿದ್ಧಾನ್ತ ಕ್ಷೀ

32 ರನೀರಾಕರಹಿಮಕಿರಣಃ ಶ್ರೀಪ್ರಭಾಚಂದ್ರದೇವಃ ॥[8] ಅಭಿನವಗಣಧರರೂಪಂ ತ್ರಿಭುವನಜನ ವಿನುತ ಚರಣ ಸರಸಿರುಹಭ್ರಿಂಗಂ । ಶುಭಮತಿ

---

1 ಆರ್ಯೆ
2 ಆರ್ಯಾಗೀತಿ
3 ಮಾಲಿನಿ
4 ಮಹಾಸ್ರಗ್ಧರೆ
5 ಕಂದ
6 ಮತ್ತೇಭವಿಕ್ರೀಡಿತ;ಅಶುದ್ಧ
7 ಶಾರ್ದೂಲವಿಕ್ರೀಡಿತ
8 ಸ್ರಗ್ಧರೆ

33 ತ್ರೈವಿದ್ಯಾಸ್ಪದನುಭಯಕವೀನ್ದ್ರೋತ್ತಮಂ ಪ್ರಭಾಚಂದ್ರಬುಧಂ ॥[1] ಅವರ ಸಧರ್ಮ್ಮರು ॥ ಸಸಿ ವಿಶದಕೀರ್ತ್ತಿ ನಿರ್ಮ್ಮದನಸದ್ರಿಶಗುಣರತುನವಾರ್ಧ್ಧಿ

34 ಕ್ರಾನ್ತೂರ್ಗ್ಗಣಸದ್ಬಿಸರುಹವನಾರ್ಕ್ಕನೆಂಬುದು ವಸ್ಮತಿಯೊಳನಂತವೀರ್ಯ್ಯಸಿದ್ಧಾಂತಿಗರಂ ॥[1] ತತ್ಸಧ ರ್ಮ್ಮರು ॥ ಮನವಚನಕಾಯಗುಪ್ತಿಯನ

35 ನುನಯದಿಂ ತಳೆದು ಪಂಚಸಮಿತಿಯ ವಶದಿಂದನುವಶನಾದ ತಪೋನಿಧಿ ಮುನಿಚಂದ್ರಬ್ರತಿಪನ ಖಿಳರಾದ್ಧಾನ್ತೇಶಂ ॥[1] ಇನ್ತೆ[ನಿ]ಸಿ ನೆಗರ್ತ್ತೆಯಂ ತಳೆದ ಶ್ರೀ

36 ಮತು ಪ್ರಭಾಚಂದ್ರಸಿದ್ಧಾನ್ತದೇವರ ಗುಡ್ಡಂ ಭುಜಬಳಗಂಗ ಪೆರ್ಮ್ಮಾಡಿ ಬರ್ಮ್ಮದೇವ ॥ ಬಳವ ದ್ವೈರಿಗಳಂ ಪಡಲ್ವಡಿಸಿ ಗೆಲ್ದುಗ್ರಾಜಿಯೊಳು ಮಾಣ್ದನೇ

37 ಚಲದಿಂದಂ ಪರಿಯಿಟ್ಟು ವೈರಿ ಪುರಮಂ ತತ್ಕೋಟೆಯಂ ತದ್ಮಹೀತಳಮಂ ಕೊಂಡು . . . ತ್ರಿಬಂಣಿಸ್ವಿನಂ ಶ್ರೀಬರ್ಮ್ಮದೇವಂ ಮಹೀತಳಮಂ ತೋಳು

38 ವಲದಿಂ ನಿಮಿರ್ಚ್ಚಿದನಿದೇಂ ಪೆರ್ಮ್ಮಾಡಿ ಶೌರ್ಯ್ಯಾತ್ಮನೋ ॥[2] ಭರದಿಂದಾಂತದ . . . . ಗಶರಣೆಂದ ನ್ರಿಪಂಗವೆರದುಬಂದನರಂಗಂ ಸುರಗಿರಿವಜ್ರಾಗಾ

39 ರಂ ಸುರಭೂಜಂ ಬರ್ಮ್ಮದೇವನದಟರದೇವಂ ॥[1] ಇನ್ತೆನಿಸಿದ ಬರ್ಮ್ಮದೇವನ ಪಟ್ಟಮಹಾದೇವಿಯೆಂ ತೆಂದಡೆ ॥ ಜಿನೇಂದ್ರ ಪಾದಾಂಬುಜಮತ್ತಭ್ರಿಂಗೀಗು

40 ಣಾವಳೀಭೂಷಣಭೂಷಿತಾಂಗೀ। ನಿತಂಬಿನೀನಾಂ ಕಳಶಾಯಮಾನಾ ವಿರಾಜತೇ ಗಂಗಮಹಾಧಿ ದೇವೀ ॥[3] ನಿಜವೆನಿಸಿ ನೆಗರ್ತ್ತೆಯ ಮಹಾಸ

41 ತಿಗುತ್ಸವಮಂ ನಿಮಿರ್ಚ್ಚುವಾತುಮಜರೆನಿಸಿರ್ದ್ದ ತಮ್ಮುತೊಡಮಾಡಿದೆ . . . . ೦ಸ ಜಯದೆ ಸತ್ಯ . . ನ್ರಿಪನುಂ ಕಲಿ ರಕ್ಕಸಗಂಗದೇ

42 ವನುಂ ಭುಜಬಳಗಂಗ ಭೂಭುಜನ್ಮಾರ್ಜ್ಜಿಸಿದರ್ಜ್ಜಸಮಂ . . . ರನ . . ರಂ ॥[4] ಸ್ಥಿರನೇ ಮೇರು ಗಿರೀಂದ್ರನೊಳ್ಗಣಸುವಂ ಗಂಭೀರನೇ ವಾರ್ದ್ಧಿಯೊಳ್ಪುರುಡಿಪ್ಪಂ . . .

43 ಕಲಿಯೇ ಸುರೇಂದ್ರ ಸುತನಂ ಮೆಚ್ಚಂ ಮಹಾಚಾಗಿಯೇ ಸುರಭೂಜಕ್ಕೊರೆಗಟ್ಟುವಂ ಚದುರನೇ ಪಾಂಚಾಳನಂ ಗೆಲ್ದನಂದಿರದೀ ಧಾರಿಣಿ ಬಣ್ಣಿಕುಂ ರಣಜ

44 ಯಪ್ರೋತ್ತುಂಗನಂ ಗಂಗನಂ ॥[2] ನುಡಿದುದೆ ನನ್ನಿ ಮಾಡಿದುದೆ ಶಾಸನಮಿತ್ತುದೆ ರಾಮರೇಸು ಮಾರ್ಪ್ಪಿಡಿದುದೆ ವಜ್ರಲೇಪ ಮುಱಿದಿರ್ದ್ದುದೆ ಮ್ರಿತ್ಯು । ಪರೋಪಕಾರದೊಳ್ನ . .

45 ಡೆಮುದೆ ಬಟ್ಟೆ ಸದುಗುಣಮೆ ಮೆಯ್ಯೆನೆ ನಿನ್ನವೊಲಿನ್ತುನೀತಿಯೊಳು ನಡೆವ ನ್ರಿಪೇಂದ್ರನಾವನಿಳೆ ಯೊಳು ಕಲಿಗಂಗಭೂಪತೀ ॥[5] ಆತನ ತಮ್ಮಂ ॥ ಗಜರಿಪುವಿಷ್ಟ

46 ರಾದಿ ವಿಭವೋದಯ ಪಾರ್ಶ್ವಜಿನೇಂದ್ರಪಾದಪಂಕಜಮದಭ್ರಿಂಗ ಗಂಗಕುಳಮಂಡನ ದಳಿತವೈರಿ ವರ್ಗ್ಗ ಭಾವಜನಿಭಮೂರ್ತ್ತಿ ದಿಗ್ವಲಯವರ್ತ್ತಿತಕೀರ್ತ್ತಿ ಸ

47 ಮಸ್ತಧಾತ್ರಿಯೊಳ್ಭುಜಬಳಗಂಗಭೂಪನಿನ . . . . . ಮಂಡಳಿಕಭೈರವ ॥[4] ಆತನ ಪಟ್ಟಮಹಾದೇವಿ ॥ ಪುಟ್ಟಿದ . . . . ಪಟ್ಟಂ ಭೂಪಂಗೆ ಗಂಗವಾಡಿ

48 ಗೆ ತಳದಳ್ಪಟ್ಟಮನೆಂತೆಂದಡೆ ಗಂಗನ ಪಟ್ಟಮಹಾದೇವಿ . . . . .[6] ವಿಯರ್ಗ್ಗಂ ಭುಜಬಳಗಂಗ ದೇವನಗ್ರತನೂಜನೆನ್ತೆಂದಡೆ ॥ ಕಲಿಯನದಿರ್ದ್ದ . .

49 ಲೆಂದು ಮಿರಿದೆತ್ತಿದ ಬಾಹುವೆರಾ . . . . . ಲ್ಲಳದೇದಿ . . . . ಮಜ್ . . . ಗಲುಸಲೆ . . . . ಗೆಯನಾರಳವಿ . . . . . ಗಂಗನಿನ್ತುಮಂಡಳಿಕ .

50 ಳಪ್ರದ . ರಿವೆಸರಂದೆಸೆಯನ್ತುವರಂ ನಿಮಿರ್ಚ್ಚಿದ . . ವದಾಜ್ಞಾಲತೆ ಪರ್ವ್ವಿದೆಣ್ದೆಸೆಯೊಳಂ ವಿದ್ಯುಜ್ಜಯಸ್ತಂಭವಿಂತಿವೆನಲು ದಿಗ್ಗಜವರ್ತ್ಥಿ . . . . ಕಟ್ಟಲು ಕೆತ್ತಿದುತ್ತುಂಗ ಹಸ್ತವ

51 ನಾಂತನ್ನ ಬಳಕ್ಕೆದೋರ್ಪ್ಪ ನೆವದಿಂ ಕೋದಣ್ಡದತ್ತಣ್ಗೆ ನಿಳುವ ನೀನಲಿಯೆ ಗಂಗನಾತ್ಮಕರ . ೦ ಸಂಗ್ರಾಮರಂಗಾಗ್ರದೊಳು ॥[2] ಜನ . . . . . ಪಮಖಿಳಾಶಾದೇವತಾಪಾಂ

52 ಗರಶ್ಮಿಸಹಸ್ರಂ ಚಮರಂಕಕರೀಂದ್ರರಿಪುಬಲವಿಕ್ರಮಂ . . ನ ದಾಗೆ ಸುಸಾಮ್ರಾಜ್ಯ . ತಾಭಿವ್ರಿದ್ಧಿ ವಿಭವಂ ಮೆಚ್ಚುತ್ತಿರಲು . . . . . ರಿರೆ ಸತ್ಯಗಂಗನೆಸೆದಂ ವಿಶ್ವಾವನೀಭಾಗ

1 ಕಂದ
2 ಮತ್ತೇಭವಿಕ್ರೀಡಿತ
3 ಉಪೇಂದ್ರವಜ್ರ
4 ಚಂಪಕಮಾಲೆ;ಅಶುದ್ಧ
5 ಚಂಪಕಮಾಲೆ
6 ಕಂದ(?)

53 ದೊಳು ॥[1] ಸ್ವಸ್ತಿ ಸತ್ಯವಾಕ್ಯಕೊಂಗುಣಿವರ್ಮ್ಮಧರ್ಮ್ಮಮಹಾರಾಜಾಧಿರಾಜ ಪರಮೇಶ್ವರಂ ಕುವಳಾಲ ಪುರವರಾಧೀಶ್ವರಂ ನಂದಗಿರಿನಾಥ . . . . ಮದಗಜೇಂದ್ರಲಾಂಚ್ಛನಂ ಚತು

54 ರವಿರಿಂಚ್ಛನಂ ಪದ್ಮಾವತೀದೇವಿ ಲಬ್ಧವರಪ್ರಸಾದಂ ವಿಚಕಿಳಾಮೋದಂ ನನ್ನಿಯ . . . ತ್ತರಂಗಂ ಗಂಗಕುಳಕುವಳಯಶ . ವೇಂದ್ರಂ ದರ್ಪ್ಪೋದ್ಧತಾರಾತಿವನ

55 ಜವನ ವೇದಂಡಂ ಕುಸುಮಕೋದಂಡಂ ಗಂಡರಗಂಡಂ ದುಟ್ಟರಗಂಡಂ ನಾಮಾದಿಸಮಸ್ತ . . . . . ಶ್ರೀಮಂನನ್ನಿಯಗಂಗಂ . . . . . . ಯನೆಲೆವೀಡಿನಲು ಸುಕಸಂ

56 ಕಥಾವಿನೋದದಿಂ ರಾಜ್ಯಂ ಗೆಯ್ಯುತ್ತಿರೆ ॥ ಶ್ರೀಮತು ಕಳಂಬೂರುನಗರಾಧಿಪತಿ ಪಟ್ಟಣಸ್ಥ . . . . . . ಲು ಮಾಡಿಸಿದ ಬಸದಿ ಯೆನ್ತೆಂದಡೆ ॥

57 ಇದು ಭೂದೇವತೆ ಹೊತ್ತ ಹೊಂಗಳಶಮೋ ಶ್ರೇಯಸ್ಸುಧಾಭಾರಪೂರದಿನಾ . . . . ತ್ರಯಮಂಡನಾಸ್ಪದಮೋ ತಾನೆಂದು . . . . .

58 ಲೋಕಂ ಮನೋಮುದದಿಂ ಬಣ್ಣಿಸೆ ಬರ್ಮ್ಮಿಸೆಟ್ಟಿ ಜಿನಚೈತ್ಯಾವಾಸಮಂ ಮಾಡಿದಂ ॥[1] ಭುವನ . . . ಯ್ಯಾಗೆ ಮಹತ್ವದಿಂ . . . ದುಚಾತು

59 ರ್ವ್ವರ್ಣ್ಣಸಂಘಕ್ಕಭೀಷ್ಟಮನಿತ್ತೆತ್ತಿಸಿ ಜೈನಗೇಹಮನನುತ್ಸಾಹಸಂದೋಹ . . . . ದನುಜನಿ ಷ್ಟಶಿಷ್ಟಜನ ಕಳ್ಪಕುಜಂ ಸದ

60 ನೋಪಶೋಭಿತಾಭ್ಯುದಯ ವಿಭೂತಿಗಾಸ್ಪದನುದಾರ ಕಳಾಧಿಪನೀತನೆಂಬಂ ಹೆ . . . . ದನುದಿತೋದಿತಂ ನೆಗಳ್ದನೀ ವಸುಧಾತಳದೊ

61 ಳು ನಿರಂಣ್ಣರಂ ॥[2] ಬರ್ಮಿಸೆಟ್ಟಿಯ ವನಿತೆ ॥ ತನಗನುವಶೆಯೆನಿಸಿ ಜಗಜ್ಜನ ಸಂಸ್ತುತ ಶೀಳಗುಣಗಣಾಳಂ . . . . ರಾಜಿಸುತಿರ್ದ್ದಳು ॥[3] ಅವರಿರ್ವ್ವರ್ಗ್ಗಮಗಣ್ಯಪು

62 ಣ್ಯಜನಿತ ಶ್ರೀರಾಯುರಾರೋಗ್ಯವೈಭವಸಂಪನು ಮಹಿಮೌಘಭವಪ್ರಭೂತೆ . . . . ಯ ಮಾಡುತಿರ್ಪ್ಪವಿಳಾಸಂ ಬೆರಸೊ

63 ಳ್ಪುವೆತ್ತನವನೀಚಕ್ರಂ ಮನಂಗೊಳ್ವಿನಂ ॥[1] ಅನ್ತವರ್ಮ್ಮಾಡಿಸಿದ ಬಸದಿಯ ಪೂಜಾವಿಧಾನ . . . . ರ್ಷಿಯಗ್ಗ್ರಾಹಾರದಾನಕ್ಕಂ ಶ್ರೀಮಚ್ಛಾಳು

64 ಕ್ಯವಿಕ್ರಮಕಾಲದ ೪೨ ನಾಲ್ವತ್ತೆರಡನೆಯ ಮನುಮಥಸಂವತ್ಸರದುತ್ತರಾಯಣ ಸಂಕ್ರ . . . . ಲಾಪುಣ್ಯತಿಥಿಯಂದು ಶ್ರೀಮಂನ್ನನ್ನಿಯ

65 ಗಂಗಪೆರ್ಮ್ಮಾಡಿದೇವನಿಂದಂ ಕುಡಲು ಪಡೆದು ಬರ್ಮ್ಮಿಸೆಟ್ಟಿಯರ್ಮ್ಮೇಷಪಾಷಾಣಗಚ್ಛಾಂಬರ ಶರಶ್ಚಂದ್ರ . . . ಶುಭಕೀರ್ತ್ತಿದೇವಭಟ್ಟಾರಕರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಸರ್ವ್ವನಮಸ್ಯಂ ಸರ್ವ್ವಬಾಧಾಪರಿಹಾ

66 ರವಾಗಿ ಬಸದಿಗೆ ಕೊಟ್ಟ ವೃತ್ತಿ ಊರಿನ್ದಂ ಮೂಡಣ ದೆಸೆಯಿಂ ಸವಣನಕೆಱೆಯ ಕೆಳಗೆ ಗಳ್ದೆ ಗಳೆಯಲು ಮತ್ತರು ೨ ಆ ಗದ್ದೆಯಲು ಕೂಡಿದ ದಿಂಣೆದಿ . ದೆ ಕೆಱೆಯ ಒತ್ತು ನಾ ಹ

67 . ಗಾಗಿದ್ದ . . ಸಾಲಕೆಱೆಯ ಕೋಡಿಯಿಂದಂ ಕೆಳಗೆ ಗಳ್ದೆಯಲು ಮತ್ತರು ೧ ಆ ಕೋಡಿಯಿಂದೊಳಗಾದ ದೋಂಟಸ್ಥಳದ ನಿವಳಿಯಲು ಬೆದ್ದಲು ಗಳೆಯ ಮತ್ತರು ೭ ಅದಕ್ಕೆ ಸೀಮೆ ಬಡಗಲ ಬಿ

68 ಳಿಕೆಯ . . . . . ಲಗಡಿ ಈಶಾನ್ಯದ ದೆಸೆಯಿಂ ವೋಣಿಯ ಮೊಟ್ಟಱ ಮೂಡಲದಿನ್ನೆಯ ಹೊಲಗಡಿಯಿಂದಂ ತೆಂಕ ಬರಲು ಬಿಲ್ಲಱ ಅಲ್ಲಿಂದಂ ಹಡುವಲು ಸವಣನಕೆಱೆಯ ತಾಯಿವಳ್ಳಂ ಮೇರೆ ಹಿರಿ

69 ಯ ಕೆಱೆಯ ಕೆಳಗೆ ತೋಂಟ ಕಂಮ್ಮ ೧೨ ಮನೆಯ ನೆಲಸಣಂ ೧೨ ಆ ತೆಲ್ಲಿಗನ ಗಾಣ ೧ ಇನ್ತು ಬಿಟ್ಟ ದತ್ತಿಯಂ ಪ್ರತಿಪಾಳಿಸಿದ ಮಹಾಪುರುಷಂಗೆ ಪ್ರಯಾಗೆ ವಾರಣಾಸಿ ಕುರುಕ್ಷೇತ್ರಂಗಳೊಳ್ಸಾ

70 ಯಿರ ಕವಿಲೆಯ ಕೋಡುಂ ಕೊಳಗಮಂ ಹೊನ್ನಲು ಕಟ್ಟಿಸಿ ದಾನಂಗೊಟ್ಟ ಫಳಮನೆಯ್ದುವಂ ॥ ಬಹುಭಿರ್ವ್ವಸುಧಾ ದತ್ತಾ ರಾಜಭಿಃ ಸಗರಾದಿಭಿಃ ಯಸ್ಯ ಯಸ್ಯ ಯದಾ ಭೂಮಿ ತಸ್ಯ ತಸ್ಯ ತದಾಫಳಂ ॥[4] ಸಾಮಾನ್ಯೋ

---

1 ಮತ್ತೇಭವಿಕ್ರೀಡಿತ
2 ಚಂಪಕಮಾಲೆ
3 ಕಂದ
4 ಶ್ಲೋಕ

71 ಯಂ ಧರ್ಮ್ಮಸೇತುರ್ನ್ನೃಪಾಣಾಂ ಕಾಳೇ ಕಾಳೇ ಪಾಳನೀಯೋ ಭವದ್ಭಿಃ ಸರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇಂದ್ರಾನು ಭೂಯೋ ಭೂಯೋ ಯಾಚತೇ ರಾಮಭದ್ರಃ॥[1] ಇನ್ತೀ ಧರ್ಮ್ಮಮನಳಿದ ಮಹಾ

72 ಪಾತಕಿಗನರ್ಗ್ಘ್ಯತೀರ್ತ್ಥಂಗಳೊಳ್ಸಾಯಿರ ಕವಿಲೆಯಂ ಕೊಂದ ದೋಷಮಕ್ಕು ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇದ್ಧಿ ವಸುಂಧರಾಂ ಷಷ್ಟಿರ್ವ್ವರ್ಷಸಹಶ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ॥[2] ದಯೆ

73 ಯಿಂದಿಂತಿದ ನೆಯ್ದೆ ಕಾವ ಪುರುಷರ್ಗ್ಗಾಯುಂ ಮಹಾಶ್ರೀಯುಮಕ್ಕೆ ಯಿದಂ ಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರಂಗಳೊಳಲು ವಾರಣಾಸಿಯೊಳೆಳ್ಕೋಟಿ ಮುನೀಂದ್ರರಂ ಕವಿಲೆಯಂ ವೇ

74 ದಾಢ್ಯರಂ ಕೊನ್ದುದೊಂದಯಸಂ ಸಾರ್ಗ್ಗುಮಿದೆಂದು ಸಾಱಿದಪುದೀ ಶೈಳಾಕ್ಷರಂ ಧಾತ್ರಿಯೊಳು ॥[3]

65 (VII ಶಿವ 58)

ನಿದಿಗಿ

ದೊಡ್ಡಕೆರೆ ಏರಿಯ ಮೇಲೆ ನೆಟ್ಟಿರುವ ಕಲ್ಲು

This worn out epigraph in characters of 12th century seems to refer to the *nisidhi* of Dāseya-nāyaka of Elavaṭṭi and son of a *gauḍa* (whose name is lost). It also refers to an ascetic (name lost) belonging to Mula-saṅgha, Dēsiya-gaṇa, Koṇḍa-kundānvaya and Postaka-gachchha.

1 ಸ್ವಸ್ತಿ ಸಮಸ್ತಸಕಳಗುಣಸಂಪಂನರಪ್ಪ ಶ್ರೀಮೂಲ

2 ಸಂಘ ದೇಸಿಯಗಣ ಕೊಂಡಕುಂದಾನ್ವಯ ಪೊಸ್ತಕಗಚ್ಛದ

3–4 (ಸವೆದಿದೆ.)

5 ಗೌಡನ ಮಗ ಎಲವಟ್ಟಿಯ ದಾಸೆಯನಾಯಕನ ನಿಸಿದ್ಧಿಯಪ್ಪ ಭೂಮಿ

6 ಯಿದು ಮಂಗಳಮಹಾ ಶ್ರೀ ಶ್ರೀ ಶ್ರೀ

66 (VII ಶಿವ 59)

ಪಿಳ್ಳಂಗೆರೆ

ಪಾಳು ಈಶ್ವರ ದೇವಾಲಯದಲ್ಲಿರುವ ಲಿಂಗದ ಪೀಠದ ಮೇಲೆ

The purport of this damaged record cannot be made out. It refers to the cyclic year Āṅgīrasa.

1 ಪಲವ . ನಾಥವಿಮುನಿ ಮಾಡಿದವಿದ್ಯ

2 ಮದು . ಫಳಾ . . . ನಡಿತರಜಿಹೊಗ

3 . ದುಬಿಳದಕಾಂಗಿರಸದವತ್ಸರ

4 . . ಪರಿಗತಿವಿಮಿರ್ದು . ಧಮಂಚಿನಾ .

5 ಬಿಳದಮಲೆ ॥ . ದ . ಕೆಂಚರ ತಿಂಮಕು

67 (ರಿ 1923–112)

ಪುರದಹಾಳು

ಊರಿಗೆ ಸಮೀಪದಲ್ಲಿರುವ ಅಡವಿಯಲ್ಲಿರುವ ಬಂಡೆಯ ಮೇಲೆ

This slightly damaged hero-stone record belongs to the reign-period of the Chālukya king Bhūlōkamalla and is dated Śaka 1082, Vikrama, Vaiśākha śu.3, Monday regularly corresponding to 1160 A.D., April 11.

---

1 ಶಾಲಿನಿ 2 ಶ್ಲೋಕ 3 ಮತ್ತೇಭವಿಕ್ರೀಡಿತ

It records a gift of two *gadyāṇas* to *haḍavaḷa* Boppaṇa, son of *haḍavaḷa* Jakkaṇṇa and Boppakka as *nettarugoḍage* who fought and died in a battle after killing Tailahadēva the Kadamba and another person (whose name is lost) by Jagadēvarasa, chief of Sāntaḷige-1,000 and Banavāsi-12,000.

1 ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿರಾಜ ಪರ
2 ಮೇಸ್ವರಂ ಪರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಭೂಲೋಕಮಲ್ಲದೇವರು ರಾ
3 ಜ್ಯಂ ಆಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ ಸ್ವಸ್ತಿ ಸಮಸ್ತಪ್ರಶಸ್ತಿಸಹಿತಂ ಶ್ರೀ
4 ಮನ್ಮಹಾಮಂಡಳೇಶ್ವರಂ ಉತ್ತರಮಧುರಾಧೀಸ್ವರಂ ಪಟ್ಟಿಪೊಂಬುಚ್ಚಪುರವರಾ
5 ಧೀಸ್ವರಂ ಪದ್ಮಾವತೀಲಬ್ಧವರಪ್ರಸಾದನುಂ ಮ್ರಿಗಮದಾಮೋದ ಶ್ರೀಮನ್ಮಹಾಮಂ
6 ಡಳೇಸ್ವರಂ ಜಗದೇವರಸರು ಸಾಂತಳಿಗೆಸಾಯಿರಮುಮಂ ಬನವಾಸಿಪನ್ನಿರ್ಚ್ಛಾ
7 ಸಿರಮುಮಂ ಸುಖಸಂಕಥಾವಿನೋದದಿಂ ರಾಜ್ಯಂ ಗೆಯ್ಯುತ್ತಮಿರೆ ಸಕವರಿಸ
8 ೧೦೮೨ನೆಯ ವಿಕ್ರಮ ಸಂವತ್ಸರದ ವೈಶಾಖ ಸುದ್ಧ ೩ ಸೋಮವಾರದಂದು . . . .
9 ಪುಟ್ಟಿದ ಪ್ರಭು ಕಪ್ಪಗೌಡನ ಬೆಸರಿಗಂ ಹಳವಳ ಹುಲಿಯ
10 ಮನ ತಮ್ಮ ಹಡವಳ ಜಕ್ಕಣ್ಣಂಗಂ ಆತನ ಸತಿ ಬೊಪ್ಪಕ್ಕಗಂ ಪುಟ್ಟಿದ ಹ
11 ಡವಳ ಬೊಪ್ಪಣಂ ಬಂದು ತನ . . ಕೊಂಡಾಡುತ್ತಮಿರೆ ಶ್ರೀಮಜ್ಜಗದೇವರಸ
12 . . . . ಯಲಿರೆ ಬಟ್ಟಕಳದ ತೈಲಹದೇವ . . . . . . ಸಕರದ ಸಹಿವೆಯ
13 ಕೊಂದು ಸುರಲೋಕಪ್ರಾಪ್ತನಾದಡೆ ಶ್ರೀಮಜ್ಜಗದೇವರಸರು ನೆತ್ತರುಗೊಡಗೆಯಾ
14 ಗಿ ಗದ್ಯಾಣ ಎರಡು ಬಿಟ್ಟರು ಇಂತೀ ಧರ್ಮ್ಮವನಳಿದವ ಪಂಚಮಹಾಪಾತಕನಕ್ಕು

68 (VII ಶಿವ 64)

ಪುರಲೆ

ವೀರಸೋಮೇಶ್ವರ ದೇವಾಲಯದ ಮುಂದೆ ಬಿದ್ದಿದ್ದ ಕಲ್ಲು[1]

This slightly damaged inscription refers to the rule of the Chālukya king Tribhuvanamalla. It also contains the genealogy of the Hoysaḷa kings upto Nārasimha I. Further, it gives the detailed account of the origin of the Gaṅga family from the Iksvāku-kula. Then it gives the pedigree of Jaina *gurus* from Simhanandi of Mūla-saṅgha upto Mādhavachandra.

It states that when Hermmāḍidēva, son-in-law of Ereyaṅga-Hoysaḷa, was in the residence of Harige, ruling the Eḍedore-[Maṇḍali] Thousand, he got erected a *chaityālaya* in Kuntaḷapura and granted custom dues and incomes of certain villages with the permission of the *prabhu-gāuṇḍas* of Eḍedore and Maṇḍali-nāḍ for the worship and for other services of the god. The date *viz.*, Saka 989, Plavaṅga, Pushya śu.13, Thursday, Uttarāyaṇa-saṅkramaṇa corresponds to Thursday, 27th December, 1067 A.D. There was no saṅkramaṇa.

The grant was made over to Prabhāchandra-siddhāntadēva. Further, it states that Satya-Gaṅgadēva, son of Gaṅgadēva and Gaṅga-mahādēvi, got erected the Gaṅga-jinālaya at the Kuruḷiya-tīrtha when he was governing at Eḍehaḷḷi and granted certain lands to Mādhavachandradēva in order to maintain the services in the *jinālaya*

1 ಈಗ ಇದು ಶಿವಮೊಗ್ಗ ವಸ್ತುಸಂಗ್ರಹಾಲಯದಲ್ಲಿದೆ.

in the Śaka year 1054, Nandana, Chaitra śu.15, Sunday, lunar-eclipse. These details correspond to Friday, 15th March 1112 A.D. There was no eclipse. It also registers other grants to the same *basadi* by other individuals (named) to Bāḷachandradēva.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಚನಂ । ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥[1] ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀತ್ರಿಭುವನಮ

2 ಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂ ಸಲುತ್ತ ಮಿರೆ ॥ ಎನಗೆಂದಾ ವಿಕ್ರಮಾಂಕಂ ಗಡ ನಿಗಳಮನಿಕ್ಕಿಟ್ಟನೋವೋವೊ ಕೀನಾಶನ ವೋಲೆಯ್ತಂದು ಕಾಯ್ಪಿಂ ಕಿಳದೊಂ ತಲೆಯನಾ ವೀರನೇಂ ಮಾಣನೇಗೆಯ್ವೆನೆನುತ್ತಂ ಭೀತಿಯಂ ಬಟ್ಟದನೆ ಕನಸು

3 ಗಂಡುಮ್ಮಳಂಗೊಂಡು ಚೋದ್ಯಂ ನನಸೆಂದೆಚ್ಚತ್ತಿರುತ ತಂನೆಯ ತಲೆಯನತಿ ಭ್ರಾನ್ತನಂದಿಂದು ನೋಳ್ಕುಂ ॥[2] ತತ್ಪಾದಪದ್ಮೋಪಜೀವಿ ॥ ಶ್ರೀಮದೆಱೆಯಂಗಹೊಯಿಸಳನಳಿಯಂ ಹೆಮ್ಮಾಡಿಯರಸನ ಕೀರ್ತ್ತಿವಿಶಾರದ ಮೆಂತೆಂದಡೆ ॥ ಇವನಿಂದಂ ಕಂಡೆನೇಳುಂ ಕಡಲ ಕಡೆಯನೇಳುಂ ಕುಭೃತ್ಕೂಟಮಂ ದಿಗ್ದೇವದಂತಿಬ್ರಾತ

4 ಮಂ ಲೋಕದ ಪವಣನೆನುತ್ತುಂ ಯಶೋಲಕ್ಷ್ಮಿಮೇವೆರ್ಚ್ಚಿ ತನ್ನಾ . ತನ್ನೊಂದಜೆವಿನಳವು ತನ್ನಾರ್ಪ್ಪು ತನ್ನೇಳ್ಗೆ ತನ್ನ ಮನೋವಿಳಾಸಂ ತನ್ನ ಪೆಂಪತ್ತಳೆಗಮೆನಿಸಿದಂ ಹೆರ್ಮ್ಮ ಮಾನ್ಧಾತಭೂಪಂ ॥[2]

5 ಸ್ವಸ್ತಿ ಶ್ರೀಜನ್ಮಗೇಹಂ ನಿಭೃತನಿರುಪಮೌರ್ವ್ವಾನಳೋದ್ದಾಮತೇಜಂ ವಿಸ್ತಾರೋಪಾತ್ತಭೂಮಣ್ಡಳಮಮಳ ಯಶಶ್ಚಂದ್ರಸಂಭೂತಿಧಾಮಂ ವಸ್ತುಬ್ರಾತೋದ್ಭವಸ್ಥಾನಕಮತಿಶಯ

6 ಸತ್ವಾವಳಂಬಂ ಗಭೀರಂ ಪ್ರಸ್ತುತ್ಯಂ ನಿತ್ಯಮಂಭೋನಿಧಿನಿಭಮೆಸೆಗುಂ ಹೊಯ್ಸಳೋರ್ವ್ವೀಶವಂಶಂ ॥[3] ಅದಱೊಳು ಕೌಸ್ತುಭದೊಂದನರ್ಗ್ಘಗುಣಮಂ ದೇವೇಭದುದ್ದಾಮ

7 ಸತ್ವದಗುರ್ವ್ವಂ ಹಿಮರಸ್ಮಿಯುಜ್ವಳಕಳಾಸಂಪತ್ತಿಯಂ ಪಾರಿಜಾತದುದಾರತ್ವದ ಪೆಂಪನೋರ್ವ್ವನೆ ನಿತಾಂತಂ ತಾಳ್ದಿ ತಾನಲ್ತೆ ಪುಟ್ಟಿದನುದ್ವೇಜಿತವೀರವೈರಿವಿನಯಾದಿತ್ಯಾವನೀ

8 ಪಾಳಕಂ ॥[4] ಮದವದ್ಭೂಪಬಳಾನ್ಧಕಾರಹರಣಂ ತೇಜೋಧಿಕಂ ಸಂತತಾಭ್ಯುದಯಂ ಸಂಹೃತವಿದ್ವಿಷ ತ್ಕುವಳಯಂ ಶ್ರೀಕಂ ಸುಹೃಚ್ಚಕ್ರಸಮ್ಮದಸಂಪಾದನಹೇತು ಸತ್ಪಥಗತಂ ಪದ್ಮೋ

9 ದ್ಭವೋದ್ಭಾವಕಂ ವಿದಿತಾರ್ತ್ಥಾನುಗನಾಮನಲ್ತೆ ವಿನೆಯಾದಿತ್ಯಾವನೀಪಾಳಕಂ ॥[4] ವಿನಯಾದಿತ್ಯನೃಪಂ ಸಜ್ಜನರ್ಗ್ಗಂ ದುರ್ಜ್ಜನರ್ಗ್ಗಮಾತ್ಮವಿನೆಯಂ ತೇಜಂ ಜನಿಯಿಸೆ ನಯಮಂ ಭಯಮಂ ವಿನೂ

10 ತನಾಳ್ದೊಂವಿಶಾಳ ಭೂಮಣ್ಡಳಮಂ ॥[5] ಆ ವಿನಯಾದಿತ್ಯನ ವಧು ಭಾವೋದ್ಭವಮಂತ್ರದೇವತಾಸಂ ನಿಭೆ ಸದ್ಭಾವಗುಣಭವನಮಖಿಳಕಳಾವಿಳಸಿತೆ ಕೆಳಯಬರಸಿಯೆಂಬಳು ಪೆಸರಿಂ ॥[5] ಆ ದಂಪತಿಗೆ ತನೂಭವನಾದೊಂ ಸಚಿಗಂ

11 ಸುರಾಧಿಪತಿಗಂ ಮುಂನ್ನೆಂತಾದಂ ಜಯಂತನಂತೆ ವಿಷಾದವಿದೂರಾಂತರಂಗನೆಱೆಯಂಗನೃಪಂ ॥[5] ವೃ ॥ ಆತಂ ಚಾಳುಕ್ಯಭೂಪಾಳಕನ ಬಲ(ದ)ಭುಜಾದಣ್ಡಮುದ್ದಂಡಭೂಪಬ್ರಾತಪ್ರೋತ್ತುಂಗಭೂಭೃದ್ವಿದ ಳನಕುಳಿಶಂ ವಂದಿಸ

12 ಶ್ಯೌಘಮೇಘಂ ಸ್ವೇತಾಂಭೋಜಾತದೇವದ್ವಿರದನಶರದಭ್ರೇಂದುಕುಂದಾವದಾತಧ್ಯಾತಪ್ರೋದ್ಯದ್ಯಶಃ ಶ್ರೀಧವಳಿತ ಭುವನಂ ಧೀರನೇಕಾಂಗವೀರಂ ॥[3] ಮಾಳವಸೇನೆಯಂ ತುಳಿದು ಧಾರೆಯನೋವದೆ ಸುಟ್ಟು ತೂಳ್ದಿ ತಚ್ಚೋಳನನಿಳ್ದು

13 ತತ್ಕಟಕಮಂ ಕದುಪಿಂ ನೆಱೆ ಸೂಱೆಗೊಣ್ಡ ದೋಶ್ಶಾಳಿ ಕಳಿಂಗನಂ ಮುಱಿದು ಭಂಗಿಸಿದಾತ್ಮಭುಜ ಪ್ರತಾಪಮಂ ಕೇಳೆ ದಿಶಾಧಿಪಂ ನೆಗಳ್ದನೀ ತೆಱದಿನೆಱೆಯಂಗಭೂಭುಜಂ ॥[6] ಎಱೆಯನಖಿಳೋರ್ವ್ವಿ ಗೆನಿಸಿರ್ದ್ದೆಱೆಯೆಂಗ ನ್ರಿಪಾಳಕನಂಗನೆ

14 ಚೆಲ್ವಿಂಗೆಱೆವಟ್ಟು ಸೀಲಗುಣದಿಂನೆಱೆದೇಚಲದೇವಿಯಂತು ನೋಂತರುಮೊಳರೆ ॥[7] ಎನೆ ನೆಗಟ್ಟ[ವ]ರಿ ರ್ವ್ವಗ್ಗ್ಗಂ ತನೂಭವರ್ಣ್ನೆಗಟ್ಟಿರಲ್ತೆ ಬಲ್ಲಾಳಂ ವಿಷ್ಣುನ್ರಿಪಾಳಕನುದಯಾದಿತ್ಯನೆಂಬ ಪೆಸರಿಂದಮಖಿಳ ವಸುಧಾತಳ

---

1 ಶ್ಲೋಕ
2 ಮಹಾಸ್ರಗ್ಧರೆ;ಅಶುದ್ಧ
3 ಸ್ರಗ್ಧರೆ
4 ಮತ್ತೇಭವಿಕ್ರೀಡಿತ
5 ಕಂದ
6 ಉತ್ಪಲಮಾಲೆ;ಅಶುದ್ಧ
7 ಕಂದ;ಅಶುದ್ಧ

15 ದೊಳು ॥[1] ವ್ರಿ ॥ ಅವರೊಳು ಮಧ್ಯಮನಾಗಿಯುಂ ಧರಣಿಯಂ ಪೂರ್ವ್ವಾಪರಾಂಭೋಧಿಯೆಯ್ದುವಿನಂ ಕೂಡೆ ನಿಮಿರ್ಚ್ಚುವೊಂದು ನಿಜ . ಬಾಹಾವಿಕ್ರಮಕ್ರೀಡೆಯುದ್ಧವದಿಂದುತ್ತಮನಾದನುತ್ತಮಗುಣಬ್ರಾತೈ

16 ಕಧಾಮಂ ಧರಾಧವಚೂಡಾಮಣಿ ಯಾದವಾಬ್ಜದಿನಪಂ ಶ್ರೀವಿಷ್ಣುಭೂಪಾಳಕಂ ॥[2] ಎಳೆಗೆಸೆವ ಕೋಯತೂತ್ತರ್ತ್ತಳವನಪುರಮಂತೆ ರಾಯರಾಯಪುರಂ ಬಳ್ವಳ ಬಳದ ವಿಷ್ಣುತೇಜೋಜ್ವಳನದೆ ಬೆಂದವು ಬಲಿಷ್ಠರಿಪು

17 ದುರ್ಗ್ಗಂಗಳ್ ॥[1] ಕಮಲಾಕ್ಷಂ ಪುರುಷೋತ್ತಮಂ . . ನೈಕಾಹ್ಲಾದನಂ ದ್ವಿಷ್ಟದೈತ್ಯಮದಧ್ವಂಸನನಂತೆ ಭೋಗಯುತನುರ್ವ್ವೀಭಾರಧೌರೇಯನುತ್ತಮಸತ್ವಾನ್ವಿತನುದ್ಭಯಾದವಕುಳಾಳಂಕಾರನೆಂದಿಂತು ವಿಷ್ಣು ಮಹೀಶಂ

18 ಸಲೆ ತಾನೆ ವಿಷ್ಣುವೆನಿಪಂ ಉರ್ವ್ವೀವಧೂವಲ್ಲಭಂ ॥[2] ಕ ॥ ಲಕ್ಷ್ಮೀದೇವಿ ಖಗಾಧಿಪ ಲಕ್ಷ್ಮಂಗೆಸೆದಿರ್ದ್ದ ವಿಷ್ಣುಗಂತನ್ತೆ ವಲಂ ಲಕ್ಷ್ಮಾದೇವಿ ಲಸಂನೃಗಲಕ್ಷ್ಮಾನನೆ ವಿಷ್ಣುಗಗ್ರಸತಿಯೆನೆ ನೆಗಟ್ದಳು ॥ ಅವರ್ಗ್ಗೆ ಮನೋಜನನ್ತೆ ಸುದತೀಜನಚಿತ್ತಮನಿ[ಳ್]ಕೊಳಲ್ಕೆ ಸಾಲ್ವ

19 ವಯವಶೋಭೆಯಿಂದ ತನುವೆಂಬಭಿಧಾನಮನಾನದಂಗನಾನಿವಹಮನೆ . ಮು . . ನೆದೆ ವೀರರ ನೆಚ್ಚಿ ಯುದ್ಧದೊಳು ತವಿಸುವನಾದನಾತ್ಮಭುವನಪ್ರತಿಮಂ ನರಸಿಂಹಭೂಭುಜಂ ॥[3] ರಿಪುಸರ್ಪ್ಪಂ ದರ್ಪ್ಪ ದೌರ್ವ್ವಾನಳಬಹಳಶಿ

20 ಖಾಜಾಳಕಾಳಾಂಬುವಾಹಂ ರಿಪುಭೂಪೋದ್ದೀಪ್ರದೀಪಪ್ರಕರಪಟುತರಸ್ಫಾರಝುಂಝಾಸಮೀರಂ ರಿಪು ನಾಗಾನೀಕತಾರ್ಕ್ಷ್ಯಂ ರಿಪುನೃಪನಳಿನೀಷಣ್ಡವೇದಣ್ಡರೂಪಂ ರಿಪುಭೂಭೃದ್ಭೂರಿವಜ್ರಂ ರಿಪುನೃಪಮ ದಮಾ

21 ತಂಗಸಿಂಹಂ ನೃಸಿಂಹಂ॥[4] ಸ್ವಸ್ತಿಶ್ರೀಯದುವಂಶಮಂಡನಮಣಿಃ ಕ್ಷೋಣೀಶಚೂಡಾಮಣಿಸ್ತೇಜಃಪುಂಜ ವಿನಿರ್ಜ್ಜಿತಾಂಬರಮಣಿ[ಃ] ಸದ್ವಂದ್ಯಚೂಡಾಮಣಿಃ ಯಸ್ಯೋದ್ಯತ್ಸುಯಶಃ ಸುಪರ್ವ್ವಸರಿತೋಲೋಕ ತ್ರಯಂ ಶೋಭತೇಜೀಯಾತ್ಪಾದ

22 ಯುಗಾನಮಂ ನೃಪಕುಳಃ ಶ್ರೀನಾರಸಿಂಹೋ ನೃಪಃ ॥[5] ಶ್ರೀಮೂಲಸಂಘವಿಖ್ಯಾತೇ ಮೇಘಪಾಷಾಣ ಗಚ್ಛಕೇ ಕ್ರಾಣೂರ್ಗ್ಗಣ ಜನಾವಾಸೋ ನಿರ್ಮ್ಮಿತಂ ಹೆಮ್ಮಭೂಭೃತಃ ॥[6] ಸ್ವಸ್ತಿ ಸಮಧಿಗತಪಂಚ ಮಹಾಶಬ್ದ ಮಹಾಮಂಡಳೇಶ್ವರಂ ದ್ವಾರಾವತೀಪುರವರಾಧೀಶ್ವರಂ . ಡ

23 ವದಾವಾನಳ ಪಾಂಡ್ಯಕುಳಕಮಳವನವೇದಣ್ಡ ಗಂಡಭೇರುಂಡ ಮಣ್ಡಳಿಕಬೇಂಟೆಕಾಱ ಪರಮಂಡಳ ಸೂಱೆಕಾಱ ಸಂಗ್ರಾಮಭೀಮ ಕಲಿಕಾಲಕಾಮ ಸಕಳವಂದಿಬೃಂದ ಹಂ . . ಸಂತರ್ಪ್ಪಣ ಸಮೃದ್ಧ ವಿತರಣವಿನೋದ ವಾಸಂತಿಕಾದೇವಿಲಬ್ಧವರಪ್ರಸಾದ ಮೃಗಮದಾಮೋದ ಯಾದವಕುಳಾಂಬರ ದ್ಯುಮಣಿ

24 ಮಣ್ಡಳಿಕಮಕುಟಚೂಡಾಮಣಿ ಕದನಪ್ರಚಂಡ ಮಲೆಪರೊಳ್ಗಂಡ ನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರೀಮತ್ತ್ರಿಭುವನಮಲ್ಲ ತಳೆಕಾಡುಕೊಂಗುನಂಗಲಿಗಂಗವಾಡಿನೊಳಂಬವಾಡಿಬನವಸೆಹಾನುಂಗಲುಹುಲಿ ಗೆಱೆ ಬೆಳುವಲಂಗೊಂಡ ಭುಜಬಳವೀರಗಂಗ ಪ್ರತಾಪಹೊಯಸಳ ನಾರಸಿಂಹದೇವ

25 ರು ಸಕಳಮಹೀಮಂಡಳಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿಂ ಸುಕಸಂಕಥಾವಿನೋದದಿಂ ದೋರ ಸಮುದ್ರದ ನೆಲೆವೀಡಿನೊಳು ರಾಜ್ಯಂ ಗೆಯುತ್ತಮಿರೆ ॥ ತತ್ಪಾದಪದ್ಮೋಪಜೀವಿ ॥ ತದ್ರಾಜ್ಯೇ ಬುಧ ಕೋಟಿಸಂಪದವನ ಪ್ರಾಜ್ಯೇ ಪ್ರಧಾನಾಗ್ರಣೀರುನ್ಮೀಳತ್ಸುಕೃತಾಂಬುರಾಸಿ . . ಧಿ

26 ಸಂಪತ್ತಿ ಚಂದ್ರೋದಯಃ ಶ್ರೀಮತ್ತಿಪ್ಪಣಭೂಪತಿಸ್ಸಮುದಗಾದುದ್ದಾನಧಾರಾಜಳೈರ್ದ್ಧಾತ್ರೀ ಸಂಪ್ರತಿ ಪದ್ಯತೇ ಪ್ರತಿದಿನಂ ಕಾಮಾಂಬುಸಸ್ಯಾಶ್ರಯಾ ॥[5] ತಸ್ಯ ಶ್ಲಾಘ್ಯಗುಣೋದಯಸ್ಯ ಧರಣೀವಂದ್ಯೋನು ಜಾತಸ್ವಯಂ ಶ್ರೀಮಂನಾಗಚಮೂಪತಿ . . . .

27 ತಿಂ ಯತ್ರ ಯಃ ಯತ್ತೇಜಃ ಪ್ರಕರ್ೖೈರಜಾಯತ ಪರಂ ಪದ್ಮಾನುರಾಗ ಪ್ರದ್ಯೈದೃಪ್ಯದ್ವೈರಿ ತಮೋಘ ಟಾವಿಘಟನೈರ್ದ್ದೇರ್ವೋಗ್ರಸಂಗ್ರಾಮಣೀ ॥[5] ಶ್ರೀಮಚ್ಚಾಮಲದೇವಿ ಭಾತಿ ಭವತೀತ್ಯೇವಂ ಬುಧೈರ್ಯ್ಯಾ ಸ್ತುತಾ ತದುವಂಶೇ ಗುಣಸಂಗಮೇ ನರಮಣಿ . . . .

1 ಕಂದ
2 ಮತ್ತೇಭವಿಕ್ರೀಡಿತ
3 ಚಂಪಕಮಾಲೆ
4 ಮಹಾಸ್ರಗ್ಧರೆ;ಅಶುದ್ಧ
5 ಶಾರ್ದೂಲವಿಕ್ರೀಡಿತ
6 ಶ್ಲೋಕ

28 ಣಿಃ ಸಾ ಜಾತಾ ಭುವನಾಭಿರಾಮ ವಿಭವೈರ್ಲ್ಲಾವಣ್ಯಪುಣ್ಯೋದಯೈರ್ದ್ದೇವೀ(ಸಂಪ್ರತಿ)ಯನ್ಮುಖ ಪಂಕಜೇ ವಿಜಯತೇ ವಾಣೀ ಜಗತ್ಪಾವನೀ ॥[1] ಗಂಗರ ಧಾತ್ರಿಯೊಳವನೀಮಂಗಳಮೆನಿಸಿಪ್ಪ . . ರುಳಿಂಗಾ ಸ್ತ್ರೀರತುನಂ ತುಂಗಜನ . . . .

29 ಡಿಯಾಗಿರೆ ಕೊಟ್ಟಳು॥[2] ವಚನ ॥ ಯಿಕ್ಷುವಾಕವಂಶಾವತಾರಮದೆಂತೆಂದಡೆ ॥ ಸಲೆ ವೃಷಭತೀರ್ತ್ಥಕಾಲಂ ಸುಲಲಿತಮೆನೆ ಸಕಳಭವ್ಯಚಿತ್ತಾನಂದಂ ಕಲಿಕಾಲನಿರ್ಜ್ಜಿತಂ ಶ್ರೀಲಲನಾಲಾವಣ್ಯ ವರ್ದ್ಧನ ಕ್ರಮದಿಂದಂ॥[2] ಸೊಗೆಯಿಸುವ ಕಾಲದೊಳು ಕೀರ್ತ್ತಿಗೆ ಮೂ

30 ಲಸ್ತಂಭಮೆನಿಪಯೋಧ್ಯಾಪುರದೊಳು ಜಗದಧಿನಾಥಂ ಪುಟ್ಟಿದನಗಣ್ಯನಿಕ್ಷ್ವಾಕುವಂಶಚೂಡಾರತ್ನಂ ॥[2] ಧರೆಗೆ ಹರಿಶ್ಚಂದ್ರನೃಪೇಶ್ವರನೋರ್ವ್ವನೆ ಕಾಂತನಾಗಿ ದೋರ್ವ್ವಲದಿಂದಂ ಬಿರುದರನದಿರ್ಪ್ಪಿ ವಿದ್ಯಾಪರಿ ಣತಿಯಿಂ ನೆಱೆದು ಸುಖದಿನಿರೆ ಪಲಕಾಲಂ ॥[2] ವೃ ॥ ಆತ

31 ನ ಪುತ್ರನಿಂದುಧರಹಾಸನಿರ್ಭೋಜ್ವಳಕೀರ್ತ್ತಿ ಸದ್ಗುಣೋಪೇತನುದಾತ್ತವೈರಿಕುಳಭೇದನಕಾರಿ ಕಳಾಪ್ರವೀಣ ನುದ್ಧೂತಮಳಂ ಸುರೇಂದ್ರಸದೃಶಂ ಭರತಂ ಕವಿರಾಜಪೂಜಿತಂ ಖ್ಯಾತನತರ್ಕ್ಕ್ಯಪುಣ್ಯ ನಿಳಯಂ ಸುಜನಾಗ್ರಣಿ ವಿಶ್ರುತಾನ್ವಯಂ ॥[3] ರುಜು

32 ಶೀಳಯುಕ್ತೆ ಯೆನಿಸಿದ ವಿಜಯಮಹಾದೇವಿ ತನಗೆ ಸತಿಯೆನೆ ವಿಬುಧವ್ರಜಪೂಜ್ಯಂ ಭರತಂ ಭಾವಜ ಸದೃಶಂ ನೆಗಳೆ ಸಕಳಧಾತ್ರೀತಳದೊಳು ॥[2]ವಚನ ॥ ಆ ವಿಜಯಮಹಾದೇವಿಗೆ ಗರ್ಭದೋಹಳಂ ನೆಗಳೆ ॥ವೃ ॥ ತರಳತರಂಗಭಂಗುರಸಮನ್ವಿತೆ

33 ಯಂ ಝಷಚಕ್ರವಾಕಭಾಸುರಕಳಹಂಸಪೂರಿತೆಯನುದುಫಲತಾಂಕಿತಗಾತ್ರೆಯಂ ಮನೋಹರ ನವಶೈತ್ಯಮಾಂದ್ಯಶುಭಗಂನ್ಧಸಮೀರನಿಭಾಸ್ಯೆಯಂ ತಳೋದರಿ ನೆಱೆ ಗಂಗೆಯಂ ನಲಿದುಮೀವಭಿ ವಾಂಚ್ಛೆಯನೆಯ್ದೆ ತಾಳ್ದಿದಳು ॥[4] ಕಲಹಂಸಯಾನೆ ಪಲರುಂ

34 ಕೆಳದಿಯರೊಡವೋಗಿ ಪೂರ್ಣ್ನಗಂಗಾನದಿಯಂ ವಿಳಸಿತಮಂ ಪೊಕ್ಕು ನಿರಾಕುಳದಿಂದೋಲಾಡಿ ಪಾಡಿ ಗಾಡಿಯನಾಂತಳು ॥[2] ಅಂತು ಮನದಲಂಪು ಪೊಂಪುಳಿವೋಗೆ ಗಂಗಾನದಿಯೊಳೋಲಾಡಿ ನಿಜಗೃಹಕೆ ವಂದು ನವಮಾಸಂ ನೆಱೆದು ಪುತ್ರನಂ ಪಡೆದಾತಂಗೆ ॥ ಗಂಗಾನದಿಯೊ

35 ಳು ಮಿಂದು ಲತಾಂಗಿ ಮಗಂ ಬಡೆದಳಪ್ಪಕಾರಣದಿಂದಂ ಮಾಂಗಲ್ಯನಾಮಮಾದುದಿಳಾಂಗನೆ ಗಧಿಪತಿಗೆ ಗಂಗದತ್ತಾಖ್ಯಾನಂ ॥[5] ವ ॥ ಆ ಗಂಗದತ್ತಂಗೆ ಭರತನೆಂಬ ಮಗಂ ಪುಟ್ಟಿದನಾತಂಗೆ ಗಂಗದತ್ತನೆಂಬಂ ಮಗಂ ಪುಟ್ಟಿದಂ ॥ ಕಂ ॥ ಗುಣನಿಧಿಗೆ ಗಂಗದತ್ತಂಗಣುಗಿನ ಪುತ್ರಂ ವಿವೇಕನಿಧಿ ಪುಟ್ಟಿ ದ

36 ಯಾಗ್ರಣಿಯಾಗಿ ಹರಿಶ್ಚಂದ್ರಪ್ರಣುತನೃಪೇಂದ್ರಂ ಧರಿತ್ರಿಯೊಳು ಶೋಭಿಸಿದಂ ॥ ಮತ್ತಮಾ ನೃಪೋತ್ತ ಮಂಗೆ ಭರತನೆಂಬ ಸುತಂ ಪುಟ್ಟಿದನಾತಂಗೆ ಗಂಗದತ್ತನೆಂಬ ಮಗನಾಗಿನ್ತು ಗಂಗಾನ್ವಯಂ ಸಲುತ್ತಮಿರೆ ॥ ಕಂ ॥ ಹರಿವಂಶಕೇತುನೇಮೀಶ್ವರತೀರ್ತ್ಥಂ ವರ್ತ್ತಿಸುತ್ತ

37 ಮಿರೆ ಗಂಗಕುಳಾಂಬರಭಾನು ಪುಟ್ಟಿದಂ ಭಾಸುರತೇಜಂ ವಿಷ್ಣುಗುಪ್ತನೆಂಬ ನರೇಂದ್ರಂ ॥ ವ ॥ ಆ ಧರಾಧಿನಾಥಂ ಸಾಮ್ರಾಜ್ಯಪದವಿಯಂ ಕಯ್ಕೊಂಡಹಿಚ್ಛತ್ರಪುರದೊಳು ಸುಖಮಿರ್ದ್ದು ॥ ವ ॥ ನೇಮಿತೀರ್ತ್ಥಕರ ಪರಮದೇವರ ನಿರ್ವ್ವಾಣಕಾಲದೊಳೈಂದ್ರಧ್ವಜಮೆಂಬ ಪೂ

38 ಜೆಯಂ ಮಾಡೆ ದೇವೇಂದ್ರನೊಸೆದು ॥ ಕ ॥ ಅನುಪಮದೈರಾವತಮಂ ಮನೋನುರಾಗದೊಳೆ ವಿಷ್ಣು ಗುಪ್ತಂಗಿತ್ತಂ ಜಿನಪೂಜೆಯಿಂದೆ ಮುಕ್ತಿಯನನರ್ಘ್ಯಮಂ ಪಡೆಗುಮೆಂದೊಡುಳಿದುದು ಪಿರಿದೇ ॥ ವ ॥ ಆ ವಿಷ್ಣುಗುಪ್ತಮಹಾರಾಜಂಗಂ ಪೃಥ್ವೀಮತಿಮಹಾದೇವಿಗಂ

39 ಭಗದತ್ತಂ ಶ್ರೀದತ್ತನೆಂಬ ತನಯರಾಗೆ ॥ ವ ॥ ಭಗದತ್ತಂಗೆ ಕಳಿಂಗದೇಶಮಂ ಕುಡಲಾತನುಂ ಕಳಿಂಗದೇಶಮನಾಳ್ದು ಕಳಿಂಗಗಂಗನಾಗಿ ಸುಖದಿನಿರೆ ॥ ಯಿತ್ತಲುದಾತ್ತಯಶೋನಿಧಿ ಮತ್ತದ್ವಿಪಮಂ ಸಮಸ್ತರಾಜ್ಯಮುಮಂ ಶ್ರೀದತ್ತನೃಪಂಗಿತ್ತುಂ ಭೂ

40 ಪೋತ್ತಮನೆನಿಸಿರ್ದ್ದ ವಿಷ್ಣುಗುಪ್ತನರೇಂದ್ರಂ ॥[2] ಅಂತು ಶ್ರೀದತ್ತನಿಂದಿತ್ತಲಾನೆಯುಂಡಿಗೆ ಸಲುತ್ತಮಿರೆ ॥ ಪ್ರಿಯಬನ್ಧುವರ್ಮನುದಿಯಿಸಿ ನಯದಿಂದಂ ಸಕಳಧಾತ್ರಿಯಂ ಪಾಳಿಸಿದಂ ಭಯಲೋಭದುರ್ಲ್ಲಭಂ ಲಕ್ಷ್ಮೀಯುವತಿಮುಖಾಬ್ಜಷಣ್ಡಮಣ್ಡಿತಹಾಸಂ ॥[2] ಅಂತಾ ಪ್ರಿ

1 ಶಾರ್ದೂಲವಿಕ್ರೀಡಿತ 2 ಕಂದ 3 ಉತ್ಪಲಮಾಲೆ 4 ಚಂಪಕಮಾಲೆ 5 ಕಂದ;ಅಶುದ್ಧ

41 ಯಬಂಧು ಸುಖದಿಂ ರಾಜ್ಯಂ ಗೆಯ್ಯುತ್ತಮಿರೆ ತತ್ಸಮಯದೊಳು ಪಾರ್ಶ್ವಭಟ್ಟಾರಕರ್ಗ್ಗೆ ಕೇವಳಜ್ಞಾನೋತ್ಪತ್ತಿ
ಯಾಗೆ ಸೌಧರ್ಮ್ಮೇಂದ್ರಂ ಬಂದು ಕೇವಳಿಪೂಜೆಯಂ ಮಾಡೆ ಪ್ರಿಯಬನ್ಧುವುಂ ತಾನುಂ ಭಕ್ತಿಯಿಂ ಬಂದು
ಪೂಜೆಯಂ ಮಾಡಲಾತನ ಭಕ್ತಿಗಿಂದ್ರಂ ಮೆಚ್ಚಿ ದಿವ್ಯಮ

42 ಪ್ಪಯ್ದುಂ ತುಡುಗೆಗಳಂ ಕೊಟ್ಟು ನಿಮ್ಮನ್ವಯದೊಳು ಮಿಥ್ಯಾದೃಷ್ಟಿಗಳಾಗಲೊಡಮದೃಶ್ಯಂಗಳಕ್ಕುಮೆಂದು ಪೇಳ್ದು
ವಿಜಯಪುರಕ್ಕಹಿಛತ್ರಮೆಂದು ಪೆಸರನಿಟ್ಟು ದಿವಿಜೇಂದ್ರಂ ಪೋಪುದಿತ್ತಲು ಗಂಗಾನ್ವಯಂ ಸಂಪೂರ್ಣ್ಣ
ಚಂದ್ರನಂತೆ ಪೆರ್ಚ್ಚಿ ವರ್ತ್ತಿಸುತ್ತಮಿರೆ

43 ತದನ್ವಯದೊಳು ಕಂಪಮಹೀಪತಿಗೆ ಪದ್ಮನಾಭನೆಂಬ ಮಗಂ ಪುಟ್ಟಿ ॥ ಕ ॥ ತನಗೆ ತನೂಭವರಿಲ್ಲದೆ
ಮನದೊಳು ಚಿಂತಿಸುತಮಿರ್ದ್ದು ಪದ್ಮಪ್ರಭನಾರ್ಪ್ಪಿನಕಣಿ ಸಾಸನದೇವತೆಯಂ ಪೂಜಿಸಿ ದಿವ್ಯಮಂತ್ರದಿಂ
ಸಾಧಿಸಿದಂ ॥ ವ ॥ ಅಂತು ಸಾಧಿಸಿ ದಿಶಾಧೀತವಿದ್ಯನಾಗಿ

44 ಪುತ್ರರಿರ್ಬ್ಬರಂ ಪಡೆದು ರಾಮಲಕ್ಷ್ಮಣರೆಂದು ಪೆಸರನಿಟ್ಟು ॥ ವೃ ॥ ಪರಮಸ್ನೇಹದೊಳಿಬ್ಬರಂ ನಡಪಿ
ಲೀಲಾಮಾತ್ರದಿಂ ಚಂದ್ರನಂತಿರೆ ಸಂಪೂರ್ಣ್ನಕಳಾಂಗರಾಗಿ ಬೆಳೆಯಲು ವಿದ್ಯಾಬಲೋದ್ಯೋಗಮುರ್ಬ್ಬರೆಯೊಳು
ಚೋದ್ಯಮೆನಲು ಸಲುತ್ತಮಿರೆ ಕೀರ್ತ್ತಿಶ್ರೀ ದಿಶಾಭಾ

45 ಗದೊಳ್ಪನೆಯಾಶಾಗಜಮಂ ಪಳಂಚಲೆಯೆ ಲಕ್ಷ್ಮೀಭಾರದಿಂದೊಪ್ಪಿದರು ॥[1] ವ ॥ ಅಂತು ಸುಖದಿನಿರ್ಪ್ಪು
ದುಮತ್ತಲುಜ್ಜೆನಿಯಪುರಾಧಿಪತಿ ಮಹೀಪಾಳನಾ ತುಡುಗೆಗಳಂ ಬೇಡಿಯಟ್ಟಿದಡೆ ಪದ್ಮನಾಭಂ ಕೃತಾಂತನಂತೆ
ರೌದ್ರವೇಷಮಂ ಕೈಕೊಂಡು ॥ ಕ ॥ ಯೆಮಗದನಟ್ಟ

46 ಲುಕಾಗದು ತಮಗೆ ತುಡಲು ಯೋಗ್ಯಮಲ್ತು ಸನ್ನಮಿರಲುವೇಳು ಸಮರಕ್ಕೆ ವಂದನಪ್ಪಡೆ ನಿಮಿಶ
ದೊಳಾಂತಿಜಿದು ವೀರರಸಮಂ ಮೆಱೆವೆಂ ॥ ವ ॥ ಅಂತು ನುಡಿದಟ್ಟಿ ಮಂತ್ರಿವರ್ಗ್ಗದೊಳಾಳೋಚಿಸಿ ತನ
ತಂಗೆ ಯಾಳಬ್ಬೆಯುಂ ನಾಲ್ವರೆಣ್ಬರಾಪ್ತರಪ್ಪ ವಿಪ್ರಸಂತಾನಮುಂ ಬೆರ

47 ಸಿ ಕಳಿಪಿದಡವರ್ದ್ದಕ್ಷಿಣಾಭಿಮುಖರಾಗಿ ಬರುತ್ತುಂ ರಾಮಲಕ್ಷ್ಮಣರ್ಗ್ಗೆ ದಡಿಗ ಮಾಧವರೆಂದು ಪೆಸರನಿಟ್ಟು
ನಿಚ್ಚಪಯಣದಿಂ ಬರುತ್ತಮಿರೆ ॥ ಕ ॥ ಬಂದವರ್ಗ್ಗಳುಚಿತಪದಮನಗುಂದಲೆಯಿಂ ಕಂಡರಮಳ
ಲಕ್ಷ್ಮೀಚಿತ್ತಾನಂದಮಂ ಪೇರೂರಂ ಮಂದಾರನಮೇ

48 ರುಪುಶ್ಯಗನ್ಧಾದ್ರಿಯ್ಮಂ ॥ ವ ॥ ಅಂತು ಗಂಗಹೇರೂರಂ ಕಂಡಲ್ಲಿಯ ತಟಾಕತೀರದೊಳು ಬೀಡಂ ಬಿಟ್ಟು
ಚೈತ್ಯಾಲಯಮಂ ಕಂಡು ನಿರ್ಬ್ಭರಭಕ್ತಿಯಿಂ ತ್ರಿಪ್ರದಕ್ಷಿಣಂ ಗೆಯ್ದು ಸ್ತುತಿಯಿಸಿ ಸಮಸ್ತವಿದ್ಯಾ
ಪಾರಾವಾರಪಾರಗರುಂ ಜಿನಸಮಯಸುಧಾಂಭೋ

49 ಧಿಸಂಪೂರ್ಣ್ನಚಂದ್ರರುಮುತ್ತಮಕ್ಷಮಾದಿದಶಕುಳಧರ್ಮ್ಮನಿರತರುಂ ಚಾರಿತ್ರಚಕ್ರಧರರಂ ವಿನೇಯ ಜನಾನನ್ದರಂ
ಚತುಸ್ಸಮುದ್ರಮುದ್ರಿತಯಶಃಪ್ರಕಾಶರಂ ಸಕಳಸಾವದ್ಯದೂರರಂ ಕಾಣೂರ್ಗ್ಗಣಾಂಬರ ಸಹಸ್ರಕಿರಣರಂ
ದ್ವಾದಶವಿಧತಪೋನುಷ್ಠಾನಿಷ್ಠಿತರಂ

50 ಗಂಗರಾಜ್ಯ ಸಮುದ್ಧರಣರಂ ಶ್ರೀಸಿಂಹಣಂದ್ಯಾಚಾರ್ಯರಂ ಕಣ್ದು ಗುರುಭಕ್ತಿಪೂರ್ವ್ವಕಂ ಬಂದಿಸಿ ತಂಮ
ಬಂದಭಿಪ್ರಾಯಮೆಲ್ಲಮಂ ತಿಳಿಯ ಪೇಳೆ ಕಯ್ಕೊಂಡವರ್ಗ್ಗೆ ಸಮಸ್ತವಿದ್ಯಾಭಿಮುಖರ್ಮ್ಮಾಡಿ ಕೆಲವಾನುದಿವಸದಿಂ
ಪದ್ಮಾವತೀದೇವಿಯಂ ವಿಧಿಪೂರ್ವ್ವಕಮಾಹ್ವಾನಂ ಗೆಯ್ದು

51 ವರಂ ಬಡೆದು ಖಳ್ಗಮುಮಂ ಸಮಸ್ತರಾಜ್ಯಮನವರ್ಗ್ಗೆಮಾಡೆ ॥ ಕ ॥ ಮುನಿಪತಿ ನೋಡಲು ವಿದ್ವಜ್ಜನ
ಪೂಜ್ಯಂ ಮಾಧವಂ ಶಿಲಾಸ್ತಂಭಮನಾರ್ದ್ದನುಗೆಯ್ದು ಪೊಯ್ಯಲದು ಪುಣ್ಮೆನೆ ಮುಱಿದುದು ವೀರ
ಪುರುಷರೇನಂ ಮಾಡರು ॥ ವ ॥ ಆ ಸಾಹಸಮಂ ಕಂಡು ॥ ವೃ ॥ ಮುನಿಪತಿ ಕ

52 ರ್ಣ್ನಿಕಾರದೆಸಳೊಳು ನೆಱೆ ಪಟ್ಟಮನೆಯ್ದೆ ಕಟ್ಟಿ ಸಜ್ಜನಜನವಂದ್ಯರಂ ಪರಿಸಿ ಸೇಸೆಯನಿಕ್ಕಿ ಸಮಸ್ತ ಧಾತ್ರಿಯಂ
ಮನಮೊಸೆದಿತ್ತು ಕುಂಚಮನಗುರ್ವ್ವಿನ ಕೇತನಮಾಗಿ ಮಾಡಿ ಬೆರ್ಪ್ಪನಿತು ಪರಿಗ್ರಹಂ ಗಜತುರಂಗಮುಮಂ
ನಿಜಮಾಗೆ ಮಾಡಿದರು ॥[2] ಅಂತು ಸಮಸ್ತರಾಜ್ಯ

53 ಮಂ ಮಾಡಿ ಬುದ್ಧಿಯನಿವರ್ಗ್ಗಿಂತೆಂದು ಬೆಸಸಿದರು ॥ ವ್ರಿ ॥ ನುಡಿದುದನಾರೊಳಂ ನುಡಿದು ತಪ್ಪಿದಡಂ
ಜಿನಶಾಸನಕ್ಕೊಡಂಬಡದಡಮನ್ಯನಾರಿಗೆರೆದಟ್ಟಿದಡಂ ಮಧುಮಾಂಸಸೇವೆಗೆಯ್ದಡ ಮಕುಳೀ ನರಪ್ಪವರ
ಕೊಳುಕೊಡೆಯಾದಡ ಮರ್ತ್ಥಿಗರ್ತ್ಥಮಂ ಕುಡದ

54 ಡಮಾಹವಾಂಗಣದೊಳೋಡಿದಡಂ ಕಿಡುಗುಂ ಕುಲಕ್ರಮಂ ॥[2] ವೃ ॥ ಉತ್ತಮಮಪ್ಪ ನಂದಗಿರಿಕೋಟೆ ಪೊಳಲು
ಕುವಳಾಲಮಾಳ್ಕೆ ತೊಂಭತ್ತಱುಸಾಸಿರಂ ವಿಷಯಮಾಪ್ತನನಿಂದ್ಯ ಜಿನೇಂದ್ರನಾಜಿರಂಗಾತ್ತ ಜಯಂ ಜಯಂ
ಜಿನಮತಂ ಮತಮಾಗಿರೆ ಸಂತತಂ ನಿಜೋದಾ

1 ಮತ್ತೇಭವಿಕ್ರೀಡಿತ 2 ಚಂಪಕಮಾಲೆ

55 ತ್ತತೆಯಿಂದಮಾ ದಡಿಗ ಮಾಧವ ಭೂಭುಜರಾಳ್ದರುರ್ಬ್ಬಿಯಂ॥[1] ಉತ್ತರದಿಕ್ತಟಾವಧಿಗೆ ತಾಗೆ ಮರಂದಲೆ ಮೂಡ ತೊಂಡೆನಾಡತ್ತಪರಾಶೆಗಂಬುನಿಧಿಚೇರೊಡೆಯಿರ್ಪ್ಪ ತೆಂಕ ಕೊಂಗು ಮತ್ತಿತ್ತೊಳಗುಳ್ಳ ವೈರಿಗಳನಿಕ್ಕಿ ಪರಾವೃತ ಗಂಗವಾಡಿ ತೊಂಬತ್ತಱುಸಾಸಿರಂ ದಳೆಲೆ ಮಾಡಿದನಿಂತು

56 ಟು ಗಂಗನುಜ್ಜುಗಂ ॥[2] ಅಂತು ಶತಜೀವಿಯೆಂಬುದಾ ಶಬ್ದಮಂ ಕೇಳ್ದು ॥ ಭರದಿಂದಂ ಚುರ್ಚ್ಚು ವಾಯ್ದಂ ಹೊಗಳೆ ಬುಧಜನಂ ಬಂದು ಕಾವೇರಿಯೊಳು ಭೀಕರಮಾಗಲು ವೀರಲಕ್ಷ್ಮೀನಯನ ಕುಮುದಿನೀಚಂದ್ರಮಂ ನಿಂದು ನೋಡಲು ಪರಿವಾರಂ ತಂನ ಕೀರ್ತ್ತಿಪ್ರಭೆ ಬಳಸೆ ದಿಶಾಭೋಗಮಂ ಚೋ

57 ದ್ಯಮಾಗಲು ಪರಮಶ್ರೀಜೈನಪಾದಂ ನೆಲಸೆ ಹೃದಯದೊಳು ಮೇರುಶೈಲೋಪಮಾನಂ ॥[3] ಕ ॥ ಕ . . ಜಿದ ಗಂಗನಿಂ ಭಯಮಿಲ್ಲದ ಹರಿವರ್ಮ್ಮ ವಿಷ್ಣುಭೂಪನಿಂ ನಿಜದಿಂ ಬಲ್ಲೆ ತಡಂಗಾಲು ಮಾಧವನಲ್ಲಿಂ ಬಳಿ ಚುರ್ಚ್ಚುವಾಯ್ದ ಗಂಗನೃಪಾಳಂ॥ ಶ್ರೀಪುರುಷಂ ಶಿವಮಾರಂ . .

58 ಳಂ ಕೃತಾಂತಭೂಪನಾಸಯಗೊಟ್ಟಧಿಪ . ದೊಳರಿನೃಪಕೋಪಾನಳಶಿಖಿಯೆನಿಪ್ಪ ವಿಜಯಾದಿತ್ಯಂ ॥[4] . . . ರೆಯೇಜಿದ ಮಾರಸಿಂಗನಾ ಕುರುಳರಾಜಿಗಂ ಪೆಸರ್ವ್ವೆತ್ತಾ ಮರುಳಂ ತಂ ನ್ರಿಪತಿಳಕನ ದಿತಿಯ ಮಗಂ ಸತ್ಯವಾಕ್ಯನಚಳಿತಶೌರ್ಯ್ಯಂ ॥[5] ಗರ್ವ್ವದ ಗಂಗಂ ವಸುಧೆಯೊಳೊರ್ವ್ವನೆ

59 ಕಲಿ ಚಾಗಿ ಶೌಚಿ ಗುತ್ತಿಯಗಂಗಂ ದೋರ್ವ್ವಿಕ್ರಮಾಭಿರಾಮನಗುರ್ಬ್ಬಿನ ಕಲಿರಾಚಮಲ್ಲ ಭೂಭೃ . .[4] . ಮುಜಿವಂ ಹಸಿಕವುಂಗಂ ಪಿಡಿದಡಸಿ ಕೀಳುವ ನಾಮದ ಕರಿಯಂ ಪಿಂಗದೆ ನಿಲಿಸುವ ಸಾಹಸ ತುಂಗಂ ಕೇವಳಮೆ ನೆಗಟ್ದಿ ರಕ್ಕಸಗಂಗಂ ॥[4] ಅವಯವದಿಂ

60 ದೆ ಸಾಧಿಸಿದ ಮಾಳವಮೇಳುಮನೆಯ್ದೆ ಗಂಗಮಾಳವಮೆನಲಕ್ಕರಂ ಬರೆದು ಕಲು ನಿಜಿಸುತ್ತೆ ಕಳಲ್ಚಿ ಚಿತ್ರಕೂಟಮನುಜಿ ಕನ್ನಮಜ್ಜೆಯ ನೃಪಾನುಜನಂ ಜಯಕೇಸಿಯಂ ಮಹಾಹವದೊಳೆ ಮಾರಸಿಂಗನೃಪನಿಕ್ಕಿ ನಿಮಿರ್ಚ್ಚಿದನಾತ್ಮಶೌರ್ಯ್ಯಮಂ ॥[6] ತನಯಂ

61 ಶ್ರೀಮಾರಸಿಂಹಂಗನುಪಮ ಜಗದುತ್ತುಂಗನಾದಂ ಜಗತುಪಾವನಲಕ್ಷ್ಮೀವಲ್ಲಭಂಗಿನ್ತುದಿಯ್ಸಿ ನೆಗಟ್ದಿಂ ರಾಚಮಲ್ಲಾವನೀಶಂ ಮನುಮಾರ್ಗ್ಗಂ ಗಂಗಚೂಡಾಮಣಿ ಜಯವನಿತಾಧೀಶ ಭೂವಲ್ಲಭೇಶಂ ಜಿನಧರ್ಮ್ಮಾಂಭೋಧಿಚಂದ್ರಂ ಗುಣಗಣನಿಳಯಂ ರಾಜವಿದ್ಯಾಧರೇಂದ್ರಂ ॥[3] ಯಿಂತೆನಿಸಿ ನೆಗಳ್ದ

62 ಗಂಗವಂಶೋದ್ಭವರಾ ದಡಿಗನ ಮಗಂ ಚುರ್ಚ್ಚುವಾಯ್ದಗಂಗನಾತನ ಸುತಂ ದುರ್ವ್ವಿನೀತನಾತನ ತನಯಂ ಶ್ರೀ . . . . ನು ಶ್ರೀಪುರುಷಮಹಾರಾಜಂ ತತ್ತನೆಯಂ . . . ದೇವ ತತ್ತನೂಭವನೆಱೆಯಂಗಹೆಮ್ಮಾಡಿ ತತ್ತುಪುತ್ರಂ ಬೂತುಗಹೆಮ್ಮಾಡಿ ತದಾತ್ಮಜರು . . . ದೇವ ತದನು

63 ಜ ಗುತ್ತಿಯಗಂಗನಾತನ ಮಮ್ಮ ಮಾರಸಿಂಗದೇವನಾತನ ಮಗಂ ಕಲಿಯಂಗದೇವನಾತನ ಮಗಂ ಬರ್ಮ್ಮದೇವನಿನಾ ಗಂಗವಂಶೋದ್ಭವರು ರಾಜ್ಯಂ ಗೆಯ್ಯೆ ॥ ದಕ್ಷಿಣದೇಶನಿವಾಸೀಗಂಗಮಹೀಮಂಡ ಳಿಕಕುಳಸಂಧರಣಃ ಶ್ರೀಮೂಲಸಂಘನಾಥೋ ನಾಮ್ನಾ ಶ್ರೀಸಿಂಹನಂದಿ

64 ಮುನಿಃ॥[7] ಶ್ರೀಮೂಲಸಂಘ ವಿಯದಮೃತಾಮಳರುಚಿರುಚಿರ . . . . ಜಯಲಕ್ಷ್ಮೀ ಮಹಿತ ಜಿನಧರ್ಮ್ಮಲಲಾಮಂ ಕಾಣೂರ್ಗ್ಗಣ ಜನಾ . . ಕರಂ ॥[8] ಆ ಗಣದನ್ವಯದೊಳು ॥ ಮಣಿರಿವ ವನರಾಶೌ ಚೂಳಿಕಾಚಾಮರಾದ್ರೌ ತಿಳಕಮಿವ ಲಲಾಟೇ ಚಂದ್ರಿ

65 ಕೇವಾಮೃತಾಂಶೌ ॥ ಯಿವ ಸರಸಿ ಸರೋಜೇ ಮತ್ತ ಭೃಂಗೀ ನಿಕಾಯಂ ಸಮಜನಿ ಜಿನಧರ್ಮ್ಮಾ ನಿರ್ಮ್ಮಳೋ ಬಾಳಚಂದ್ರಃ ॥[9] ಅವರ ಶಿಷ್ಯರು ॥ ವಿಮಳಶ್ರೀಜೈನಧರ್ಮ್ಮಾಂಬರಹಿಮಕರನುದ್ಯತ್ತ . . ಲಕ್ಷ್ಮೀರಮಣಂ ಭೂಮಂಡಳಾಧೀಶನುತನುಭಯಸಿದ್ಧಾಂತರತ್ನಾಕರಂ ಜಂ

66 ಗಮತೀರ್ತ್ಥಂ ಭವ್ಯಂ ವಕ್ತ್ರಾಂಬುಜಖರಕಿರಣಂ ಶ್ರೀಪ್ರಭಾಚಂದ್ರಸಿದ್ಧಾಂತಮುನೀಂದ್ರಂ ಕ್ಷೀರನೀರಾಕರ ವಿಶದಯಶೋವೇಷ್ಟಿತಾಶಾವಿಭಾಗಂ ॥[3] ಮನಮಂ ನಿಯಮಿಸಲಱಿಯರ್ತ್ತನುವಂ . . . ತೋರ್ಪ್ಪ ಮುನಿಯುಂ ಮುನಿಯೆ ಮನಮಂ ತನುವಂ ನಿಯಮಿಸಲನುದಿನಮೀ ನೇ

67 ಮಿದೇವನೋರ್ವ್ವನೆ ಬಲ್ಲಂ ॥[4] ಅವರ ಶಿಷ್ಯರು ॥ ಗುಣಿಯೆನೆ ಜಿನಮತ ರಕ್ಷಾಮಣಿಯೆನೆ ಕವಿ ಗಮಕವಾದಿವಾಗ್ಮಿಪ್ರವರಾಗ್ರಣಿ ಯೆನೆ ಪಣ್ಡಿತಚೂಡಾಮಣಿಯೆನೆ ಗುಣನಂದಿದೇವರೆ . . . ಯೊಳು॥[4] ತತ್ಸಧರ್ಮ್ಮರು ॥ ಅಳವೇ ಪೇಳು ನುಡಿಯಲ್ಕೆ ನಿಂನ ಬಿರುದಂ ಮಾಣ್ಮಾ

1 ಉತ್ಪಲಮಾಲೆ
2 ಉತ್ಪಲಮಾಲೆ;ಅಶುದ್ಧ
3 ಮಹಾಸ್ರಗ್ಧರೆ
4 ಕಂದ
5 ಕಂದ;ಅಶುದ್ಧ
6 ಚಂಪಕಮಾಲೆ
7 ಆರ್ಯೆ
8 ಆರ್ಯಾಗೀತಿ(?)
9 ಮಾಲಿನಿ

68 ಣೆಲೆ ಸಾಂಖ್ಯವಾಗುಬಳಮಂ ನಚ್ಚದೆ ನೀನಡಂಗೆಡಱದಿರ್ಚ್ವಾರ್ಬ್ವಾಕನ್ಯೆಯಾಯಿಕಾ ಮಲೆಯಲು ವೇಡಿರುಮತ್ತಮೆ . ಚಲದಿಂದೀಜ . . . ಮನಂಡಲೆಯಲು ಶ್ರೀಗುಣಚಂದ್ರದೇವನಮಳಂ ವಾದೀಭಕಣ್ಠೀರವಂ॥[1] . . . . ಧರ್ಮ್ಮರು ॥ ಗಂಗಾವಾರಿ ಸುಸ್ಯೆವಳಂ ಸುರಕರೀ ದಾನಾದ್ರಗಣ್ಡಸ್ಥ

69 ಳಃ ಶಂಭುಃ ಕಣ್ಠವಿಲಗ್ನಪೂರಗರಳಃ ಚಂದ್ರಃ ಕಳಂಕಾಂಕಿತಃ ಕೈಳಾಸೋವನವಲ್ಲರೀ ಪರಿವೃತಃ ಸಾಮ್ಯಂ ಕಥಂ . . . ಕೀರ್ತ್ಯಾತ್ಯೆಸ್ಸಹ ಮಾಘನಂದಿಯಮಿನಃಶ್ಚಂದ್ರಾತಪೋದ್ಯಚ್ಛ್ರಿಯಂ ॥[2] ಆ ಚಾರಿತ್ರ ಚಕ್ರೇಶ್ವರ ಮುನಿರಾಜರಾಜನ ಶಿಷ್ಯರು ॥ ಸ್ವಸ್ತಿ ಸಮಧಿಗತ

70 ಪಂಚಮಹಾಶಬ್ದ ಮಹಾಕಲ್ಯಾಣಾಷ್ಟಮಹಾಪ್ರಾತಿಹಾರ್ಯ್ಯ ಚತುಸ್ತ್ರಿಂಶದತಿಶಯವಿರಾಜಮಾನ . . . ಗವದ . ತು ಪರಮೇಶ್ವರ ಪರಮಭಟ್ಟಾರಕಮುಖಕಮಳವಿನಿರ್ಗ್ಗತ ಸದಸದಾದಿವಸ್ತುಸ್ವರೂಪ ನಿರೂಪಣ ಪ್ರವಣರಾದ್ಧಾನ್ತಾಮೃತವಾರ್ದ್ಧಿವರ್ದ್ಧನರಾತ್ರ್ಯಾಭ

71 ರಣರುಮಪ್ಪ ಶ್ರೀಮತು ಪ್ರಭಾಚಂದ್ರಸಿದ್ಧಾನ್ತದೇವರೆಂತೆಂದಡೆ ॥ ವೃ ॥ ಆಶೀದಾಶಾಂತರಾಳಪ್ರಬಳ ಪೃಥುಯಶೋವ್ಯೋಮಗಂಗಾತರಂಗಚಂಚಚ್ಚಾರಿತ್ರಧಾತ್ರೀ . ವದತಿ ಲಕ್ಷ್ಮಿತೋದಾರಗಂಭೀರಮೂರ್ತ್ತಿಃ ವಾಕ್ಕಾಂತಾತುಂಗಪೀನಸ್ತನಕಳಶಲಸಂನೂತಚೂತಪ್ರವಾ

72 ಳಸ್ಸಿದ್ಧಾಂತಕ್ಷೀರನೀರಾಕರಹಿಮಕಿರಣಃ ಶ್ರೀಪ್ರಭಾಚಂದ್ರದೇವಃ ॥[3]ಅಭಿನವಗಣಧರ . . . ತ್ರಿಭುವನಜನ ವಿನುತಚರಣಸರಸಿರುಹಯುಗಂ ಶುಭಮತಿಕಾ . . . ರುಹವನಾರ್ಕ್ಕನೆಂಬುದು ವಸುಮತಿಯೊ ಳನನ್ತವೀರ್ಯ್ಯಸಿದ್ಧಾಂತಿಕರಂ ॥[4]

73 ವಾದಿವನದಹನಹುತವಹವಾದಿಮನೋ(ವಾದಿ)ಭವವಿಶಾಳಹರನಿಟಳಾಕ್ಷಂ ವಾದಿಮದರದನಬಿದುವಂ ಭೇದಿಪ ಮೃಗರಾಜಂ ಜಯತು ಶ್ರುತಕೀರ್ತ್ತಿ ಬುಧಂ ॥[5] ತತ್ಸಧರ್ಮ್ಮರು ॥ ಕವಿಗಮಕವಾದಿವಾಗ್ಮಿ ಗಳೆವೆಂಬರಂ ಗೆಲ್ದು ಕನಕನಂದಿತ್ರೈ

74 ವಿದ್ಯವಿಳಾಸಂ ತ್ರಿಭುವನಮಲ್ಲ ವಾದಿರಾಜಂ ದಲೆನಿಸಿದಂ ನೃಪಸಭೆಯೊಳು ॥[4] ಅವರ ಸಧರ್ಮ್ಮರು ॥ ಮನವಚನ ರೌ . . . ಗುಪ್ತಿಯೊಳನುನಯದಿಂ ತಳದು ಪಂಚಸಮಿತಿಯ ವಶದಿಂದನುವಶನಾದ ತಪೋನಿಧಿ ಮುನಿಚಂದ್ರಬ್ರತಿಪನಖಿಳರಾದ್ಧಾಂತ . . ॥[4]

75 ಅವರ ಸಿಷ್ಯರು ॥ ಪಿರಿದಂ ಪೊಗಳ್ವಡೇಂ ಗಳ ಪುರುಳುಂಟೇ ಮಾಡಲೆನ್ದು ಮುನಿಪತಿಯೆಂಬೀ ವರ ಚಿಂತಾಮಣಿ . . . ಕುರುಳಿ ಸುಸನ್ಮಾನಧ್ಯಾನಪುರುಳಿಯೆನಿಕ್ಕುಂ ॥[4] ತಪೋನುಷ್ಠಾನನಿಷ್ಠಿತರಾರೆಂದಡೆ ॥ ಕನ[ಕ]ಚಂದ್ರಮುನೀಂದ್ರನ ಪಾದಮಂ ನೆನೆವ ಭವ್ಯಸಮೂಹದ ಪಾಪಸಂಹನನ

76 ಮಪ್ಪುದು ತಪ್ಪದು ನಿಶ್ಚಯಂ ಮನ . . . . ನಿಚ್ಚಲುಂ ॥[6] ಅವರ ಸಧರ್ಮ್ಮರು ॥ ಮುನಿಯ . . . . ಅನವದ್ಯಾಚಾರನೆ ಜಿನಶಾಸನರಕ್ಷಾಮಣಿ ಶಾಂತನೇ ಸಕಳರಾಗದ್ವೇಷದೋಷಪ್ರಭಂಜನನುರ್ವ್ವಿನುತನೇ ಗುಣಪ್ರಣಯುತಂ ತಾನೆಂಬಿನಂ ವೀರ ಮೇದಿನಿಯೊ

77 . . . . . . ಧವಚಂದ್ರದೇವನೆಸೆದಂ ಚಾರಿತ್ರಚಕ್ರೇಶ್ವರಂ ॥[7] ತ . . . ರು ॥ ವರಶಾಸ್ತ್ರಾಂಭೋಧಿ ವರ್ದ್ಧನಹರಿಣಾಂಕಬಿರುದವಾದಿಮದವಿ . ಳ ನಿರುತಂ ತಾನೆನೆಲೆಸೆದಂ ಧರೆಯೊಳು ತ್ರೈವಿದ್ಯ ಬಾಳಚಂದ್ರಮುನೀಂದ್ರ ॥[4] ಅವರ ಸ . . . ॥ ವೃ ॥

78 . . . . ನಾಳ್ದಂ ಧರ್ಮಮನುಪೇಕ್ಷಿಸಿ ತಕ್ಕೆಡೆಗೀಯದಾಗಳುಂ ಪೀನನಿತಂಬಮಂ ಘನಕುಚದ್ವಯಮಂ ಮಱಿಗೊಣ್ಡುಮ್ಮಥೋದ್ಯಾನಮನೊಲ್ದು ಪೊಕ್ಕು ನೆಱಿ ನೀಲಪಟಾಶ್ರುತರಪ್ಪ ಯೋಗಿಗಳು ದಾನವಿನೋದನೊಳು ದೊರೆಗೆ ವಪ್ಪರೆ ಮಾಧವಚಂದ್ರದೇವನೊ . .[8] . . . . . ಸೆದ . . .

79 . . . . . . ಸತ್ಯಗಂಗಂ ಕುಡೆ ಕುರುಳಿಯೊಳಾದಂನದಾನ ಪ್ರಭಾವಿಸ್ತರದಿಂ ಶ್ರೀಬಾಳಚಂದ್ರಬ್ರತಿಪತಿ ಪಡೆದಂ ದಾನದಿಂ ಜೀಯನಲ್ಲುರ್ವ್ವರೆಯಂ ಸಂಪೂರ್ಣ್ಣಮಾಗಲ್ತಣಿಸಿದಮಿದುಬಲುಘೋದ್ಯಮ ಕ್ಷೀಣರಿದ್ಧಿಸ್ಫುರಿತಂ ಕಯ್ಗಣ್ಮಿ ಪೊಣ್ಮುತ್ತಿರೆ . . . . ಹಿ . . .

80 . . . . . . ಜ್ಯನಾದಂ ॥[9] ಅವರ ಸಧರ್ಮ್ಮರು ॥ ಚತುರಾಶ್ಯಕೋಟಿಕೂಟದೊಳತಿಶಯಮೆನಿಸಿರ್ದ್ದ ಕೊಪಣತೀರ್ತ್ಥದೊಳೀಗಳು ನುತಿಯಿಪ ವಡ್ಡಾಚಾರ್ಯ್ಯಬ್ರತಿಪತಿಯೇ ನೇಮಿದೇವರಿಂದಮೆ ಪೂಜ್ಯ॥[4] ಸ್ಥಾವರಜಂಗಮಮನಿತುಂ ಪಾವನಮಾದ . . . . . .

1 ಮತ್ತೇಭವಿಕ್ರೀಡಿತ;ಅಶುದ್ಧ
2 ಶಾರ್ದೂಲವಿಕ್ರೀಡಿತ
3 ಸ್ರಗ್ಧರೆ
4 ಕಂದ
5 ಕಂದ;ಅಪವಾದ
6 ದ್ರುತವಿಲಂಬಿತ
7 ಮತ್ತೇಭವಿಕ್ರೀಡಿತ
8 ಉತ್ಪಲಮಾಲೆ;ಅಶುದ್ಧ
9 ಮಹಾಸ್ರಗ್ಧರೆ

81 . . . . . . ಜಿಯೆನಿಸಿ ಬಾಳ್ವಡಿಗಳ ಜೀಯಂ ಶ್ರೀನೇಮಿದೇವರುದಿಯಿಸೆ ಶುಭದಂ ॥[1] ಅವರ ಸಧರ್ಮ್ಮರು ॥ ಅಧನಗ್ರ್ಗಾಶ್ರಿತರ್ಗ್ಗಿಷ್ಟಸಂತತಿಗೆ ಚಾತುರ್ವ್ವರ್ಣ್ಣಸಂಘಕ್ಕೆ ತಾನಧಿಕೋತ್ಸಾಹದಿನಿ . . ಲುಂಬಯಕೆಯಂ ಬೆರ್ಪ್ಪರ್ತ್ಥಮಂ ವಾಂಚ್ಛೆಯಂ ಬುಧಚಿಂತಾಮಣಿ ಮ . . . .

82 . . . . ರಿ ಕೂರ್ತ್ತಿತ್ತು ಮಾಧವಚಂದ್ರಂ ಪಡೆದಂ ಸಮಸ್ತಭುವನಪ್ರಸ್ತುತ್ಯಮಂ ಸ್ತುತ್ಯಮಂ॥[2] ಅವರ ಸಧರ್ಮ್ಮರು ॥ ಸಾಧಿಸಿ ಗುರೂಪದೇಶದೊಳಾಧಿಕ್ಯತೆಯಾಯ್ತು ಸಕಳಶಟ್ಕರ್ಮಗಳು ವೇದಾಂತರ್ಮ್ಮ . ಯದರಿಬಗ್ರ್ಗೋಧೂಮಘರಟ್ಟನೊಡನೆ ತೊಡರ್ವ್ವಮ . . ॥[1] ಶಾಕಿನಿ ಡಾ . . . . . .

83 . . . ಕಿನಿ ಚೋರಾರಿ ಮಾರಿದೆವ್ವೆಯರಿನಿತುಂ ಲೋಕಮಜಿಯಲ್ಕೆ ಬ . . ಯಾ ಸಕಳಮನಜಿಯೆ ಬಿರುದಂ ದೇವೇಂದ್ರನುಮಂ ॥[1] ಇಂತೆನಿಸಿ ನೆಗಳ್ತೆಯಂ ತಳೆದ ಶ್ರೀಮತ್ಪ್ರಭಾಚಂದ್ರಸಿದ್ಧಾಂತದೇವರ ಗುಡ್ಡ ಭುಜಬಳಗಂಗ ಹೆರ್ಮ್ಮಾಡಿ ಬರ್ಮ್ಮದೇವ ॥ ಬಳವದ್ವೈರಿಗಳಂ ಪಡಲ್ವಡಿಸಿ ಗೆಲ್ವ . . . . .

84 ನು ಮಾಣ್ಡನೇ ಚಲದಿಂದಂ ಪರಿಯಿಟ್ಟು ವೈರಿಪುರಮಂ ತತ್ಕೋಟೆಯಂ ತದುಮಹೀತಳಮಂ ಕೊಂಡು ಧರಿತ್ರಿ ಬಣ್ಣಿಸುವಿನಂ ಶ್ರೀಬಮ್ಮದೇವಂ ಮಹೀತಳಮಂ ತೋಳ್ವಲದಿಂ ನಿಮಿರ್ಚ್ಚಿದನಿದೇಂ ಹೆರ್ಮ್ಮಾಡಿ ಸೌರ್ಯ್ಯಾತ್ಮನೋ ॥[2] ಆತನ ಪಟ್ಟಮಹಾದೇವಿಯೆಂತೆಂದಡೆ ॥ ಜಿನೇಂದ್ರಪಾದಾಂಬುಜ ಮತ್ತಭೃಂಗೀ . . .

85 ಭೂಷಣಭೂಷಿತಾಂಗೀ ನಿತಂಬಿನೀನಾಂ ತಿಳಕಾಯಮಾನಾ ವಿರಾಜತೇ ಗಂಗಮಹಾಧಿದೇವೀ ॥[3] ವೃ॥ ನಿಜವೆನಿಪೀ ನೆಗರ್ತ್ತೆಯ ಮಹಾಸತಿಗುಚ್ಚವವಂ ನಿಮಿರ್ಚ್ಚುವಾತ್ಮಜರೆನಿಸಿರ್ದ್ದ ತಮ್ಮುತೊಡಹುಟ್ಟಿದ ರೊಪ್ಪುವ ಮಾರಸಿಂಗನುಂ ಸಜಯದೆ ಸತ್ಯಗಂಗನೃಪನುಂ ಕಲಿ ರಕ್ಕಸಗಂಗದೇವನುಂ ಭುಜಬಳಗಂಗ . . .

86 ಭುಜನುಮಾರ್ಜ್ಜಿಸಿ ಪೆರ್ಜ್ಜಸಮಂ ನಿರಂತರಂ ॥[4] ಗಜರಿಪುವಿಷ್ಟರಾಜಿವಿಭವೋದಯಪಾರ್ಶ್ವಜಿನೇಂದ್ರ ಪಾದಪಂಕಜಮದಭೃಂಗ ಗಂಗಕುಳಮಣ್ಡನದಣ್ಡಿತವೈರಿವರ್ಗ್ಗಭಾವಜನಿಭಮೂರ್ತ್ತಿ ದಿಗ್ವಳಯವರ್ತ್ತಿ ತಕೀರ್ತ್ತಿ ಸಮಸ್ತಧಾತ್ರಿಯೊಳ್ಭುಜಬಳಗಂಗಭೂಪ ನಿನಗಾರ್ದ್ದೊರೆ ಮಂಡಳಿಕ ಕ . . .[5]

87 ಆತನ ಪಟ್ಟಮಹಾದೇವಿ ॥ ಆಳುವರನನುಜವಟ್ಟಗೆ ಭೂಪಂಗೆ ಗಂಗವಾಡಿಗೆ ತಳೆದಳು ಪಟ್ಟಮನೆಂದಡೆ ಗಂಗನ ಪಟ್ಟಮಹಾದೇವಿಯಂತು ನೋಂತರುಮೊಳರೆ ॥[6] ವೃ ॥ ಮಾರಿಟ್ಟಾಶಾಂತಮಂ ಬಳ್ದಡಲಳೆದು ದಧಿಬ್ರಾತಮಂ ತೂಗೆ ಸಂದಾ ಮೇರುಕ್ಷೋಣೀಂದ್ರಮಂ ತ್ರಾಸಿನೊಳೆಣಿಸಿ ತರಂಗೊಂಡು

88 ನಕ್ಷತ್ರಮಂ ಪೇಳು ಆರಾನುಂ ಬಲ್ಲರೆ ಬಲ್ಲಡೆ ಪೊಗಳ್ಗೆಮ ವಿಶ್ವಂಭರಾಭಾರಂ ವೀರಶ್ರೀರಾ . ಲೀಡ ವಜ್ರದ್ರಢಿಮಘನಭುಜಸ್ತಂಭನಂ ಗಂಗ ನಿಂನಂ॥[7] ಅನ್ನೆಯವಾಗಿದೂದಿಸುವುದೇ ಮೊಲೆವೋ ಪ್ರಕಾಸಯೆಲ್ಲವೋ ರನ್ನವೆ ಹೆಂಡಿರೊಳು ಮನೆಗೋರ್ವ್ವರುದಾರೆಯರಣ್ಣ ಹುಟ್ಟರೇ ಹೊನ್ನಿಯ ವುಳ್ಳಡೇಂ ಜ

89 ಗದೊಳೋರ್ವ್ವಳೆ ಭಾಗಿಯೆ ತಾನೆ ಲೇಸೆ ಹುಃ ನನ್ನಿಯೊಳಿನ್ತು ಗರ್ಬ್ಬಿತೆಯರಾರ್ಗ್ಗಳ ಚಂದಲದೇವಿ ಯಂದದಿಂ ॥[8] ಶ್ರೀಮದ್ಭುಜಬಳಗಂ[ಗ]ದೇವಂಗಂ ಗಂಗಮಹಾದೇವಿಗಂ ಪುಟ್ಟಿದ ಸತ್ಯಗಂಗನ ಪ್ರತಾಪಮೆಂತೆನೆ ॥ ಜಸಮುದ್ಯದ್ಧವಳಾತಪತ್ರಮುಖಿಳಾಶಾದೇವತಾಪಾಂಗರಶ್ಮಿಸಹಸ್ರಚ

90 . . . ಗಜೇನ್ದ್ರರಿಪು ಪೀಠಂ ವಿಕ್ರಮಂ ತಾನದಾಗೆ ಸುಸಾಮ್ರಾಜ್ಯ ಲತಾಭಿವೃದ್ಧಿ ವಿಭವಂ ಮಯ್ವೆತ್ತಿರಲು ಬಲ್ಲಿದರ್ಬ್ಬೆಸಕೆಯ್ಯುತ್ತಿರೆ ಸತ್ಯಗಂಗನೆಸೆದಂ ವಿಶ್ವಾವನೀಭಾಗದೊಳು ॥[2] ಆತನರಸಿ ॥ ಪತಿ ಸತ್ಯಗಂಗ ದೇವಂ ಗಂ . . . . ದಾರಲಕ್ಷ್ಮಿ ತಾನೆನಿಸಿ . . . . . . ತಳೆದಳೇಂ ಪ

91 . . . . ಸದವರಾರೋರಾಣಿ ಕಂಚಲದೇವಿ ॥[1] ಭಾವಭವಂಗೆ ರೂಪು ಮದಸಾಮಜವೈರಿಗೆ ವಿಕ್ರ(ಮಕ್ರ)ಮಂ ಸುರೇಂದ್ರಾವನಿಜಕ್ಕೆ ದಾನಗುಣಮಬ್ಧಿಗೆ ಗುಣ್ಪಮರಾಚಳಕ್ಕೆ ಸಂಭಾವಿತ ಧೈರ್ಯಮ ಗ್ಗಲಿಪುದೆಂದಡೆ ಗಂಗಕುಭೃತುಕುಮಾರ . . . . . ಪಾಳಕಗೆ ದೊರೆಯಪ್ಪರೆ ಮಿಕ್ಕ ಕುಬ್ರಿತ್ಕುಮಾ . ಕ

92 .[9] . . ಯಿಂದಂ ಕ್ಷೀರಾಬ್ಧಿಯುಮಸವಸದಿಂ ಪೆರ್ಚ್ಚುವಂತೆ ಗಂಗಾನ್ವಯಮುಂ ಪಸರಿಸೆ ಪೆರ್ಚ್ಚುಗೆ ನಿನ್ನಿಂದಸದಳಮೌದಾರ್ಯ್ಯಶೌರ್ಯ್ಯ ಗಂಗಕುಮಾರಾ ॥[1] ಶ್ರೀಮನು ಮಹಾಮಂಡಳೇಶ್ವರನೆಱೆಯಂಗ ಹೊಯ್ಸಣದೇವನಳಿಯಂ ಗಂಡರದಾವಣಿ ಹುಸಿವರಸೂಲ ಮಾವನಗಂಧ್ದವಾರಣಂ ಹೆರ್ಮ್ಮಾಡಿದೇ ವನೆಡೆ

---

1 ಕಂದ
2 ಮತ್ತೇಭವಿಕ್ರೀಡಿತ
3 ಉಪೇಂದ್ರವಜ್ರ
4 ಚಂಪಕಮಾಲೆ;ಅಶುದ್ಧ
5 ಚಂಪಕಮಾಲೆ
6 ಕಂದ;ಅಪೂರ್ಣ
7 ಸ್ರಗ್ಧರೆ;ಅಶುದ್ಧ
8 ಉತ್ಪಲಮಾಲೆ;ಅಶುದ್ಧ
9 ಉತ್ಪಲಮಾಲೆ

93 ದೊಱೆಮ . . ಸಾಯಿರಮುಮಂ ಹರಿಗೆಯ ನೆಲೆವೀಡಿನೊಳು ಸುಖದಿನಾಳುತ್ತಿರ್ದ್ದು ಕುಂತಳಾಪು ರದೊಳು ಚೈತ್ಯಾಲಯಮಂ ಮಾಡಿ ದೇವರ ಪೂಜಾವಿಧಾನಕ್ಕಂ ಚಾತುರ್ವ್ವರ್ಣ್ಣಸಂಘಸಮುದಾಯ ಚತುಸ್ಸಮಯದಾಹಾರದಾನಕ್ಕಂ ಖಣ್ಡಸ್ಫುಟಿತಜೀರ್ಣ್ನೋದ್ಧಾರಕ್ಕಂ ಸಮು

94 ದಾಯಮುಖ್ಯಸ್ಥಾನ ಮಾಡಿ ಯೆಡೆದೊಱೆ ಮಂಡಲಿನಾಡ ಪ್ರಭುಗಾವುಣ್ಡುಗಳ ಕರೆಯಲಟ್ಟಿ ಧರ್ಮ್ಮ . ಮಾರಯ್ಕೆಯೆಂದು ಸಕವರ್ಷ ೯೮೯ನೆಯ ಪ್ಲವಂಗ ಸಂವತ್ಸರದ ಪುಶ್ಯ ಸು ೧೩ ದಶಿ ಗುರುವಾರ ವುತ್ತರಾಯಣಸಂಕ್ರಮಣದಂದು ತಂಮ ಗುರುಗಳು ಶ್ರೀಪ್ರಭಾಚಂದ್ರಸಿದ್ಧಾ .

95 ದೇವರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕ ಮಾಡಿ ಬಿಟ್ಟ ದತ್ತಿಯಾ ಗ್ರಾಮದುಭಯಸಾ . ಸರ್ವ್ವನ ಮಶ್ಯವಲ್ಲಿ ಹುಟ್ಟುವಾಯದಾಯ ಸುಂಕ ನಿಧಿನಿಕ್ಷೇಪಸರ್ವ್ವಭಾಧಾಪರಿಹಾರ ॥ ಮತ್ತ ರಾಜಸರ್ವ್ವಸ್ಯ ಸತ್ಯಗಂಗದೇವನೆಡೆಹಳ್ಳಿಯ ನೆಲೆವೀಡಿನೊಳು ಸುಖದಿಂ ರಾಜ್ಯಂ ಗೆಯ್ಯು .

96 ದ್ದಲ್ಲಿ ಕುರುಳಿಯತೀರ್ತ್ಥದಲು ಗಂಗಜಿನಾಲಯಮಂ ಮಾಡಿ ಸಕವರ್ಶ ೧೦೫೪ನೆಯ ನಂದನಸಂವ ತ್ಸರದ ಚೈತ್ರಸುಪುಣ್ಣಮಿಯಾದಿವಾರ ಸೋಮಗ್ರಹಣದಂದು ತಂನ ಗುರು(ಗುರು)ಗಳು ಶ್ರೀಮಾಧವ ಚಂದ್ರದೇವರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಬಿಟ್ಟ ದತ್ತಿಯರಿಗನ ಬಣ್ಣಿಯು . ರ

97 ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರ ಗಂಗಹೆರ್ಮ್ಮಾಡಿದೇವರ ಸಂನ್ನಿಧಿಯಲ್ಲಿ ಸರ್ವ್ವಾಧಿಕಾರಿ ಬಾಗಿಯ ಹೆಗ್ಗಡೆ ಲೊಕ್ಕಿಮಯ್ಯನ ಮಗ ಹೆಗ್ಗಡೆ ಚಂದಿಮಯ್ಯಂ ಕುರುಳಿಯ ತಂಮ ಗೌಡಿಕೆಯಂ ಕಲಿಯರ ಮಲ್ಲಿಸೆಟ್ಟಿ ಮಾಱಂಕೊಂಡು ಅರಸರ ಸಂನ್ನಿಧಿಯಲು ಬಾಳಚಂದ್ರದೇ

98 ವರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಬಿಟ್ಟರು ॥ ಮತ್ತ ಸಿರಿಯಮಸೆಟ್ಟಿಯುಮಾತನ ಮಕ್ಕಳು . . . . . . ಆತನ ಗೌಡಿಕೆಯ ನನ್ನಿಯರಸ ದೇವಪುಳ್ಳುಪುರದಲು ಬಾಳಚಂದ್ರದೇವರ್ಗ್ಗೆ ಧಾರಾಪೂರ್ವ್ವಕ ಮಾಡಿ ಕೊಟ್ಟರು ॥ ಅನ್ತುಭಯಗ್ರಾಮದ ॥

99 . . ಸಾಮ್ಯಸುಂಕಸಹಿತಸರ್ವ್ವಭಾಧಾಪರಿಹಾ . ಯ . . . .

100 . . . . . . ಲ್ಲಿ ಮೂಡ ಹೆಬೀಡ ಬೆಣಸುಗಲ್ಲು ಅಲ್ಲಿಂ ಮುಂದಾ . ಗುಣಯದ ತೆಂಕಲು ಅಲ್ಲಿಮು . . . . ಮೂಡ ಹೆಬ್ಬಿದಱು ಅಲ್ಲಿ ಮೂ . . . . ಮೂಡಣ ಕಿನರಲು ಅಲ್ಲಿ . . . .

101 ಡ್ಡೆಯ ಕಲ್ಸಱು ಅಲ್ಲಿ ಬದ ॥ ಕೆರೆಯ . . ಅಲ್ಲಿ ಬಡಗ . . . . ಅಲ್ಲಿ ಮೂಡ ನಟ್ಟಕ . ಅಲ್ಲಿ ಮೂಡಲು . . ಕೆಱೆಯಡೆಯ . . . . ನ . ರಣಸವಣ . . . ಅಲ್ಲಿಮು . . . . . ಅಲ್ಲಿ ಮೂಡ ಸೋಮಯ್ಯನ ಬಿಣ್ಣರೆಯೂರ . . . .

102 ಗೊಡಕಲ್ಲು ಸಱು ಅಲ್ಲಿ ಬಡಗ . . . . . ಡೊಳಗಣ ವೋಣಿ ಅಲ್ಲಿಂ ಪಡುವಣ ಮೂಲೆ ಕೆಂಗಲ್ಲು ಅಲ್ಲಿಂ ಹಡುವಹಬೀರತೆಯಸಾ . . . . ಪಡುವಣ ಹಲವ . . ಗಲ್ಲು ಅಲ್ಲಿಂ ಪಡುವ ನೆ . . ಳ ದೊಳಗಳೆರಡುಂ ಮೊಱಡಿಯೆಡೆ . . ಸರಿಮ ಅಲ್ಲಿಂ ಪಡುವಣ ನೀಱುವುಂ . .

103 ನೆಗಲ್ಲು ಮಹಾನದಿ ॥ ಸಾಮಾನ್ಯೋಯಂ ಧರ್ಮಸೇತುರ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ಸರ್ವ್ವಾನೇತಾನು ಭಾವಿನಃ ಪಾರ್ಥಿವೇಂದ್ರಾನ್ಭೂಯೋ ಭೂಯೋ ಯಾಚತೇ ರಾಮಚಂದ್ರಃ॥[1] ದಯೆಯಿಂದಿಂತಿದನೆಯ್ದೆ ಕಾವ ಪುರುಷರ್ಗ್ಗಾಯುಂ ಮಹಾಶ್ರೀಯುಮಕ್ಕೆ ಯಿದಂ ಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರೋರ್ವ್ವಿಯೊ

104 ಳು ಬಾಣರಾಸಿಯೊಳೇಳ್ಕೋಟಿ ಮುನೀಂದ್ರರುಂ ಕವಿಲೆಯಂ ವೇದಾಢ್ಯರಂ ಕೊಂದುದೊಂದಯಸಂ ಸಾರ್ಗ್ಗುಮಿದೆಂದು ಸಾರಿಪುದುದೀ ಶೈಳಾಕ್ಷರಂ ಧಾತ್ರಿಯೊಳು ॥[2] . . . .

69 (VII ಶಿವ 65)

ಪುರಲೆ

ಅದೇ ದೇವಾಲಯದಲ್ಲಿ ಲಿಂಗದ ಪಾಣಿವಟ್ಟದ ಮೇಲೆ

This worn out and damaged record belongs to the reign-period of the Hoysaḷa Ballāḷa and is dated Raktākshi, Bhādrapada śu.13, Sunday. The date may correspond with Sunday, September 2, 1324 A.D. during the reign of Ballāḷa III.

1 ಶಾಲಿನಿ 2 ಮತ್ತೇಭವಿಕ್ರೀಡಿತ

It seems to state that all the *prabhu-gāvuṇḍus* re-granted some grant to Nēmichandra-bhaṭṭārakadēva of Kuntalāpura with the permission of *mahāpradhāna*, *hiriya-heḍeya* Asavara-Mārayya.

1 ರಕ್ತಾಕ್ಷಿಸಂವತ್ಸರದ ಭಾದ್ರಪದ ಸುಧ ೧೩ ಆ ಸ್ವಸ್ತಿ ಶ್ರೀವೀರಬಲ್ಲಾಳದೇವರು [ದೋರ]ಸಮುದ್ರದ ನೆಲೆವೀಡಿನಲು ಸುಖದಿಂ ರಾಜ್ಯಂ ಗೆಯ್ಯುತ್ತಿರೆ

2 ಶ್ರೀಮನು ಮಹಾಪ್ರಧಾನ ಹಿರಿಯಹೆಡೆಯ ಅಸವರ ಮಾರಯ್ಯಂಗಳ ಸಂನ್ನಿಧಾನದಲು . . . ದಂಣ್ನಾಯಕ ವಿಷು . ಯ ಹೆಮಗಾವುಂಡ

3 ಹಡವಳ ಕಾಳಯ್ಯ ಗಂಗಗಾವುಂಡ ಬಪ್ಪಗಾವುಂಡ ಗಾಯಿಗಾವುಂಡ ಮಾಂಚಗಾವುಂಡ ಲಖಗಾವುಂ ಡುಗಳು ಬಯಿಚಯ್ಯ ಹೊಂನಯ್ಯಮುಖ್ಯವಾದ

4 ಸಮಸ್ತ ಪ್ರಭುಗಾವುಂಡುಗಳು ತಂಮಗಾಗಿ . ಕುಂತಳಾಪುರದಲ್ಲಿ ಸದಾಚಾರ್ಯ್ಯರಪ್ಪ ನೇಮಿಚಂದ್ರ ಭಟ್ಟಾರಕದೇವರಿಗೆ ನಾಳುಪ್ರಭು . . ಸಾವಂತ

5 ಮಾರಯ್ಯನು ವಿಚಾರಿಸಿ . . . ಕಾಳಗಾವುಂಡ . . . . . . ಮಯಣಪೆಮ್ಮಲ . ದಿಯರಂ ಕಣ್ಣು ತವ . . . . ಬರದ ಶಿಲಾಶಾಸನ

6 ವಂ ತೊಡದು ಬಳಾತ್ಕಾರದಿ ತಂಮ ಭಕ್ತಿಯಾಗೆ ಸಲುತ್ತ . . . . . . ಯ ಬೆಣ್ಣವಳ್ಳಿಯಲ್ಲಿ ಮೂ

7–8 (ಸವೆದಿದೆ.)

9 ಯ ಕೊಂಡು ನಾಳ್ಪ್ರಭುಗಳು ಅಧಿಕಾರಿ ಸಾವಂತ ಮಾರಯ್ಯನುಂ ಪುನದ್ಧಾರೆಯಾಗಿ ನೇಮಿಚಂದ್ರ ಭಟ್ಟಾರಕದೇವರ ಕಾಲಂ ತೊಳೆದು ಧಾರಾಪೂರ್ವ್ವಕವಾಗಿ . . . ಶಿಲಾಶಾಸನವಂ ಬರೆದು ಬೆನವಸೆಯ ದೊಡಿಕೆಯರೆವನೆ . . . . ವಾರಣಾಸಿ ಕುರುಕ್ಷೇತ್ರ

